Editor: **NITYANANDASWAMI** Publisher: **U. BASAVARAJA** RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ

ಸಂಪುಟ–18 | ಸಂಚಿಕೆ–38 | ಸೆಪ್ಟೆಂಬರ್ 16–22, 2024 | ಪುಟ 16 | ರೂ.10/–
Volume-18 | Issue-38 | September 16-22, 2024 | Pages:16 | Price: 10/-



ಲಾಲ್ ಸಲಾಮ್
ಕಾಮ್ರೇಡ್ ಸೀತಾರಾಮ್



ಕಾಕಿನಾಡದಿಂದ ದೆಹಲಿಯವರೆಗೆ




ದೇಶ ವಿದೇಶಗಳ ಗಣ್ಯರ ಶ್ರದ್ಧಾಂಜಲಿ

ದುಃಖದಾಯಕ ವಿದಾಯ

ಪಾಶ್ಚಾತ್ಯ ಪ್ರಜಾತಂತ್ರವೀಗ ಅಸಂಬದ್ಧ ಪರಿಸ್ಥಿತಿಯಲ್ಲಿ

ತಾಯಿ-ಮಕ್ಕಳ ಆರೋಗ್ಯ ಸಂಬಂಧಿ ಜಾಹಿರಾತುಗಳು ಸುಳ್ಳು ಪ್ರಚಾರಗಳು ಮತ್ತು ವೈಜ್ಞಾನಿಕ ಸತ್ಯಗಳು


ಮಕ್ಕಳು ಬಹಳ ಇಷ್ಟ ಪಟ್ಟು ತಿನ್ನುವ 'ಕಿಂಡರ್ ಜಾಯ್' ಎಂಬ ಚಾಕಲೇಟ್‌ನಲ್ಲಿ ಮಕ್ಕಳ ಬೆಳವಣಿಗೆಗೆ ಅಗತ್ಯವಾದ 'ವಿಟಮಿನ್ 12' ಸೇರಿದಂತೆ ನಾನಾ ಬಗೆಯ ಪೋಷಕಾಂಶಗಳು ದೊರೆಯುತ್ತವೆ ಎಂದು ಇಟಲಿ ಮೂಲದ ಆ ಕಂಪನಿಯ ಜಾಹಿರಾತುಗಳು ಸಾರುತ್ತವೆ. ಆದರೆ ವಿಶ್ವ ಆರೋಗ್ಯ ಸಂಸ್ಥೆ ಈ ಕಿಂಡರ್ ಜಾಯ್ ಚಾಕಲೇಟ್ ತಿನ್ನುವುದರಿಂದ 10 ವರ್ಷದ ಮಕ್ಕಳಲ್ಲಿ ಸಾಲ್ಮೊನೆಲ್ಲಾ ಎಂಬ (ಬ್ಯಾಕ್ಟೀರಿಯಾ) ಸೋಂಕು (salmonella poisoning) ಉಂಟಾಗಲಿದೆ ಎಂದು ಎಚ್ಚರಿಕೆ ನೀಡಿದೆ. ಮಕ್ಕಳು ಹಾಗೂ ಗರ್ಭಿಣಿ-ಬಾಣಂತಿಯರು, ತಾಯಂದಿರ ಆರೋಗ್ಯ ರಕ್ಷಣೆಗೆ ಸಂಬಂಧಿಸಿದಂತೆ ಪತ್ರಿಕೆ-ಟಿವಿ ಮುಂತಾದವುಗಳಲ್ಲಿ ನಾವು ಹತ್ತಾರು ಜಾಹಿರಾತುಗಳನ್ನು ನೋಡುತ್ತೇವೆ. ಅವು ಮಕ್ಕಳ ಆರೋಗ್ಯಕರ ಬೆಳವಣಿಗೆ ಮತ್ತು ಜನರ ಆರೋಗ್ಯ ರಕ್ಷಣೆಗೆ ಸಂಬಂಧಿಸಿದಂತೆಯೂ ನಾನಾ ಪ್ರಚಾರಗಳನ್ನು ಮಾಡುತ್ತವೆ. ಈ ಪ್ರಚಾರಗಳಲ್ಲಿ ಸತ್ಯಾಂಶವೆಷ್ಟು? ಸುಳ್ಳುಗಳೆಷ್ಟು? ಎಂಬ ಬಗೆಗೆ ನಾವು ಖಾತರಿ ಪಡಿಸಿಕೊಳ್ಳಬೇಕಿದೆ. ಈ ದೃಷ್ಟಿಯಿಂದ ಖ್ಯಾತ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞರು, ತಜ್ಞ ವೈದ್ಯರೂ ಆದ ಡಾ.ಎ.ಸಾವಿತ್ರಿಯವರೊಡನೆ ಒಂದು ಸಂದರ್ಶನ ಮುಂದುವರಿದ ಭಾಗ.



ಡಾ.ಎ.ಸಾವಿತ್ರಿಯವರ ಸಂದರ್ಶನ
ಸಂದರ್ಶಕರು-ಆರ್. ರಾಮಕೃಷ್ಣ

ಪ್ರಶ್ನೆ: ಮಕ್ಕಳ ಬುದ್ಧಿವಂತಿಕೆ(ಐಕ್ಯೂ) ಹೆಚ್ಚಿಸಲು, ನೆನಪಿನ ಶಕ್ತಿ ಹೆಚ್ಚಿಸಲು ಯಾವುದಾದರೂ ಔಷಧಿ ಅಥವಾ ಟಾನಿಕ್ ಇದೆಯೇ?

ಡಾ.ಎ.ಸಾವಿತ್ರಿ: ಮಕ್ಕಳ ಬುದ್ಧಿವಂತಿಕೆ(ಐಕ್ಯೂ) ಹೆಚ್ಚಿಸುವಂತಹ, ನೆನಪಿನ ಶಕ್ತಿ ಹೆಚ್ಚಿಸುವಂತಹ ಯಾವುದೇ ಟಾನಿಕ್, ಔಷಧಿ ಇಲ್ಲ. ತಾಯಿಯ ಹಾಲು ಕುಡಿದು ಬೆಳೆದ ಮಕ್ಕಳಲ್ಲಿ ಸಹಜವಾಗಿ ಬುದ್ಧಿವಂತಿಕೆ ಹೆಚ್ಚಾಗಿರುತ್ತದೆ. ನೆನಪಿನ ಶಕ್ತಿ ಚೆನ್ನಾಗಿ ಇರಬೇಕು ಎಂದರೆ ಮಕ್ಕಳು ಅಥವಾ ವ್ಯಕ್ತಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯವಾಗಿರಬೇಕು. ಹೆಣ್ಣು ಮಕ್ಕಳಲ್ಲಿ ಹಾರ್ಮೋನ್‌ಗಳ ವ್ಯತ್ಯಾಸದಿಂದ ಮುಟ್ಟಾಗುವಾಗ ಹೆಚ್ಚು ರಕ್ತಸ್ರಾವ ಆಗಿ ಹುಡುಗಿ ರಕ್ತ ಹೀನತೆಯಿಂದ ಬಳಲುತ್ತಿರಬಹುದು. ಆಗ ಆಕೆಗೆ ಶಿಕ್ಷಣದ ಬಗೆಗೆ ಸರಿಯಾಗಿ ಗಮನಕೊಡಲಾಗದೇ,



ಏಕಾಗ್ರತೆ ಸಾಧಿಸಲಾಗದೇ ನೆನಪಿನ ಸಮಸ್ಯೆ ತಲೆದೋರಬಹುದು. ಆಗ ಆ ಹುಡುಗಿಗೆ ರಕ್ತಹೀನತೆಯ ನಿವಾರಣೆಗೆ ಅಗತ್ಯ ಚಿಕಿತ್ಸೆಯನ್ನು ನೀಡಬೇಕಾಗುತ್ತದೆ. ವೈದ್ಯರು ಸೂಕ್ತ ಆಹಾರ, ಟಾನಿಕ್ ಅಥವಾ ಔಷಧಿಯನ್ನು ಸೂಚಿಸುತ್ತಾರೆ.

ಪ್ರಶ್ನೆ: ಸೊಳ್ಳೆಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಲು 'ಗುಡ್‌ನೈಟ್', 'ಆಲ್‌ಔಟ್' ಮುಂತಾದ ಹೊಗೆರಹಿತ ಸೊಳ್ಳೆನಾಶಕಗಳು, ಸೊಳ್ಳೆಬತ್ತಿಗಳು, ಸೊಳ್ಳೆ ಪರದೆಗಳು ಇವುಗಳಲ್ಲಿ ಉತ್ತಮವಾದದ್ದು ಯಾವುದು?

ಡಾ.ಎ.ಸಾವಿತ್ರಿ: ಡೆಂಗ್ಯೂನಂತಹ ಅಪಾಯಕಾರಿ ಕಾಯಿಲೆಗಳು ಬರದಂತೆ ತಡೆಯಲು ಸೊಳ್ಳೆಗಳಿಂದ ನಮ್ಮನ್ನು ರಕ್ಷಿಸಿಕೊಳ್ಳುವುದು ಅವಶ್ಯಕ. ಮೂಲಭೂತವಾಗಿ ಮನೆಯ ಸುತ್ತಮುತ್ತಲು ನೀರು ನಿಲ್ಲದಂತೆ ಎಚ್ಚರವಹಿಸುವ ಮೂಲಕ ಸೊಳ್ಳೆಗಳ ಉತ್ಪಾದನೆಯಾಗದಂತೆ ತಡೆಯಬೇಕು. ಪರಿಸರವನ್ನು ಶುಚಿಯಾಗಿ ಇಟ್ಟುಕೊಳ್ಳಬೇಕು. ಮನೆಯ ಒಳಗೆ ಸೊಳ್ಳೆ ಕಚ್ಚದಂತೆ ಸೊಳ್ಳೆ ಪರದೆ ಬಳಸುವುದು ಉತ್ತಮ. ಸೊಳ್ಳೆನಾಶಕಗಳು ಸೊಳ್ಳೆಗಳು ಮನೆಯ ಒಳಗೆ ಬರದಂತೆ ಅಥವಾ ಬಂದ ಸೊಳ್ಳೆಗಳು ಹೊರಗೆ ಹೋಗುವಂತೆ ಅಥವಾ ಸಾಯುವಂತೆ ಮಾಡುತ್ತವೆ. ಆದರೆ ಸೊಳ್ಳೆಬತ್ತಿಗಳನ್ನು ಮುಚ್ಚಿದ ಕೊಠಡಿಯಲ್ಲಿ ಹಚ್ಚಬಾರದು. ಕಿಟಕಿ, ಬಾಗಿಲುಗಳನ್ನು ತೆರೆದು ಗಾಳಿಯಾಡಲು ಅವಕಾಶ ಮಾಡಿಕೊಡಬೇಕು. ಇಲ್ಲವಾದಲ್ಲಿ ಸೊಳ್ಳೆಬತ್ತಿಯ ಹೊಗೆ ಅಪಾಯವನ್ನುಂಟು ಮಾಡುತ್ತದೆ. ಸೊಳ್ಳೆಬತ್ತಿ ಉರಿದ ನಂತರದ ಬೂದಿಯೂ ಅಪಾಯಕಾರಿಯೇ. ಅದನ್ನು ಸರಿಯಾಗಿ ವಿಲೇವಾರಿ ಮಾಡಬೇಕು. ಮನೆಯ ಹೊರಗೆ ಸೊಳ್ಳೆ ಇರುವ ಜಾಗದಲ್ಲಿ ಓಡಾಡ ಬೇಕಾದಲ್ಲಿ ಅಥವಾ ಕೆಲಸ ಮಾಡಬೇಕಾಗಿ ಬಂದಲ್ಲಿ ಮೈತುಂಬ ಇರುವಂತಹ ಉಡುಪುಗಳನ್ನು ತೊಡುವುದು ಒಳ್ಳೆಯದು ಮತ್ತು ಉಡುಪಿನಿಂದ ಹೊರಗಿರುವ ದೇಹದ ಭಾಗಕ್ಕೆ ಸೊಳ್ಳೆ ನಿವಾರಕ ಕ್ರೀಮುಗಳಾದ ಡೀಟ್(Deet), ಐಆರ್3535 ಮುಂತಾದವುಗಳನ್ನು ಹಚ್ಚಬಹುದು.

ಸಣ್ಣ ಮಕ್ಕಳಿಗೆ ಸೊಳ್ಳೆ ಕಚ್ಚದಂತೆ ಮಾಡಲು ಸೊಳ್ಳೆಪರದೆ ಕಟ್ಟುವುದು ಒಳ್ಳೆಯದು. ಅಗತ್ಯಬಂದಲ್ಲಿ 6 ತಿಂಗಳ ನಂತರ ಮಗುವಿಗೆ ಕ್ರೀಮುಗಳನ್ನು ಬಳಸಬಹುದು.

ಪ್ರಶ್ನೆ: ಜಾಹಿರಾತುಗಳಿಂದ ಆಗಬಹುದಾದ ಆರೋಗ್ಯಹಾನಿಗೆ ಸಂಬಂಧಿಸಿ ಗ್ರಾಹಕರ ರಕ್ಷಣೆಗೆ ಇರುವ ಕಾನೂನುಗಳ ಬಗೆಗೆ ತಿಳಿಸಿ.

ಡಾ.ಎ.ಸಾವಿತ್ರಿ: ಮಗುವಿಗೆ ತಾಯಿಯ ಹಾಲೇ ಶ್ರೇಷ್ಠ. ಶಿಶು ಆಹಾರದ ಉತ್ಪನ್ನಗಳ ಕಂಪನಿಗಳು ತಾಯಿಯ ಹಾಲಿಗಿಂತ ತಮ್ಮ ಕೃತಕ ಶಿಶು ಆಹಾರವೇ ಶ್ರೇಷ್ಟ ಎಂದು ಬಿಂಬಿಸುತ್ತಿವೆ. ಭಾರತದಲ್ಲಿ ಸ್ತನಪಾನವನ್ನು ಪ್ರೋತ್ಸಾಹಿಸಲು ಕೆಲಸ ಮಾಡುವ ಸಂಸ್ಥೆಯಾದ ಬಿಪಿಎನ್‌ಐ ಎಂಬ ಸಂಸ್ಥೆಯು ಸರಕಾರದ ಮೇಲೆ ಒತ್ತಡ ತಂದು 'ಐಎಂಎಸ್ ಕಾಯ್ದೆ-1992' ಜಾರಿಗೆ ಬಂದಿದೆ. ಈ ಕಾಯ್ದೆಗೆ 2003ರಲ್ಲಿ ಕೆಲವು ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಈ ಕಾಯ್ದೆಯ ಪ್ರಕಾರ ಕಂಪನಿಗಳು ತಮ್ಮ ಶಿಶು ಆಹಾರ ಉತ್ಪನ್ನಗಳ ಜಾಹಿರಾತಿನಲ್ಲಿ ತಾಯಿ ಮಗುವಿನ ಚಿತ್ರವನ್ನು ಬಳಸುವಂತಿಲ್ಲ. ಜಾಹಿರಾತಿನಲ್ಲಿ ವೈದ್ಯರನ್ನು ಸಹ ಬಳಸುವಂತಿಲ್ಲ. (ಇಂತಹ ಜಾಹಿರಾತುಗಳಲ್ಲಿ ಕಾಣಿಸಿಕೊಳ್ಳವವರು ನಟರಷ್ಟೆ. ನಿಜವಾದ ವೈದ್ಯರಲ್ಲ.) ವೈದ್ಯರು ಇಂತಹ ಕೃತಕ ಶಿಶು ಆಹಾರಗಳನ್ನು ಬಳಸಿ ಎಂದು ಶಿಫಾರಸ್ಸು ಮಾಡುವಂತಿಲ್ಲ. ವೈದ್ಯಕೀಯ ಸಂಸ್ಥೆಗಳು ತಮ್ಮ ಕಾರ್ಯಕ್ರಮಗಳಿಗೆ ಇಂತಹ ಶಿಶು ಆಹಾರ ಉತ್ಪನ್ನಗಳ ಕಂಪನಿಗಳ ಪ್ರಾಯೋಜಕತ್ವ ಪಡೆಯುವಂತಿಲ್ಲ. ಇಂತಹ ಕಂಪನಿಗಳ ಪ್ರಾಯೋಜಕತ್ವದ ಕಂಪನಿಗಳಲ್ಲಿ ವೈದ್ಯರು ಭಾಗವಹಿಸುವಂತಿಲ್ಲ.


ಭಾರತದಲ್ಲಿ 5 ವರ್ಷದೊಳಗಿನ ಮಕ್ಕಳ ಸಾವು ವ್ಯಾಪಕವಾಗಿದೆ. ಜನರು ಜಾಹಿರಾತುಗಳಿಗೆ ಮರುಳಾಗಿ ತಾಯಿಯ ಹಾಲನ್ನು ತಪ್ಪಿಸಿ ಮಕ್ಕಳಿಗೆ ಕೃತಕ ಶಿಶು ಆಹಾರ ಕೊಡುವುದರಿಂದ ಮಗುವಿಗೆ ನ್ಯುಮೋನಿಯಾ, ವಾಂತಿ-ಬೇಧಿ ಮುಂತಾದ ಸಮಸ್ಯೆಗಳುಂಟಾಗಿ ಮಕ್ಕಳ ಸಾವುಗಳು ಸಂಭವಿಸುತ್ತಿವೆ. ದುಡ್ಡಿಗೋಸ್ಕರ ಕಂಪನಿಗಳು ನಡೆಸುವ ಇಂತಹ ಸುಳ್ಳು ಪ್ರಚಾರಗಳ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸಬೇಕು.

ಪ್ರಶ್ನೆ: ಬಿಸಿಲು, ಚಳಿ, ಗಾಳಿ, ಧೂಳುಗಳಿಂದ ಚರ್ಮವನ್ನು ರಕ್ಷಿಸಿಕೊಳ್ಳಲು ಸೂಕ್ತ ವೈದ್ಯಕೀಯ ವಿಧಾನವನ್ನು ತಿಳಿಸಿ. ಜಾಹಿರಾತುಗಳಲ್ಲಿ ತೋರಿಸಲಾಗುವ ಕ್ರೀಮುಗಳಿಂದ ಈ ವಿಷಯದಲ್ಲಿ ಪ್ರಯೋಜನವಿದೆಯೆ?

ಡಾ.ಎ.ಸಾವಿತ್ರಿ: ಬೆಳಿಗ್ಗೆ 11 ರಿಂದ ಸಂಜೆ 4 ಗಂಟೆಯ ನಡುವಿನ ಸುಡು ಬಿಸಿಲಿನಲ್ಲಿ ಓಡಾಡುವ, ಕೆಲಸ ಮಾಡುವ ಅಗತ್ಯ ಇರುವವರು ಬಿಸಿಲಿನಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಛತ್ರಿಯನ್ನು ಬಳಸಬಹುದು. ಅಗತ್ಯವಿರುವವರು ವೈದ್ಯರ ಸಲಹೆಯ ಮೇರೆಗೆ ಸನ್‌ಸ್ಕೀನ್ ಲೋಷನ್ ಅನ್ನು ಬಳಸಬಹುದೇ ಹೊರತು, ಜಾಹಿರಾತುಗಳಲ್ಲಿ ಬರುವ ಕ್ರೀಮುಗಳನ್ನಲ್ಲ. ಬಿಸಿಲು, ಗಾಳಿಗಳಿಂದ ಚರ್ಮವನ್ನು ರಕ್ಷಿಸಿಕೊಳ್ಳಲು ನೈಸರ್ಗಿಕ ಮಾಸ್ಚರೈಸರ್‌ಗಳನ್ನು ಬಳಸಬಹುದು. ಅಂದರೆ ಕೊಬ್ಬರಿ ಎಣ್ಣೆ, ತುಪ್ಪ ಇತ್ಯಾದಿ. ಸ್ನಾನದ ನಂತರ ಚರ್ಮಕ್ಕೆ ಕೊಬ್ಬರಿ ಎಣ್ಣೆ ಹಚ್ಚಿ ಆ ನಂತರ ನೀರಿನಿಂದ ತೊಳೆದು, ಬಟ್ಟೆಯಿಂದ ಒರೆಸಿಕೊಂಡರೂ ಕೊಬ್ಬರಿ ಎಣ್ಣೆಯ ತೇವಾಂಶ ಚರ್ಮದಲ್ಲಿ ಉಳಿದು ಚರ್ಮವನ್ನು ಚಳಿಯಿಂದ ರಕ್ಷಿಸುತ್ತದೆ. ತುಟಿಗಳಿಗೆ ತುಪ್ಪವನ್ನು ಹಚ್ಚಬಹುದು. ಚಳಿಯಿಂದ ದೇಹದ ರಕ್ಷಣೆಗೆ ಸ್ವೆಟರ್‌ಗಳು ಮುಂತಾದ ಬೆಚ್ಚನೆಯ ಉಡುಪುಗಳನ್ನು ತೊಡಬೇಕು. ಧೂಳಿನಿಂದ ಚರ್ಮದ ರಕ್ಷಣೆ ಶುದ್ಧವಾದ ನೀರಿನಲ್ಲಿ ಚರ್ಮವನ್ನು ತೊಳೆದುಕೊಳ್ಳುವುದರಿಂದ ಸಾಧ್ಯ.

ಪ್ರಶ್ನೆ: ಚರ್ಮದ ಬಣ್ಣವನ್ನು ಸೌಂದರ್ಯವರ್ಧಕ ಕ್ರೀಮುಗಳಿಂದ ಬೆಳ್ಳಗೆ ಮಾಡಿಕೊಳ್ಳಲು ಸಾಧ್ಯವೇ?

ಡಾ.ಎ.ಸಾವಿತ್ರಿ: ಕಪ್ಪು ಬಣ್ಣ ಕೀಳಲ್ಲ. ಬಿಳಿ ಬಣ್ಣ ಶ್ರೇಷ್ಟ ಅಲ್ಲ. ಮೂಲಭೂತವಾಗಿ ಈ ವಿಚಾರವನ್ನು ಅರ್ಥಮಾಡಿಕೊಳ್ಳಬೇಕು. ಚರ್ಮದ ಬಣ್ಣ ನಿರ್ಧಾರವಾಗುವುದು ವಂಶವಾಹಿಗಳಿಂದ. ಮಗು ಬೆಳ್ಳಗೆ ಹುಟ್ಟಬೇಕು ಎಂದು ಕೆಲವರು ಗರ್ಭಿಣಿಯರಿಗೆ ಕೇಸರಿಯನ್ನು ಹಾಲಿನಲ್ಲಿ ಬೆರೆಸಿ ಕೊಡುತ್ತಾರೆ. ಆದರೆ ಇದರಿಂದ ಪ್ರಯೋಜನ ಇಲ್ಲ. ಜಾಹಿರಾತುಗಳಲ್ಲಿ ತೋರಿಸಲಾಗುವ ಸೌಂದರ್ಯವರ್ಧಕ ಕ್ರೀಮುಗಳನ್ನು ತುಂಬಾ ವರ್ಷಗಳ ಕಾಲ ಬಳಸಿದರೆ ಚರ್ಮದೊಳಗಿನ 'ಮೆಲನಿನ್ ಪಿಗ್ಮೆಂಟ್'ಗೆ ಹಾನಿಯಾಗಿ ಚರ್ಮ ರೋಗಗಳು ಬರಬಹುದು. ಚರ್ಮವು ನೀಲಿ ಮಿಶ್ರಿತ ಕಂದು ಬಣ್ಣಕ್ಕೆ ತಿರುಗಬಹುದು. ಉತ್ತಮ ಆಹಾರ, ಚೆನ್ನಾಗಿ ನೀರು ಕುಡಿಯುವುದು, ಒಳ್ಳೆಯ ವ್ಯಾಯಾಮ ಇವೇ ಚರ್ಮದ ಆರೋಗ್ಯ ಮತ್ತು ಸೌಂದರ್ಯವನ್ನು ಕಾಪಾಡಿಕೊಳ್ಳಲು ಇರುವ ಸರಿಯಾದ ದಾರಿ.







ಜನಶಕ್ತಿ ಕನ್ನಡ ವಾರಪತ್ರಿಕೆ | ಸೆಪ್ಟೆಂಬರ್ 16-22, 2024 | 2 | September 16–22, 2024 | JANASHAKTHI KANNADA VARA PATRIKE

ಅಗಲಿದ ಕ್ರಾಂತಿಕಾರಿ ಯೋಧನಿಗೆ ಅಕ್ಷರ ನಮನ

ಸಂಪಾದಕೀಯ

ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ಯ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಸೀತಾರಾಂ ಯೆಚೂರಿ ಅವರ ಅಕಾಲಿಕ ಅಗಲಿಕೆ ಅತ್ಯಂತ ನೋವಿನ ವಿಷಯ. ದೇಶದ ಜಾತ್ಯತೀತ ಪ್ರಜಾಪ್ರಭುತ್ವನ್ನೇ ಬುಡಮೇಲು ಮಾಡಲು ಹೊರಟಿರುವ ಕೋಮುವಾದಿ–ಕಾರ್ಪೋರೇಟ್ ಕೂಟದ ವಿಜೃಂಭಣೆಯ ಈ ಕಾಲದಲ್ಲಿ ಕಾಮ್ರೇಡ್ ಸೀತಾರಾಮ ಯೆಚೂರಿಯವರ ಪ್ರಖರ ವಿಶ್ಲೇಷಣೆ, ವಿಚಾರಧಾರೆ, ವಿಶಿಷ್ಟ ಮಾರ್ಗದರ್ಶನ ತುಂಬಾ ಅವಶ್ಯಕವಾಗಿತ್ತು.

1974ರಲ್ಲಿ ವಿದ್ಯಾರ್ಥಿ ಚಳವಳಿಗೆ ಧುಮುಕಿ ಐದು ದಶಕಗಳ ಕಾಲ ಶೋಷಿತ ವರ್ಗದ ವಿಮೋಚನೆಗಾಗಿ ಶ್ರಮಿಸುತ್ತಿರುವ ಕಮ್ಯೂನಿಸ್ಟ್ ಚಳುವಳಿಯಲ್ಲಿ ದಢವಾದ ಹೆಜ್ಜೆಗಳನ್ನು ಹಾಕಿ, ಚಳುವಳಿಯ ಮುಂಚೂಣಿ ನಾಯಕನಾಗಿ ಹೊಣೆಗಾರಿಕೆ ನಿರ್ವಹಿಸುತ್ತಿದ್ದ ಕಮ್ಯೂನಿಸ್ಟ್ ಚಳುವಳಿಯ ಒಬ್ಬ ಸಮರ್ಥ ಯೋಧ ಸೆಪ್ಟೆಂಬರ್ 12, 2024ರಂದು ನಿಧನರಾದರು. ಅಧ್ಯಯನ, ಆಳವಾದ ಅಧ್ಯಯನ, ವಿಶ್ಲೇಷಣೆ, ನಿಖರವಾದ–ಪ್ರಖರವಾದ ವಿಶ್ಲೇಷಣೆ, ಇದು ಯೆಚೂರಿಯವರ ವಿಶೇಷ. ಹೋರಾಟದ ಕೆಚ್ಚು ಸೇರಿದಂತೆ ಹಲವು ಸಾಮರ್ಥ್ಯಗಳ ಜೊತೆ ಮಾರ್ಕ್ಸ್‌ವಾದ ಮತ್ತು ಲೆನಿನ್‌ವಾದಗಳನ್ನು ನಮ್ಮ ನಿರ್ದಿಷ್ಟ ಸಂದರ್ಭಕ್ಕೆ ಅವುಗಳನ್ನು ಅನ್ವಯಿಸುವುದರಲ್ಲಿನ ಅವರ ಈ ವಿಶೇಷ ಸಾಮರ್ಥ್ಯ ಅವರನ್ನು ಚಳುವಳಿಯ ಉತ್ತುಂಗ ಸ್ಥಾನಕ್ಕೆ ಕೊಂಡೊಯ್ದಿತು. ಯೆಚೂರಿಯವರು ಬಾಲ್ಯದಿಂದಲೂ ಅಧ್ಯಯನಕ್ಕೆ ವಿಶೇಷ ಒತ್ತು ನೀಡಿದವರು.

ದೇಶವನ್ನೇ ದೊಡ್ಡ ಕಾರಾಗೃಹವನ್ನಾಗಿಸಿದ ತುರ್ತುಪರಿಸ್ಥಿತಿಯನ್ನು ಹೇರಿದ ಅಂದಿನ ಪ್ರಧಾನಿ ಇಂದಿರಾಗಾಂಧಿಯವರ ಮನೆಯ ಮುಂದೆ ಪ್ರತಿಭಟನೆ ಸಂಘಟಿಸಿ, ಅವರನ್ನು 'ನೀವು ಜೆಎನ್‌ಯು ಕುಲಪತಿ ಸ್ಥಾನಕ್ಕೆ ರಾಜೀನಾಮೆ ನೀಡಿ' ಎಂದು ಆಗ್ರಹಿಸಿದವರು ಅವರು. ವಿದ್ಯಾರ್ಥಿಯಾಗಿ, ಜೆಎನ್‌ಯು ವಿದ್ಯಾರ್ಥಿ ಸಂಘಟನೆಯ ಅಧ್ಯಕ್ಷರಾಗಿ ಇಂದಿರಾಗಾಂಧಿಯವರ ಎದುರು ಹೀಗೆ ಸೆಟೆದು ನಿಂತ ದಿಟ್ಟತನ ಯೆಚೂರಿಯವರದ್ದು. ಬದುಕಿನುದ್ದಕ್ಕೂ ಶ್ರಮಜೀವಿಗಳ ಸಮಸ್ಯೆಗಳ ವಿರುದ್ಧದ ಹೋರಾಟದಲ್ಲಿ ಬೆರೆತರು ಮಾತ್ರವಲ್ಲ, ರಾಜ್ಯ ಸಭಾ ಸದಸ್ಯರಾಗಿ ಸಂಸತ್ತಿನಲ್ಲಿ ಜನರ ಧ್ವನಿಗೆ ಶಕ್ತಿ ತುಂಬಿದವರು ಯೆಚೂರಿ. ಸೂಕ್ತ ದಾಖಲೆ–ಸಾಕ್ಷಿ–ಆಧಾರಗಳೊಂದಿಗೆ ಮಾತನಾಡುತ್ತಾ ಆಳುವವರನ್ನು ಪ್ರಶ್ನಿಸುತ್ತಾ ಅವರನ್ನು ತುದಿಗಾಲ ಮೇಲೆ ನಿಲ್ಲಿಸುತ್ತಿದ್ದ ಅಪರೂಪದ ಸಂಸದೀಯ ಪಟು ಯೆಚೂರಿ.

ವಿದ್ಯಾರ್ಥಿ ದಿನಗಳಲ್ಲಿ ನಿರಂಕುಶ ಪ್ರಭುತ್ವವನ್ನು ಎದುರಿಸಿದ ಸಮಯದಿಂದ ಇಂದಿನವರೆಗೆ, ಭಾರತೀಯ ಸಂವಿಧಾನದ ಸ್ವರೂಪಕ್ಕೆ ಧಕ್ಕೆ ಬರುತ್ತಿರುವಾಗ ಕೇಂದ್ರದ ಪ್ರಜಾಪ್ರಭುತ್ವ ವಿರೋಧಿ ಹೋರಾಟಗಳನ್ನು ತೀಕ್ಷ್ಣ ಗೊಳಿಸುವಲ್ಲಿ ಯೆಚೂರಿಯವರು ಪ್ರಮುಖ ಪಾತ್ರ ವಹಿಸಿದ್ದಾರೆ. 1996 ರ 'ಸಂಯುಕ್ತ ರಂಗ' ಸರಕಾರ, ನಂತರ ಯುಪಿಎ–1 ಸರಕಾರ ಹಾಗೂ ಇತ್ತೀಚಿನ 'ಇಂಡಿಯಾ' ಕೂಟವರೆಗೆ, ಅವುಗಳನ್ನು ಸಮನ್ವಯಗೊಳಿಸುವಲ್ಲಿ ಯೆಚೂರಿಯವರ ಪ್ರಯತ್ನಗಳು ಆಧುನಿಕ ಭಾರತದ ಇತಿಹಾಸದಲ್ಲಿ ಶಾಶ್ವತವಾಗಿ ಉಳಿಯುತ್ತವೆ. ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆಯ ಸಂರಕ್ಷಣೆಗಾಗಿ ನಡೆದ ಹೋರಾಟಗಳು ಮತ್ತು ಚಳವಳಿಗಳಲ್ಲಿ ಯೆಚೂರಿಯವರ ಪಾತ್ರ ಅನನ್ಯವಾಗಿದೆ. ಅವರು ಸಿಪಿಐ(ಎಂ)ನ ಉನ್ನತ ನಾಯಕರಷ್ಟೇ ಅಲ್ಲ, ಅವರು ದೇಶದ ಎಡಚಳುವಳಿಯ ಒಬ್ಬ ಹಿರಿಯ ಮುತ್ಸದ್ದಿ ಕೂಡ ಆಗಿದ್ದರು. ಅವರ ಈ ಮುತ್ಸದ್ದಿ ಮಾರ್ಗದರ್ಶಕನ ಪಾತ್ರ ಅಂತರ ರಾಷ್ಟ್ರೀಯ ಮಟ್ಟಕ್ಕೂ ಹರಡಿತ್ತು.

ಹನ್ನೆರಡು ವರ್ಷಗಳ ಕಾಲ ರಾಜ್ಯಸಭೆಯ ಸದಸ್ಯರಾಗಿ ಅವರ ಅತ್ಯುತ್ತಮ ಕೆಲಸಕ್ಕಾಗಿ ಅವರಿಗೆ ಅತ್ಯುತ್ತಮ ಸಂಸದೀಯ ಪಟು ಪ್ರಶಸ್ತಿಯನ್ನು ನೀಡಲಾಯಿತು. ಜಾಗತಿಕವಾಗಿ ಕಮ್ಯೂನಿಸ್ಟ್ ಚಳುವಳಿಗೆ ಆದ ಹಿನ್ನಡೆಯ ಸಂದರ್ಭದಲ್ಲಿ ಮದ್ರಾಸಿನಲ್ಲಿ ನಡೆದ ಸಿಪಿಐ(ಎಂ)ನ 14ನೇ ಮಹಾಧಿವೇಶನದಲ್ಲಿ ಸೈದ್ಧಾಂತಿಕ ವಿಷಯಗಳ ಕುರಿತು ಮಾರ್ಕ್ಸ್ ವಾದ ಲೆನಿನ್‌ವಾದದ ಸತ್ವವನ್ನು ಎತ್ತಿಹಿಡಿದು ನಿರ್ಣಯ ಮಂಡಿಸಿರುವುದು ಅವರು ಸೈದ್ಧಾಂತಿಕ ವಿಚಾರಗಳಲ್ಲಿ ಎಷ್ಟು ನಿಷ್ಣಾತರು ಎಂಬುದನ್ನು ತೋರಿಸುತ್ತದೆ. ಹಲವು ದೇಶಗಳಿಗೆ ಪ್ರವಾಸ ಮಾಡಿ ಅಲ್ಲಿನ ನೀತಿಗಳನ್ನು ಅರಿತು ಅವರಿಂದ ಪಾಠ ಕಲಿತು ಅವರಿಗೆ ಅಗತ್ಯ ನೆರವು ನೀಡುವುದು ಇವರ ವಿಶೇಷತೆ. ರಾಜಪ್ರಭುತ್ವದಿಂದ ಸಂಸದೀಯ ಪ್ರಜಾಪ್ರಭುತ್ವಕ್ಕೆ ಹೊರಳುವ ಪರ್ವಕಾಲದ ಬಿಕ್ಕಟ್ಟು ಸಿಕ್ಕುಗಳನ್ನು ಬಿಡಿಸಿಕೊಂಡು ನೇಪಾಳವು ಮುಂದೆ ಸಾಗಲು ಯೆಚೂರಿಯವರು ನೀಡಿದ ನೆರವು, ವಹಿಸಿದ ಪಾತ್ರವನ್ನು ಇಡೀ ಜಗತ್ತು ಮೆಚ್ಚಿದೆ.

ಕಾಮ್ರೇಡ್ ಸೀತಾರಾಮ ಯೆಚೂರಿಯವರಿಗೂ, ಜನಶಕ್ತಿ ಪತ್ರಿಕೆಗೂ ವಿಶೇಷ ನಂಟು. 2007 ರಲ್ಲಿ ರಾಜ್ಯದಲ್ಲಿ ಪಕ್ಷದ ಪತ್ರಿಕೆಯು ಹೊಸ ರೂಪ ಪಡೆದು ಹೊರಬರುವ ಸಂದರ್ಭಕ್ಕೆ ಸೀತಾರಾಮ ಯೆಚೂರಿ ಅವರು ಸಾಕ್ಷಿಯಾಗಿದ್ದರು. ಪೀಪಲ್ಸ್ ಡೆಮಾಕ್ರೆಸಿ ಪತ್ರಿಕೆಗೆ ಯೆಚೂರಿಯವರು ಬರೆಯುತ್ತಿದ್ದ ಲೇಖನಗಳನ್ನು ಜನಶಕ್ತಿಯು ನಿರಂತರವಾಗಿ ಕನ್ನಡದಲ್ಲಿ ಪ್ರಕಟಿಸುತ್ತಾ ಬಂದಿದೆ. ಜನಶಕ್ತಿಯ ಹಲವಾರು ವಿಶೇಷ ಸಂಚಿಕೆಗಳಿಗೆ ಯೆಚೂರಿಯವರು ತಮ್ಮ ವಿಶೇಷ ಲೇಖನಗಳನ್ನು ನೀಡಿದ್ದಾರೆ. ಓದುಗರು ಅವುಗಳನ್ನು ಬಹುವಾಗಿ ಮೆಚ್ಚಿಕೊಂಡಿದ್ದಾರೆ.

ಉದಾರೀಕರಣದ ಪ್ರಕ್ರಿಯೆಯಲ್ಲಿ ಬದಲಾಗುತ್ತಿರುವ ಮಾಧ್ಯಮಗಳ ಸ್ವರೂಪವನ್ನು, ಅವುಗಳ ಜನವಿರೋಧಿ ನಿಲುವುಗಳನ್ನು, ಗ್ರಾಹಕ ಸಂಸ್ಕೃತಿ ಚಾಚುತ್ತಿರುವ ಜಾಲವನ್ನು ಅತ್ಯಂತ ಆಳ ಮತ್ತು ನಿಖರವಾಗಿ ವಾಗಿ ಗುರುತಿಸಿ ಜನ ಮಾಧ್ಯಮಗಳು ವಹಿಸಬೇಕಾದ ಪಾತ್ರದ ಬಗ್ಗೆ ಜಾಗೃತಿ ಮೂಡಿಸುತ್ತಿದ್ದರು. ವಿದೇಶಿ ಮಾಧ್ಯಮ ಕಂಪನಿಗಳ ಬಂಡವಾಳ ಹೂಡಿಕೆಯನ್ನೂ ಒಳಗೊಂಡು ದೇಶದಲ್ಲಿ ವಿದೇಶಿ ಮಾಧ್ಯಮಗಳಿಗೆ ಕೊಡಮಾಡುವ ಅವಕಾಶ ಹೇಗೆ ನಮ್ಮ ಸ್ವಾತಂತ್ರ್ಯ, ಸಾರ್ವಭೌಮತೆಗೆ ಸವಾಲೊಡ್ಡಲಿವೆ ಎನ್ನುವಾಗ ಭಾರತದ ಬಗ್ಗೆ, ದೇಶವನ್ನು ಪ್ರೀತಿಸುವ ಅವರ ಅನನ್ಯತೆ ಅನಾವರಣವಾಗುತ್ತಿತ್ತು.

ಭಾರತದ ಸಂಸ್ಕೃತಿ ಚರಿತ್ರೆ, ಪುರಾಣಗಳ ಕುರಿತು ಯೆಚೂರಿಯವರು ಬಹಳ ಆಳವಾದ ಅಧ್ಯಯನ ಮಾಡಿದ್ದರು. ದೀಪಾವಳಿ–ಬಲಿಪಾಡ್ಯಮಿ ಎನ್ನುವ ಹಬ್ಬದ ಕುರಿತ ಅವರ ವಿಶ್ಲೇಷಣೆ ಹೀಗಿತ್ತು.

ಉತ್ತರ ಭಾರತದ ಜನರು ಬಲಿ ಚಕ್ರವರ್ತಿಯನ್ನು ವಾಮನ ಅವತಾರದಲ್ಲಿ ವಿಷ್ಣು ಸಂಹರಿಸಿದ್ದನ್ನು ಹಬ್ಬವಾಗಿ ಆಚರಿಸುತ್ತಾರೆ. ದಕ್ಷಿಣ ಭಾರತದ ಕೇರಳದಲ್ಲಿ ವಾಮನನಿಂದ ಕೊಲ್ಲಲ್ಪಟ್ಟ ತಮ್ಮ ಪ್ರೀತಿಯ ರಾಜ ಬಲಿ ಚಕ್ರವರ್ತಿಯು ತನ್ನ ನಾಡಿಗೆ ಮರಳಿ ಬರುವ ದಿನವನ್ನು ಓಣಂ ಆಗಿ ಸಂಭ್ರಮದಿಂದ ಆಚರಿಸುತ್ತಾರೆ. ಈ ವೈರುಧ್ಯಗಳಲ್ಲಿ ಭಾರತದ ಸಾಂಸ್ಕೃತಿಕ ವೈವಿಧ್ಯತೆ ಇದೆ. ಹಾಗೆಯೇ ಪುರಾಣ–ಚರಿತ್ರೆಗಳನ್ನು ಅರ್ಥ ಮಾಡಿಕೊಳ್ಳಲು ಬೇಕಾದ ಜನಪರ ಕಣ್ಣೋಟವೂ ಇದೆ.

ಸಮಾಜವಾದದ ಮಹೋನ್ನತ ಸಿದ್ಧಾಂತದೊಂದಿಗೆ, ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ದಾರಿಯಲ್ಲಿ ಅವಿರತವಾಗಿ ಶ್ರಮಿಸಿದ ಕಮ್ಯುನಿಸ್ಟ್ ಯೋಧನಿಗೆ ಇದೋ ನಮ್ಮ ಶ್ರದ್ಧಾಂಜಲಿ. ದೇಶದ ದುಡಿಯುವ ವರ್ಗದ ವಿಮೋಚನೆಗಾಗಿ ಕಾಮ್ರೇಡ್ ಯೆಚೂರಿಯವರು ಮುನ್ನಡೆಸಿದ ಚಳುವಳಿಯನ್ನು ಇನ್ನಷ್ಟು ಬಲಪಡಿಸುವುದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಗೌರವ, ಶ್ರದ್ಧಾಂಜಲಿ.

ನಾಗಮಂಗಲದ ಕೋಮುಗಲಭೆ ಪೊಲೀಸ್ ಇಲಾಖೆಯ ವೈಫಲ್ಯ

ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಸೆಪ್ಟೆಂಬರ್ 11, 2024 ರ ರಾತ್ರಿ ಗಣಪತಿ ವಿಸರ್ಜನಾ ಮೆರವಣಿಗೆಯ ಸಂದರ್ಭದಲ್ಲಿ ದುರದೃಷ್ಟಕರ ಕೋಮು ಘರ್ಷಣೆ ಸಂಭವಿಸಿದೆ. ಗಲಭೆಯ ವಿಚಾರವಾಗಿ ಹಿಂದೂ ಮತ್ತು ಮುಸ್ಲಿಂ ಎರಡೂ ಸಮುದಾಯಗಳ ಕಡೆಯಿಂದಲೂ ಪರಸ್ಪರರನ್ನು ದೂರುವ ಮಾತುಗಳು, ಆರೋಪಗಳು ಕೇಳಿಬಂದಿವೆ. ಗಣಪತಿ ವಿಸರ್ಜನ ಮೆರವಣಿಗೆಯು ಮಸೀದಿಯ ಹತ್ತಿರ ಬಂದಾಗ ಮಸೀದಿಯ ಕಡೆಯಿಂದ ಮೆರವಣಿಗೆಯ ಮೇಲೆ ಕಲ್ಲು ತೂರಾಟ ನಡೆಸಲಾಯಿತು ಎಂಬುದು ಒಂದು ಕಡೆಯ ದೂರು. ಗಣೇಶ ಮೆರವಣಿಗೆಯು ಮಸೀದಿಯ ಬಳಿ ಬಂದಾಗ ಅನವಶ್ಯಕವಾಗಿ ಬಹಳ ಹೊತ್ತು ಅಲ್ಲಿ ಮೆರವಣಿಗೆಯನ್ನು ನಿಲ್ಲಿಸಿ ಅಬ್ಬರದ ಡಿ.ಜೆ. ಸಂಗೀತವನ್ನು ಹಾಕಿ ಪ್ರಚೋದನಕಾರಿಯಾಗಿ ವರ್ತಿಸಿದರು ಎಂಬುದು ಮತ್ತೊಂದು ಕಡೆಯ ದೂರು. ನಾಗಮಂಗಲದಲ್ಲಿ ಈ ಪ್ರಕರಣದಲ್ಲಿ ನಿಜಕ್ಕೂ ಏನು ನಡೆದಿದೆ ಎನ್ನುವುದನ್ನು ಮುಂದಿನ ತನಿಖೆಗಳು ಸರಿಯಾಗಿ ಹೇಳಬೇಕಿದೆ. ಆದರೆ ಇಲ್ಲಿ ಒಂದು ವಿಚಾರ ಸ್ಪಷ್ಟವಾಗಿದೆ. ಅದೇನೆಂದರೆ ಕಳೆದ ವರ್ಷ ಇದೇ ಜಾಗದಲ್ಲಿ ಇದೇ ಗಣಪತಿ ವಿಸರ್ಜನಾ ಮೆರಣವಣಿಗೆಯ ಸಂದರ್ಭದಲ್ಲಿ ಸಣ್ಣ ಘರ್ಷಣೆ ಸಂಭವಿಸಿ ಬಿಗುವಿನ ಪರಿಸ್ಥಿತಿ ಉಂಟಾಗಿದ್ದ ದಾಖಲೆ ಇದ್ದರೂ ಪೊಲೀಸ್ ಇಲಾಖೆ ಈ ವರ್ಷ ಸಂಭವನೀಯ ಘರ್ಷಣೆ ತಪ್ಪಿಸಲು ಅಗತ್ಯವಾದ ಕ್ರಮವನ್ನು ಕೈಗೊಂಡಿಲ್ಲ ಮತ್ತು ಅಗತ್ಯಕ್ಕೆ ತಕ್ಕಂತೆ ಸಿಬ್ಬಂದಿಯನ್ನೂ ನಿಯೋಜಿಸಿರಲಿಲ್ಲ. ಕಲ್ಲು ತೂರಾಟದಿಂದ ಉಂಟಾದ ಉದ್ರಿಕ್ತ ಪರಿಸ್ಥಿತಿಯಲ್ಲಿ ಜನರನ್ನು ನಿಯಂತ್ರಿಸುವಷ್ಟು ಸಿಬ್ಬಂದಿ ಇಲ್ಲದೇ ಗಲಭೆಕೋರರ ದುಷ್ಕರ್ಮಿಗಳು ಸಂದರ್ಭದ ದುರುಪಯೋಗ ಪಡಿಸಿಕೊಂಡಿವೆ ಎಂದು ವರದಿಗಳು ಹೇಳುತ್ತವೆ.

ಗಲಭೆಯಲ್ಲಿ ಎರಡೂ ಸಮುದಾಯಗಳಿಗೆ ಸೇರಿದ ಬಳೆ ಅಂಗಡಿ, ಬಟ್ಟೆ ಅಂಗಡಿ, ಪಾತ್ರೆ ಅಂಗಡಿ ಮುಂತಾದ 25 ಅಂಗಡಿಗಳು ಹಾಗೂ 7 ವಾಹನಗಳಿಗೂ ಬೆಂಕಿ ಹಚ್ಚಲಾಗಿದ್ದು ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟಾಗಿದೆ ಎಂದು ವರದಿಗಳು ಹೇಳುತ್ತವೆ. ಹಲವರಿಗೆ ಗಾಯಗಳಾಗಿವೆ. ಗಲಭೆ ಉಂಟಾಗದಂತೆ ಕ್ರಮವಹಿಸುವಲ್ಲಿ ವಿಫಲವಾಗಿರುವ ಪೊಲೀಸ್ ಇನ್ಸ್‌ಪೆಕ್ಟರ್ ಅನ್ನು ಇಲಾಖೆ ಅಮಾನತು ಮಾಡಿದೆ. ಗಲಭೆಯ ಸಂಬಂಧ 52 ಜನರನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ.

ಗಲಭೆ ನಡೆದ ಮೇಲೆ ಪೊಲೀಸ್ ಅಧಿಕಾರಿಯ ಅಮಾನತ್ತು ಮಾಡುವುದಕ್ಕಿಂತಲೂ ಗಲಭೆ ಉಂಟಾಗದಂತೆ ತಡೆಯುವ ಮುನ್ನೆಚ್ಚರಿಕೆಯ ಕ್ರಮವೇ ಬಹಳ ಮುಖ್ಯ. ಪೊಲೀಸ್ ಇಲಾಖೆ ಈ ವಿಷಯದಲ್ಲಿ ದಯನೀಯವಾಗಿ ವಿಫಲವಾಗಿದೆ ಎಂಬುದು ಎದ್ದು ಕಾಣುತ್ತದೆ. ರಾಜ್ಯದಲ್ಲಿಯೂ, ದೇಶದಲ್ಲಿಯೂ ಗಣಪತಿ ವಿಸರ್ಜನೆಯ ಸಂದರ್ಭವನ್ನು ಕೋಮುವಾದಿ ಶಕ್ತಿಗಳು, ಗಲಭೆ ಸೃಷ್ಟಿಸಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಬಳಸುವುದು ಹೊಸ ವಿಷಯವೇನೂ ಅಲ್ಲ. ಆದರೆ ಸದ್ಯದ ರಾಜಕೀಯ ಪರಿಸ್ಥಿತಿಯಲ್ಲಿ ಮಂಡ್ಯ ಜಿಲ್ಲೆ ಕೋಮುವಾದಿ ಶಕ್ತಿಗಳ ವಿಶೇಷ ಗುರಿಯಾಗಿದೆ ಎಂಬುದು ಉರಿಗೌಡ–ನಂಜೇಗೌಡರ ಸೃಷ್ಟಿ, ಕೆರಗೋಡಿನ ಹನುಮಧ್ವಜ ವಿವಾದ ಸೃಷ್ಟಿ ಮುಂತಾದವುಗಳ ಮೂಲಕ ಸಾಬೀತಾಗಿದೆ. ಇಂತಹ ಸಂದರ್ಭದಲ್ಲಿ ಪೊಲೀಸರು ವಿಶೇಷ ಎಚ್ಚರಿಕೆ ವಹಿಸುವುದು ಅಗತ್ಯವಾಗಿತ್ತು.

ಈ ಗಲಭೆ ಪ್ರಕರಣದಲ್ಲಿ ತ್ವರಿತವಾಗಿ ವಿಚಾರಣೆ ನಡೆಯಬೇಕು. ಗಲಭೆಯಲ್ಲಿ ನೊಂದವರಿಗೆ ತುರ್ತಾಗಿ ಪರಿಹಾರ ನೀಡಬೇಕು. ದುಷ್ಕರ್ಮಿಗಳು ಹಿಂದೂ, ಮುಸ್ಲಿಂ ಯಾವುದೇ ಸಮಯದಾಯಕ್ಕೆ ಸೇರಿರಲಿ ಅವರಿಗೆ ತಕ್ಕ ಶಿಕ್ಷೆಯಾಗಬೇಕು. ಇಲ್ಲಿ ಇನ್ನು ಕೆಲವು ಎಚ್ಚರಿಕೆಗಳನ್ನು ವಹಿಸಬೇಕಾಗಿದೆ. ರಾಜಕೀಯ ಲಾಭಕ್ಕಾಗಿ ಬಿಜೆಪಿ ಮತ್ತು ಸಂಘ ಪರಿವಾರಗಳು ಬೆಂದ ಮನೆಯಲ್ಲಿಗಳ ಇರಿಯುವುದಕ್ಕೆ ಹೇಸುವುದಿಲ್ಲ, ಅಷ್ಟು ಮಾತ್ರವಲ್ಲ–ಮನೆಗೆ ಬೆಂಕಿ ಹಚ್ಚಲೂ ಹೇಸುವುದಿಲ್ಲ ಎಂಬುದು ಎನ್ನುವುದು ಇತಿಹಾಸದ ದಾಖಲೆ. ಹೀಗಾಗಿ ಈ ಗಲಭೆಯ ವಿಷಯವನ್ನು ಬಳಸಿ ಮತ್ತಷ್ಟು ಗಲಭೆ ಸೃಷ್ಟಿಸಲು ಅವಕಾಶವಾಗಬಾರದು.

ಎರಡು ಸಮುದಾಯಗಳ ಮಧ್ಯೆ ಘರ್ಷಣೆ–ತಿಕ್ಕಾಟಗಳು ಉಂಟಾದ ಸಂದರ್ಭದಲ್ಲಿ ಸರಕಾರ ನಿಸ್ಪಕ್ಷಪಾತವಾಗಿ ನಡೆದುಕೊಳ್ಳಬೇಕು, ಎರಡೂ ಸಮುದಾಯಗಳಲ್ಲಿನ ದುಷ್ಕರ್ಮಿಗಳ ವಿರುದ್ಧ ಕ್ರಮವಹಿಸಬೇಕು ಎಂದು ಒತ್ತಾಯಿಸುವುದು, ಎರಡೂ ಸಮುದಾಯಗಳ ಜನರು ಕೋಮುವಾದಿಗಳ ಪ್ರಚಾರಗಳಿಗೆ ಬೆಲೆ ಕೊಡದೇ ಶಾಂತಿ ಸ್ಥಾಪನೆಗೆ ಅವಕಾಶ ಸಹಕಾರ ನೀಡಬೇಕು ಎಂದು ಮನವಿ ಮಾಡುವುದು ಯಾವುದೇ ರಾಜಕೀಯ ಪಕ್ಷಕ್ಕೂ ನ್ಯಾಯಬದ್ಧವಾದ ಸರಿಯಾದ ನಡೆಯಾಗುತ್ತದೆ. ಮುತ್ಸದ್ದಿತನ ಮಾತಾಗುತ್ತದೆ.

ಆದರೆ ಬಿಜೆಪಿ ಪಕ್ಷದ ನಾಯಕರು ಎಷ್ಟು ಬೇಜವಾಬ್ದಾರಿಯುತ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂಬುದನ್ನು ಗಮನಿಸಿ. ಸ್ವತಃ ದೇಶದ ಪ್ರಧಾನಿ ಹರ್ಯಾಣ ವಿಧಾನಸಭಾ ಚುನಾವಣೆಯ ಪ್ರಚಾರದಲ್ಲಿ ಸಂಕುಚಿತ ರೀತಿಯಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿ, ರಾಜಕೀಯ ಲಾಭ ಹೊಡೆದುಕೊಳ್ಳಲು ಯತ್ನಿಸಿದ್ದಾರೆ. ಮೈಸೂರು ಲೋಕಸಭಾ ಕ್ಷೇತ್ರದ ಮಾಜಿ ಸಂಸದ ಪ್ರತಾಪ ಸಿಂಹ ಅವರು "ಮುಸ್ಲೀಮರ ಕೈಯಲ್ಲಿರುವ ಪೆಟ್ರೋಲ್ ಬಾಂಬ್, ತಲ್ವಾರ್‌ಗಳನ್ನು ಸರ್ಕಾರ ಕಿತ್ತುಕೊಳ್ಳಬೇಕು. ಇಲ್ಲದಿದ್ದರೆ ಗಣೇಶ ಮೂರ್ತಿಗಳ ಮೆರವಣಿಗೆಗಳಲ್ಲಿ ನಾವೂ ಅವುಗಳನ್ನು ಹಿಡಿದುಕೊಳ್ಳಬೇಕಾಗುತ್ತದೆ' ಎಂದಿದ್ದಾರೆ. ವಾಸ್ತವವಾಗಿ ಗಲಭೆಯಲ್ಲಿ ಪೆಟ್ರೋಲ್ ಬಾಂಬ್, ತಲ್ವಾರ್ ಬಳಸಲಾಗಿದೆ ಎಂಬುದಕ್ಕೆ ಸಾಕ್ಷ್ಯಗಳಿಲ್ಲ ಎಂದು ಪೊಲೀಸ್ ಇಲಾಖೆ ಹೇಳಿದೆ. ಆದರೂ ಈ ಉದ್ರೇಕಕಾರಿ ಮಾತೇಕೆ? ವಾಸ್ತವಿಕವಾಗಿ ಕೋಮುಗಲಭೆ ವ್ಯಾಪಕವಾಗಿ ಹಬ್ಬಿಸುವುದೇ ಸಂಘ ಪರಿವಾರದ ಉದ್ದೇಶವಾಗಿದೆ. ಬಿಜೆಪಿಯ ಇನ್ನೂ ಹಲವು ರಾಜ್ಯ ಮುಖಂಡರು ಪ್ರತಾಪ ಸಿಂಹರ ದಾಟಿಯಲ್ಲಿಯೇ ಮಾತನಾಡಿದ್ದಾರೆ. ಗಣೇಶ ಮೂರ್ತಿಯ ವಿಸರ್ಜನೆಯೋ ಮತ್ತೊಂದು ವಿಷಯವೋ ಒಟ್ಟಾರೆ ಹಿಂದೂ ಯುವಜನರನ್ನು, ಯುವಜನರನ್ನು ಉದ್ರೇಕಿಸಿ ಅವರ ಕೈಗೆ ಆಯುಧ ಕೊಟ್ಟು ಘರ್ಷಣೆಗೆ ಇಳಿಸುವುದು, ಕೋಮುಗಲಭೆ ಸೃಷ್ಟಿಸಿ ಎರಡೂ ಸಮುದಾಯಗಳ ಯುವಜನರನ್ನು, ಜನರನ್ನು ಬಲಿಕೊಟ್ಟು ರಾಜಕೀಯ ಲಾಭ ಗೋರಿಕೊಳ್ಳುವುದು. ಮುಸ್ಲಿಮ್ ಕೋಮುವಾದಿಗಳಿಗೂ ಸಂಘರ್ಷ–ತಿಕ್ಕಾಟ, ಗಲಭೆಗಳೇ ಬೇಕಾಗಿವೆ. ಗಲಭೆಗಳು ನಡೆದಷ್ಟು ಮುಸ್ಲೀಮ್ ಸಮುದಾಯದ ಯುವಜರನ್ನು ದಾರಿತಪ್ಪಿಸಿ ತಮ್ಮ ಪ್ರಭಾವಕ್ಕೆ, ತಮ್ಮ ಸಂಘಟನೆಯ ಹಿಡಿತಕ್ಕೆ ತೆಗೆದುಕೊಳ್ಳಬಹುದು.

ಸಂವಿಧಾನದ ಪ್ರಕಾರ ಆಡಳಿತ ನಡೆಸುತ್ತೇವೆ ಎಂದು ಪ್ರತಿಜ್ಞೆ ಸ್ವೀಕರಿಸಿ ದೇಶವನ್ನು ಆಳುತ್ತಿರುವ ರಾಷ್ಟ್ರೀಯ ರಾಜಕೀಯ ಪಕ್ಷವೊಂದರ ಮುಖಂಡರುಗಳು ಹೀಗೆ ಬೀದಿ ರೌಡಿಗಳಂತೆ ಕೋಮುವಾದಿ ದ್ವೇಷದ ಹಾಗೂ ವಿಭಜನೆಯ ಮಾತನಾಡುತ್ತಾರೆ ಎಂಬುದು ಆ ಪಕ್ಷದ ನೀತಿ ಧೋರಣೆ, ಗುರಿ ಏನು ಎಂಬುದನ್ನು ತೋರಿಸುತ್ತದೆ. ಪ್ರಜಾಪ್ರಭುತ್ವದಲ್ಲಿ ಕಾನೂನನ್ನು ಕೈಗೆತ್ತಿಕೊಳ್ಳಲು ಯಾರಿಗೂ ಅವಕಾಶವಿಲ್ಲ. ಕೋಮುವಾದಿ ಉದ್ರೇಕದ ಭಾವನೆಗಳು ಸಮಾಜವನ್ನು ಆಳುವುದು ಸಾಧ್ಯವಿಲ್ಲ. ರಾಜ್ಯ ಸರಕಾರವು ಈ ವಿಚಾರದ ಬಗೆಗೆ ಗಂಭೀರವಾದ ಕ್ರಮ ವಹಿಸಬೇಕು. ಕಾನೂನಿನ ಆಡಳಿತವನ್ನು ಖಾತ್ರಿ ಪಡಿಸಬೇಕು.

ಭಾವುಕ ವಾತಾವರಣ ತುಂಬಿದ ಎಕೆಜಿ ಭವನ



ಸೀತಾರಾಂ ಯೆಚೂರಿ ಅವರ ಅಂತಿಮ ಯಾತ್ರೆಯ ನಿಮಿತ್ತ ಸಿಪಿಎಂ ಕೇಂದ್ರ ಕಚೇರಿ ಎಕೆಜಿ ಭವನದಲ್ಲಿ ಶನಿವಾರ ಬೆಳಗ್ಗೆಯಿಂದಲೇ ಭಾವುಕ ವಾತಾವರಣ ನಿರ್ಮಾಣವಾಗಿತ್ತು. ಯೆಚೂರಿಯವರ ನಿಧನದ ಸುದ್ದಿ ತಿಳಿದ ಕ್ಷಣದಿಂದಲೇ ವಿವಿಧ ರಾಜ್ಯಗಳಿಂದ ಸಿಪಿಎಂ ನಾಯಕರು ಹಾಗೂ ಎಡಪಕ್ಷಗಳ ಅಭಿಮಾನಿಗಳು ಶುಕ್ರವಾರ ರಾತ್ರಿಯೇ ಎಕೆಜಿ ಭವನಕ್ಕೆ ಬರತೊಡಗಿದ್ದರು. ಶನಿವಾರ ಬೆಳಗ್ಗೆ 10 ಗಂಟೆ ಸುಮಾರಿಗೆ ನೈರುತ್ಯ ದೆಹಲಿಯ ವಸಂತ್ ಕುಂಜ್‌ನಲ್ಲಿರುವ ಅವರ ನಿವಾಸದಿಂದ ಆಂಬ್ಯುಲೆನ್ಸ್‌ನಲ್ಲಿ ಯೆಚೂರಿ ಅವರ ಪಾರ್ಥಿವ ಶರೀರವನ್ನು ಎಕೆಜಿ ಭವನಕ್ಕೆ ತರಲಾಯಿತು. ಮೃತದೇಹದೊಂದಿಗೆ ಯೆಚೂರಿಯವರ ಪತ್ನಿ ಸೀಮಾ ಚಿಸ್ತಿ, ಪುತ್ರಿ ಅಖಿಲಾ, ಪುತ್ರ ದಾನಿಶ್, ಸಹೋದರ ಶಂಕರ್ ಮತ್ತಿತರರು ಪಾರ್ಥಿವ ಶರೀರರದ ಜೊತೆ ಬಂದ್ದರು. ಆ ವೇಳೆ 'ಸೀತಾರಾಮ್ ಅಮರ್ ರಹೇ'ಎಂಬ ಘೋಷಣೆಗಳು ಮೊಳಗಿದವು. ಎಕೆಜಿ ಭವನದ ಆವರಣದಲ್ಲಿ ವಿಶೇಷವಾಗಿ ಸಿದ್ಧಪಡಿಸಿದ ಸ್ಥಳದಲ್ಲಿ ಸಾರ್ವಜನಿಕರ ದರ್ಶನಕ್ಕೆ ಯೆಚೂರಿ ಅವರ ಪಾರ್ಥಿವ ಶರೀರವನ್ನು ಇಡಲಾಯಿತು. ಮೊದಲಿಗೆ ಪೊಲಿಟ್ ಬ್ಯೂರೋ ಸದಸ್ಯರು ಪುಷ್ಪಮಾಲೆ ಇಟ್ಟು ಶ್ರದ್ಧಾಂಜಲಿ ಸಲ್ಲಿಸಿದರು. ಪ್ರಕಾಶ್ ಕಾರಟ್, ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಮಾಣಿಕ್ ಸರ್ಕಾರ್, ಬೃಂದಾಕಾರಟ್, ಬಿ.ವಿ.ರಾಘವುಲು, ನೀಲೋತ್ಪಾಲ್ ಬಸು, ಎಂ.ಎ.ಬೇಬಿ ಮೊದಲಾದವರು ನಮನ ಸಲ್ಲಿಸಿದರು. ನಂತರ ಆಂಧ್ರಪ್ರದೇಶ, ತೆಲಂಗಾಣ, ಕೇರಳ, ಪಶ್ಚಿಮ ಬಂಗಾಳ, ತ್ರಿಪುರಾ, ತಮಿಳುನಾಡು, ಹಿಮಾಚಲ ಪ್ರದೇಶ, ಬಿಹಾರ, ರಾಜಸ್ಥಾನ, ಮಹಾರಾಷ್ಟ್ರ ಸೇರಿದಂತೆ ವಿವಿಧ ರಾಜ್ಯ ಸಮಿತಿಗಳ ಪ್ರತಿನಿಧಿಗಳು ಗೌರವ ಸಲ್ಲಿಸಿದರು. ಬಳಿಕ ವಿವಿಧೆಡೆಯಿಂದ ಆಗಮಿಸಿದ ವಿದ್ಯಾರ್ಥಿಗಳು, ಕಾರ್ಮಿಕರು, ಶಿಕ್ಷಕರು, ನೌಕರರು, ರೈತರು, ಕೃಷಿ ಕಾರ್ಮಿಕರು, ಮಹಿಳೆಯರು, ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಸಾಮಾಜಿಕ ಸಂಘಟನೆಗಳ ಕಾರ್ಯಕರ್ತರು, ಸಾಹಿತಿಗಳು, ಇತಿಹಾಸಕಾರರು, ಒಬ್ಬರ ನಂತರ ಒಬ್ಬರು ಶ್ರದ್ಧಾಂಜಲಿ ಸಲ್ಲಿಸಿ, ತಮ್ಮ ಪ್ರೀತಿಯ ನಾಯಕನಿಗೆ ಕೊನೆಯ ಬಾರಿ "ರೆಡ್ ಸೆಲ್ಯೂಟ್" ಹೇಳಿದರು.



ರಾಜ್ಯಾದಾದ್ಯಂತ ಶ್ರದ್ಧಾಂಜಲಿ

ಕಾಂ.ಸೀತಾರಾಂ ಯೆಚೂರಿಯವರ ನಿಧನಕ್ಕೆ ಸಿಪಿಐ(ಎಂ) ಮತ್ತು ಸಾಮೂಹಿಕ ಸಂಘಟನೆಗಳು ರಾಜ್ಯದ ಹಲವು ಕಡೆಗಳಲ್ಲಿ ಶ್ರದ್ಧಾಂಜಲಿ ಸಭೆಗಳನ್ನು ನಡೆಸಿವೆ. ಈ ಸಂದರ್ಭದಲ್ಲಿ ಹಲವು ನಾಯಕರು ಮತ್ತು ಕಾರ್ಯಕರ್ತರು ಯೆಚೂರಿಯವರ ಜೊತೆಗಿನ ಒಡನಾಟಗಳನ್ನು ನೆನಪಿಸಿಕೊಂಡು ಅವರ ಅಗಲಿಕೆಗೆ ತೀವ್ರ ದುಃಖ ವ್ಯಕ್ತಪಡಿಸಿದರು. ಪಕ್ಷದ ರಾಜ್ಯ ಕಚೇರಿಯಲ್ಲಿ ಶ್ರದ್ಧಾಂಜಲಿ ಸಭೆ ನಡೆಸಲಾಯಿತು. ಪಕ್ಷದ ರಾಜ್ಯ ಕಾರ್ಯದರ್ಶಿ ಯು.ಬಸವರಾಜ, ಹಿರಿಯ ನಾಯಕರಾದ ವಿಜೆಕೆ ನಾಯರ್, ಜಿ.ಎನ್. ನಾಗರಾಜ, ನಿತ್ಯಾನಂದಸ್ವಾಮಿ, ಗೋಪಾಲಕೃಷ್ಣ ಅರಳಹಳ್ಳಿ, ರಾಜ್ಯ ಮುಖಂಡರಾದ ಕೆ.ಮಹಾಂತೇಶ್ ಪ್ರತಪಸಿಂಹ, ಗೌರಮ್ಮ ಮತ್ತಿತರರು ಭಾಗವಹಿಸಿದ್ದರು.

ಯು.ಬಸವರಾಜ ಅವರು ಶ್ರದ್ಧಾಂಜಲಿ ಸಲ್ಲಿಸಿ ಮಾತನಾಡುತ್ತಾ, ಸೀತಾರಾಂ ಯೆಚೂರಿಯವರು ವಿದ್ಯಾರ್ಥಿ ದೆಸೆಯಿಂದಲೆ ಹೋರಾಟದ ಕಣಕ್ಕೆ ಧುಮುಕಿದ್ದು ಮಾತ್ರವಲ್ಲಾ ಅಖಿಲ ಭಾರತ ನಾಯಕರಾಗಿ ವಿದ್ಯಾರ್ಥಿ ಚಳುವಳಿಯನ್ನು ದೇಶವ್ಯಾಪಿಯಾಗಿ ಮುನ್ನಡೆಸಿದ್ದಾರೆ. ಇದೇ ಸಂದರ್ಭದಲ್ಲಿ ಮಾರ್ಕ್ಸ್‌ವಾದಕ್ಕೆ ಆಕರ್ಷಿತರಾಗಿ, ಸಿಪಿಐ(ಎಂ) ಪಕ್ಷದ ಕಾರ್ಯಕರ್ತರಾಗಿ ಮತ್ತು ನಾಯಕರಾಗಿ ತಮ್ಮ ಇಡೀ ಜೀವನವನ್ನು ದೇಶಕ್ಕಾಗಿ, ಸಮಾಜ ಪರಿವರ್ತನೆಗಾಗಿ ಮುಡಿಪಾಗಿಟ್ಟಿದ್ದರು. ಸಂಗಾತಿಯ ಅಗಲಿಕೆ ದೇಶದ ರಾಜಕಾರಣಕ್ಕೆ ಶೋಷಿತ ಸಮುದಾಯಕ್ಕೆ ಮತ್ತು ಮುಖ್ಯವಾಗಿ ಸಿಪಿಐಎಂ ಪಕ್ಷಕ್ಕೆ ಬಹುದೊಡ್ಡ ನಷ್ಟವಾಗಿದೆ ಎಂದರು.



ಮರೆಯಾದ ಸಂಗಾತಿ ಸೀತಾರಾಮ್ ಯೆಚೂರಿ

ಕಮ್ಯುನಿಸ್ಟ್ ಹೋರಾಟಗಾರ ಮತ್ತು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಇನ್ನಿಲ್ಲ. ಕೆಲ ದಿನಗಳಿಂದ ಶ್ವಾಸಕೋಶದ ಸೋಂಕಿನಿಂದ ಬಳಲುತ್ತಿದ್ದ ಯೆಚೂರಿ ಸೆಪ್ಟೆಂಬರ್ 12ರಂದು ನವದೆಹಲಿಯ ಏಮ್ಸ್ ನಲ್ಲಿ ಕೊನೆಯುಸಿರೆಳೆದರು. ಅವರಿಗೆ 72 ವರ್ಷ ವಯಸ್ಸಾಗಿತ್ತು.

ನ್ಯುಮೋನಿಯಾದಿಂದ ಬಳಲುತ್ತಿದ್ದ ಯೆಚೂರಿ ಅವರನ್ನು ಕಳೆದ ತಿಂಗಳು 19 ರಂದು ಏಮ್ಸ್‌ಗೆ ದಾಖಲಿಸಲಾಗಿತ್ತು. ಶ್ವಾಸಕೋಶದ ಸೋಂಕಿನಿಂದ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಕಳೆದ ಕೆಲವು ದಿನಗಳಿಂದ ಅವರು ವೆಂಟಿಲೇಟರ್‌ನಲ್ಲಿದ್ದರು. ವಿವಿಧ ವಿಭಾಗಗಳ ವೈದ್ಯಕೀಯ ತಜ್ಞರು ಯೆಚೂರಿಗೆ ಉತ್ತಮ ಚಿಕಿತ್ಸೆ ನೀಡಿದರು. ಆದರೆ ಅವರ ಸ್ಥಿತಿ ಹದಗೆಟ್ಟಿತು ಮತ್ತು ಮಧ್ಯಾಹ್ನ ಗುರುವಾರ 3 ಗಂಟೆಯ ಸುಮಾರಿಗೆ ಅವರು ನಿಧನರಾದರು. ಯೆಚೂರಿ ಅವರ ಪತ್ನಿ ಸೀಮಾ ಚಿಸ್ತಿ ಅವರು 'ದಿ ವೈರ್' ಪೋರ್ಟಲ್‌ನ ಸಂಪಾದಕರಾಗಿದ್ದಾರೆ. ಯೆಚೂರಿಗೆ ಅಖಿಲಾ ಎಂಬ ಮಗಳು ಮತ್ತು ಡ್ಯಾನಿಶ್ ಎಂಬ ಮಗ ಇದ್ದಾರೆ. ಯೆಚೂರಿ ಅವರ ಹಿರಿಯ ಪುತ್ರ ಆಶಿಶ್ ಕೋವಿಡ್‌ಗೆ ಬಲಿಯಾದರು.

2015 ರಲ್ಲಿ ಪ್ರಕಾಶ್ ಕಾರಟ್ ಅವರ ಸ್ಥಾನಕ್ಕೆ ಯೆಚೂರಿ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು ಮತ್ತು ಅಂದಿನಿಂದಲೂ ಆ ಸ್ಥಾನದಲ್ಲಿ ಮುಂದುವರೆದಿದ್ದಾರೆ. ಪಕ್ಷದ ಮುಖಂಡ ಹರಿಕಿಶನ್ ಸಿಂಗ್ ಅವರು ಸುರ್ಜಿತ್ ಅವರಿಂದ ಬಹಳಷ್ಟು ಕಲಿತರು ಮತ್ತು ಯೆಚೂರಿ ಸಮ್ಮಿಶ್ರ ಯುಗದಲ್ಲಿ ಪ್ರಮುಖ ಪಾತ್ರ ವಹಿಸಿದರು. 1996–97ರಲ್ಲಿ ವಿಪಿ ಸಿಂಗ್ ನೇತೃತ್ವದ ನ್ಯಾಷನಲ್ ಫ್ರಂಟ್ ಸರ್ಕಾರ ಮತ್ತು ನಂತರ ಯುನೈಟೆಡ್ ಫ್ರಂಟ್ ಸರ್ಕಾರ ರಚನೆಯಲ್ಲಿ ಅವರು ಸಕ್ರಿಯ ಪಾತ್ರ ವಹಿಸಿದರು. ಈ ಎರಡು ಸರ್ಕಾರಗಳಿಗೆ ಸಿಪಿಎಂ ಹೊರಗಿನಿಂದ ಬೆಂಬಲ ನೀಡಿತ್ತು.

ಕಾಂಗ್ರೆಸ್ ನೇತೃತ್ವದ ಮೊದಲ ಯುಪಿಎ ಸರ್ಕಾರ ರಚನೆಯಾದಾಗ ನೀತಿ ನಿರ್ಧಾರಗಳಲ್ಲಿ ಯೆಚೂರಿಯವರ ಮುದ್ರೆ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಅವರು ಅನೇಕ ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಆ ಸರ್ಕಾರದ ಮೇಲೆ ಒತ್ತಡ ಹೇರಿದರು. ಪರಮಾಣು ಒಪ್ಪಂದಕ್ಕೆ ಸಂಬಂಧಿಸಿದಂತೆ ಭಾರತ–ಅಮೆರಿಕ ಸರ್ಕಾರದ ನಡುವಿನ ಮಾತುಕತೆಯಲ್ಲಿ ಯೆಚೂರಿ ಪ್ರಮುಖ ಪಾತ್ರ ವಹಿಸಿದ್ದರು. ಆ ಒಪ್ಪಂದದಿಂದಾಗಿಯೇ ಎಡಪಕ್ಷಗಳು ಯುಪಿಎ–1ರ ಸರಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂತೆಗೆದುಕೊಂಡವು.

ಒಡನಾಡಿಗಳ ಮಾತುಗಳು; ದಿಗ್ಭ್ರಮೆಗೊಂಡಿದ್ದೆವು...

"ನನಗೆ ಇನ್ನೂ ಚೆನ್ನಾಗಿ ನೆನಪಿದೆ. ಅದು 1970. ಆಗ ನಾನು ದೆಹಲಿಯ ಐಐಟಿಯಲ್ಲಿ ಓದುತ್ತಿದ್ದೆ. ಕಾಮ್ರೇಡ್‌ಗಳಾದ ಸುನೀತ್ ಚೋಪ್ರಾ ಮತ್ತು ಸೀತಾರಾಮ್ ಅವರು ಎಸ್‌ಎಫ್‌ಐ ರಾಜ್ಯ ಸಮಿತಿಯ ಪರವಾಗಿ ವಿದ್ಯಾರ್ಥಿ ಚಳವಳಿಯ ಬಗ್ಗೆ ಮಾತನಾಡಲು ನಮ್ಮ ವಿಶ್ವವಿದ್ಯಾಲಯಕ್ಕೆ ಬಂದಿದ್ದರು. ಅವರು ಮಾತನಾಡುವಾಗ ನಾವು ತುಂಬಾ ಹೊತ್ತು ಹಾಗೆ ನೋಡಿದೆವು. ನಾವು ಒಂದು ರೀತಿಯ ದಿಗ್ಭ್ರಮೆಗೊಂಡಿದ್ದೆವು. ಅವರ ಆಲೋಚನೆಗಳಲ್ಲಿ ಸ್ಪಷ್ಟತೆ, ಮಾರ್ಕ್ಸ್‌ವಾದಿ ತಿಳುವಳಿಕೆ, ಪ್ರಪಂಚದಾದ್ಯಂತದ ವಿವಿಧ ಚಳುವಳಿಗಳ ಜ್ಞಾನ ಮತ್ತು ಕ್ರಾಂತಿಕಾರಿ ಉತ್ಸಾಹ ಎಲ್ಲವೂ ಒಂದರ ಮೇಲೊಂದು ಕಾಣಿಸಿಕೊಂಡವು. ಆದರೆ ಇಲ್ಲಿ ಇನ್ನೊಂದು ಟ್ರಿಕ್ ಇದೆ. ಅದು ಅವರ ಮಾತಿನಲ್ಲಿರುವ ಇನ್ನೊಂದು ಉತ್ತಮ ಗುಣ. ಭಾಷಣ ಮುಗಿಯುವಷ್ಟರಲ್ಲಿ ಉಪದೇಶಕರು ನಮ್ಮ ಸ್ನೇಹಿತರಾದರು." ವಿಜ್ಞಾನಿ, ಉರ್ದು ಕವಿ, ಸಮಾಜಶಾಸ್ತ್ರಜ್ಞ ಮತ್ತು ಸಾಕ್ಷ್ಯಚಿತ್ರ ತಯಾರಕ ಗೌಹರ್ ರಝಾ ಅಂದಿನ ಘಟನೆಗಳನ್ನು ನೆನಪಿಸಿಕೊಂಡರು.

ಅವರು ಸಮಾಜವಾದಿ ಪ್ರಪಂಚದ ಕನಸು ಕಂಡರು...

ಅದೇ ಗೌಹರ್ ರಝಾ ಅವರು ಮತ್ತೊಂದು ವಿಷಯವನ್ನು ಹಂಚಿಕೊಂಡರು, "ತುರ್ತು ಪರಿಸ್ಥಿತಿಯ ದಿನಗಳಲ್ಲಿ ಪೊಲೀಸ್ ದಾಳಿಯನ್ನು ಎದುರಿಸಿದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಲು ಸೀತಾ (ಯೆಚೂರಿಯವರ ಸ್ನೇಹಿತರು ಅವರನ್ನು ಸೀತಾ ಎಂದೇ ಕರೆಯುತ್ತಿದ್ದರು) ಒಂದು ಸಂಜೆ ಜೆಎನ್‌ಯು ಹಳೆಯ ಲೈಬ್ರರಿಯಲ್ಲಿ ತುರ್ತು ಸಭೆ ➚

ಅಂತಿಮ ಯಾತ್ರೆ: ಹರಿದ ಕಣ್ಣೀರ ಸಾಗರ



ಸಹಸ್ರಾರು ಸಂಖ್ಯೆಯಲ್ಲಿ ನೆರೆದಿದ್ದ ಜನರ ಕಣ್ಣೀರಿನ ನಡುವೆ ಸೀತಾರಾಂ ಯೆಚೂರಿ ಅವರ ಅಂತ್ಯಕ್ರಿಯೆ ಶನಿವಾರ (ಸೆಪ್ಟೆಂಬರ್ 14) ನಡೆಯಿತು. ಅಂದು ಮಧ್ಯಾಹ್ನ ಮೂರು ಗಂಟೆಗೆ ಗೋಲ್ ಮಾರ್ಕೆಟ್ ನಲ್ಲಿರುವ ಸಿಪಿಎಂ ಕಚೇರಿಯಿಂದ ಶವಯಾತ್ರೆ ಆರಂಭವಾಯಿತು. ಇದು ಗುರುದ್ವಾರ, ಕೇಂದ್ರ ಚುನಾವಣಾ ಆಯೋಗದ ಕಚೇರಿ, ದಕ್ ಭವನ, ಪಟೇಲ್ ಚೌಕ್ ಮೆಟ್ರೋ ನಿಲ್ದಾಣವನ್ನು ಜಂತರ್ ಮಂತರ್ ರಸ್ತೆಯವರೆಗೆ ವಿಸ್ತರಿಸಿತು. ಯೆಚೂರಿ ಅವರ ಚಿತ್ರಗಳು, ಸಿಪಿಎಂ ಧ್ವಜಗಳನ್ನು ಹಿಡಿದು ಘೋಷಣೆಗಳನ್ನು ಕೂಗುತ್ತಾ ಕೆಂಪು ಅಂಗಿ ಸ್ವಯಂಸೇವಕರು ಸುಮಾರು ಎರಡು ಕಿಲೋಮೀಟರ್‌ಗಳ ಅಂತಿಮ ಮೆರವಣಿಗೆಯಲ್ಲಿ ಪಾಲ್ಗೊಂಡರು.

ಅವರ ನಂತರ ಆಂಬ್ಯುಲೆನ್ಸ್ ಯೆಚೂರಿ ಅವರ ಮೃತದೇಹದೊಂದಿಗೆ ತೆರಳಿತು. ಸಿಪಿಎಂ ಪಾಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್, ಮಾಣಿಕ್ ಸರ್ಕಾರ್, ಬೃಂದಾಕಾರಟ್, ಬಿ.ವಿ.ರಾಘವುಲು, ಅಶೋಕ್ ದವಳೆ, ಜಿ.ರಾಮಕೃಷ್ಣನ್, ಎಂ.ಎ.ಬೇಬಿ, ವಿಜಯರಾಘವನ್, ಎಂ.ವಿ.ಗೋವಿಂದನ್ ಮಾಸ್ಟರ್ ಮತ್ತಿತರರು ಆ್ಯಂಬುಲೆನ್ಸ್ ಹಿಂದೆ ತೆರಳುತ್ತಿದ್ದರು. ಕೇಂದ್ರ ಸಮಿತಿಯ ಸದಸ್ಯರು, ಪ್ರತಿನಿಧಿಗಳು, ಪ್ರಾಧ್ಯಾಪಕರು, ವಿದ್ಯಾರ್ಥಿಗಳು, ವಕೀಲರು ಸೇರಿದಂತೆ ವಿವಿಧ ರಾಜ್ಯಗಳಿಂದ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡರು. ಯಾತ್ರೆಯ ಮಾರ್ಗದುದ್ದಕ್ಕೂ ಜನರು ಯೆಚೂರಿಗೆ ಲಾಲ್ ಸಲಾಂ ಎಂದು ಘೋಷಣೆಗಳನ್ನು ಕೂಗಿದರು. ಜಂತರ್ ಮಂತರ್ ರಸ್ತೆಯಿಂದ ಯಾವುದೇ ಟ್ರಾಫಿಕ್ ಸಮಸ್ಯೆ ಉಂಟಾಗದಂತೆ ಪೊಲೀಸ್ ಬೆಂಗಾವಲಿನಲ್ಲಿ ಪಾರ್ಥಿವ ಶರೀರವನ್ನು ಏಮ್ಸ್ ಗೆ ಸ್ಥಳಾಂತರಿಸಲಾಯಿತು.

ಕರ್ನಾಟಕದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹಾಗೂ ಕೇಂದ್ರ ಸಮಿತಿ ಸದಸ್ಯರಾದ ಯು.ಬಸವರಾಜು, ಕೆ.ಎನ್.ಉಮೇಶ್, ಮೀನಾಕ್ಷಿ ಸುಂದರಂ, ಕೆ.ನೀಲಾ, ಕೆ.ಪ್ರಕಾಶ್, ಡಾ.ಅನಿಲ್ ಕುಮಾರ್, ಮುನಿವೆಂಕಟಪ್ಪ, ಕೆ.ಆರ್. ವೆಂಕಟೇಶ್ ಗೌಡ ಮತ್ತಿತರರು ಅಂತಿಮ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಏಮ್ಸ್‌ನಲ್ಲಿ ಕೊನೆಯ ನೋಟ...

ಸಂಜೆ 4.40ಕ್ಕೆ ಯೆಚೂರಿ ಅವರ ಕುಟುಂಬ ಸದಸ್ಯರು ಮತ್ತು ಸಿಪಿಎಂ ಪಾಲಿಟ್‌ಬ್ಯೂರೊ ಸದಸ್ಯರು ಯೆಚೂರಿ ಅವರ ಪಾರ್ಥಿವ ಶರೀರವನ್ನು ಏಮ್ಸ್ ಅಂಗರಚನಾಶಾಸ್ತ್ರ ವಿಭಾಗಕ್ಕೆ ಹಸ್ತಾಂತರಿಸಿದರು. ಆಸ್ಪತ್ರೆಯ ಅಧಿಕಾರಿಗಳು ಶವವನ್ನು ಸ್ವೀಕರಿಸಿದ ನಂತರ, ಯೆಚೂರಿ ಅವರ ಕುಟುಂಬ ಸದಸ್ಯರಿಗೆ ಪ್ರಮಾಣಪತ್ರವನ್ನು ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ಅಂಗರಚನಾಶಾಸ್ತ್ರ ವಿಭಾಗದಲ್ಲಿ 10 ನಿಮಿಷಗಳ ಕಾಲ ಯೆಚೂರಿ ಅವರನ್ನು ಕೊನೆಯ ಬಾರಿಗೆ ನೋಡುವ ಅವಕಾಶವನ್ನು ಕುಟುಂಬ ಸದಸ್ಯರು ಮತ್ತು ಉನ್ನತ ನಾಯಕರು ಪಡೆದರು. ಇಲ್ಲಿ ಅಂತಿಮ ನಮನ ಸಲ್ಲಿಸಿದ ಬಳಿಕ ಅಲ್ಲಿಂದ ಹೊರ ಬಂದರು. ತಕ್ಷಣವೇ ಆ ಕೊಠಡಿಯ ಬಾಗಿಲು ಮುಚ್ಚಲಾಯಿತು. ಕೆಲ ದಿನಗಳ ಹಿಂದೆ ಅನಾರೋಗ್ಯದ ಕಾರಣ ಯೆಚೂರಿ ಅವರನ್ನು ಏಮ್ಸ್‌ಗೆ ದಾಖಲಿಸಲಾಗಿತ್ತು. ಅಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು ಕೊನೆಯುಸಿರೆಳೆದರು. ಭವಿಷ್ಯದ ಪೀಳಿಗೆಯ ವೈದ್ಯಕೀಯ ವಿದ್ಯಾರ್ಥಿಗಳ ಸಂಶೋಧನೆಗಾಗಿ ಅವರ ಪಾರ್ಥಿವ ಶರೀರವು ಅದೇ ಆಸ್ಪತ್ರೆಯನ್ನು ತಲುಪಿತು.





ಯೆಚೂರಿಯವರ ಆಶಯದಂತೆ ಅವರ ದೇಹವನ್ನು ಕುಟುಂಬ ಸದಸ್ಯರು ಬೋಧನೆ ಮತ್ತು ಸಂಶೋಧನೆಗಾಗಿ ಏಮ್ಸ್ ಗೆ ಹಸ್ತಾಂತರಿಸಿದ್ದಾರೆ.

➘ ನಡೆಸಿದರು. 'ಪೊಲೀಸ್ ದೌರ್ಜನ್ಯವನ್ನು ಧೈರ್ಯದಿಂದ ಎದುರಿಸಿದ ನನ್ನ ಸಹೋದ್ಯೋಗಿಗಳಿಗೆ ಇವು ನನ್ನ ಕ್ರಾಂತಿಕಾರಿ ವಂದನೆಗಳು' ಎಂದು ಅವರು ಹೇಳಿದ ಮಾತು ನನಗೆ ಇನ್ನೂ ನೆನಪಿದೆ. ಬಹುಶಃ ಅದು ಅವರ ಮೊದಲ ಪ್ರತಿಭಟನೆ. ಆ ನಂತರ ನಮ್ಮ ಸೀತಾ ದೇಶದ ರಾಜಕೀಯದಲ್ಲಿ ಹಂತ ಹಂತವಾಗಿ ಬೆಳೆದರು. ಅವರು ಎಸ್‌ಎಫ್‌ಐ ನಾಯಕನಿಂದ ಕಮ್ಯುನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ಪ್ರಧಾನ ಕಾರ್ಯದರ್ಶಿಯಾಗಿ ಬೆಳೆದ ರೀತಿಗೆ ನಾನು ಯಾವಾಗಲೂ ಹೆಮ್ಮೆಪಡುತ್ತೇನೆ. ಪಿ.ಸುಂದರಯ್ಯ, ಇ.ಎಂ.ಎಸ್.ನಂಬೂದ್ರಿಪಾಡ್ ಮತ್ತು ಹರಿಕಿಶನ್ ಸಿಂಗ್ ಸುರ್ಜಿತ್ ಅವರಂತಹ ಮಾರ್ಕ್ಸ್‌ವಾದಿ ಬುದ್ಧಿಜೀವಿಗಳ ನಂತರ ಸೀತಾರಾಮ್ ಅವರು ವಿಶೇಷ ಸ್ಥಾನವನ್ನು ಗಳಿಸಿದರು. ಅಷ್ಟೊಂದು ಜ್ಞಾನಿಯಾಗಿರುವ ಯೆಚೂರಿ, ಬಯಸಿದಲ್ಲಿ, ಶ್ರೇಷ್ಠ ಸ್ಥಾನಮಾನ ಮತ್ತು ಸ್ಥಾನಮಾನದ ವೃತ್ತಿಯಲ್ಲಿ ಉತ್ಕೃಷ್ಟನಾಗುತ್ತಿದ್ದರು. ಅವರು ಸಮಾಜದಲ್ಲಿ ನಂಬಿಕೆಯಿಟ್ಟ ಶ್ರಮಜೀವಿಗಳ ನೇತೃತ್ವದ ಪಕ್ಷಕ್ಕೆ ಸೇರಿದರು. ಅವರು ಸಮಾಜವಾದಿ ಪ್ರಪಂಚದ ಕನಸು ಕಂಡರು. ಅವರು ತಮ್ಮ ಜೀವನದ ಕೊನೆಯವರೆಗೂ ಅದಕ್ಕಾಗಿ ಶ್ರಮಿಸಿದರು. ಹೋರಾಟಗಾರರು, ಬುದ್ಧಿಜೀವಿಗಳು ಮತ್ತು ರಾಜಕಾರಣಿಗಳಿಗೆ ದೊಡ್ಡ ಸ್ಫೂರ್ತಿಯಾದರು. ಅದೆಷ್ಟೋ ಮಂದಿಗೆ ಮಾರ್ಗದರ್ಶನ ನೀಡಿದ ನನ್ನ ಒಡನಾಡಿ ಸೀತಾಗೆ ರೆಡ್ ಸೆಲ್ಯೂಟ್' ಎಂದು ಕಣ್ಣೀರು ಹಾಕುತ್ತಾ ಮಾತು ಮುಗಿಸಿದರು ಗೌಹರ್ ರಝಾ.

ಯೆಚೂರಿಯ ಹೆಸರು ಸೀತಾ!!

ಕಾಮ್ರೇಡ್ ಯೆಚೂರಿ ಯಂತೆ, ಕಾಮ್ರೇಡ್ ಸೀತಾರಾಮ್ ರಂತೆ ಜಗತ್ತಿಗೆ ಪರಿಚಯ. ಆದರೆ ಅವರ ಪ್ರೀತಿಪಾತ್ರರಿಗೆ ಅವರು ಯಾವಾಗಲೂ 'ಸೀತಾ'. ಎಲ್ಲ ಗೆಳೆಯರಿಂದ ಪ್ರೀತಿಯಿಂದ ಸೀತಾ ಎಂದು ಕರೆಯಲ್ಪಡುತ್ತಿದ್ದರು. ನಮ್ಮ ಪೀಳಿಗೆಗೆ ದೊಡ್ಡ ರಾಜಕೀಯ ಮತ್ತು ಬೌದ್ಧಿಕ ಸಂಪತ್ತನ್ನು ಒದಗಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ" ಎಂದು ಜೆಎನ್‌ಯುನಲ್ಲಿ ಓದುತ್ತಿದ್ದಾಗ ಯೆಚೂರಿ ಅವರೊಂದಿಗೆ ಹಾಸ್ಟೆಲ್ ಕೋಣೆಯನ್ನು ಹಂಚಿಕೊಂಡ ಆನಂದ್ ಕುಮಾರ್ ಹೇಳಿದರು. ❑

ಹಿಂದೂ-ಮುಸ್ಲಿಮ್ ಸೌಹಾರ್ದತೆ ಬೇಡ ಘರ್ಷಣೆ-ಗಲಭೆಗಳು ಬೇಕು!!



ಪ್ರಚಲಿತ
ಆರ್.ರಾಮಕೃಷ್ಣ

ಗಣಪತಿ ವಿಸರ್ಜನಾ ಮೆರವಣಿಗೆಯ ಮಾರ್ಗದಲ್ಲಿ ಮಸೀದಿಯ ಮುಂದೆ ಮೆರವಣಿಗೆ ನಿಲ್ಲಿಸಿ ಪ್ರಚೋದನಕಾರಿಯಾಗಿ ವರ್ತಿಸಿದ ಹಿನ್ನೆಲೆಯಲ್ಲಿ, ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಮೆರವಣಿಗೆಯ ಮೇಲೆ ಕಲ್ಲೆಸೆತ ನಡೆದು, ಸೆಪ್ಟೆಂಬರ್ 11, 2024 ರ ರಾತ್ರಿ ಕೋಮು ಘರ್ಷಣೆ ಏರ್ಪಟ್ಟಿದ್ದು ವರದಿಯಾಗಿದೆ. ಅಂಗಡಿಗಳು ವಾಹನಗಳು ಬೆಂಕಿಗೆ ಆಹುತಿಯಾಗಿವೆ. (ಈ ಬಗೆಗೆ ವಿವರವಾದ ಮತ್ತೊಂದು ಬರಹ ಪತ್ರಿಕೆಯಲ್ಲಿದೆ.) ಇಲ್ಲಿ ಗಮನಿಸಬೇಕಾದ ಕೆಲವು ಬಹಳ ಮುಖ್ಯವಾದ ವಿಷಯವೊಂದಿದೆ.

ಈ ವರ್ಷ ದಕ್ಷಿಣ ಕನ್ನಡ ಜಿಲ್ಲೆಯ ಹಲವಾರು ಕಡೆಗಳಲ್ಲಿ ಗಣೇಶ ವಿಸರ್ಜನಾ ಮೆರವಣಿಗೆಯ ಸಂದರ್ಭದಲ್ಲಿ ಮುಸ್ಲಿಂ ಸಮುದಾಯದ ಬಂಧುಗಳು, ಮಸೀದಿ ಕಮಿಟಿಯವರು ಮೆರವಣಿಗೆಯಲ್ಲಿ ಸಾಗುವವರಿಗೆ ಸಿಹಿತಿಂಡಿ, ಸಿಹಿಪಾನಕ ಮುಂತಾದವುಗಳನ್ನು ವಿತರಿಸಿ ಸೌಹಾರ್ದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ವರದಿಯಾಗಿದೆ.

ಆದರೆ, ಬಂಟ್ವಾಳ ತಾಲ್ಲೂಕಿನ ಬೋಳಂತೂರು ತುಳಸಿವನ ಪ್ರದೇಶದ ಗಣೇಶ ಸಮಿತಿಯವರು, ಗಣೇಶ ವಿಸರ್ಜನಾ ಮೆರವಣಿಗೆ ಸಂದರ್ಭದಲ್ಲಿ ಮುಸ್ಲಿಮರು ಸಿಹಿ ವಿತರಣೆ ಮಾಡಬಾರದು ಎಂದು ಮಸೀದಿ ಕಮಿಟಿಗೆ ಪತ್ರ ಬರೆದು ಆಕ್ಷೇಪ ಎತ್ತಿದ್ದಾರೆ. ಈ ಆಕ್ಷೇಪಕ್ಕೆ ಕೆಲವು ಹಿಂದುತ್ವವಾದಿ ಸಂಘಟನೆಯ ಮುಖಂಡರು ಬೆಂಬಲಿಸಿದ್ದಾರೆ. ಆದರೆ ಜನಸಾಮಾನ್ಯರು ಇಂತಹ ಆಕ್ಷೇಪಣೆಗಳಿಗೆ ಹೆಚ್ಚಿನ ಬೆಂಬಲ ನೀಡದೇ ಹಿಂದೂ ಮುಸ್ಲಿಮ್ ಸೌಹಾರ್ದತೆಯ ಈ ಕೆಲಸವನ್ನು ಸ್ವಾಗತಿಸಿರುವುದು ಗಮನಾರ್ಹ. ಸಂಕುಚಿತ ಹಿತಾಸಕ್ತಿಯ ರಾಜಕೀಯ ಪಿತೂರಿಗಳು ಇಲ್ಲದೇ ಇದ್ದರೆ ಜನಸಾಮಾನ್ಯರು ಸೌಹಾರ್ದತೆ ಸಂಸ್ಕೃತಿಯನ್ನು ತಾವೇ ರೂಪಿಸುತ್ತಾರೆ ಎಂಬುದಕ್ಕೆ ಇದು ಒಂದು ನಿದರ್ಶನ. ನಾಗಮಂಗಲ ಗಲಭೆ ಪ್ರಕರಣದಲ್ಲಿ ರಾಜ್ಯ ಬಿಜೆಪಿ ಮುಖಂಡರು, ಏಕಮುಖವಾಗಿ ಮುಸ್ಲಿಮರನ್ನು ಮಾತ್ರ ನಿಂದಿಸುವ, ಅವಹೇಳನ ಮಾಡುವ ದ್ವೇಷಪೂರಿತ ಮಾತುಗಳನ್ನು ಆಡುತ್ತಿದ್ದಾರೆ. ಅವರಿಗೆ ಸದಾ ಹಿಂದೂ-ಮುಸ್ಲಿಮ್ ಸಂಘರ್ಷ ನಡೆಯುತ್ತಿದ್ದರೆ ಬಹಳ ಸಂತೋಷ ಮತ್ತು ಲಾಭ. ಅದಕ್ಕೆ ಅವರು ಸೌಹಾರ್ದಪರವಾದ ಯಾವುದನ್ನೂ ಸಹಿಸಿಕೊಳ್ಳುವುದಿಲ್ಲ. ಎಲ್ಲ ಕಡೆ ಕೊಳ್ಳಿ ಇಡುವ ಮಾತುಗಳನ್ನೇ ಆಡುತ್ತಾರೆ.

ಆಹಾರದ ಹಕ್ಕಿನ ಮೇಲೆ ಇನ್ನಿಲ್ಲದ ದಾಳಿಗಳು

ಆಹಾರ ಮನುಷ್ಯನ ಖಾಸಗಿ ವಿಷಯ. ಸಸ್ಯಾಹಾರವೋ, ಮಾಂಸಾಹಾರವೋ ಅದು ಅವರವರ ಆಯ್ಕೆಗೆ ಬಿಟ್ಟದ್ದು. ನಾವು ದನದ ಮಾಂಸ ತಿನ್ನುವುದಿಲ್ಲ ಎಂಬುವವರನ್ನು ಯಾರೂ ಬಲವಂತ ಮಾಡುವಂತಿಲ್ಲ. ಹಾಗೆ ದನದ ಮಾಂಸ ತಿನ್ನುವವರ 'ಆಹಾರ ಸ್ವಾತಂತ್ರ್ಯ'ಕ್ಕೆ ಅಡ್ಡಿ ಮಾಡುವುದು ಪ್ರಜಾಪ್ರಭುತ್ವದಲ್ಲಿ ಒಪ್ಪಲಾಗದ ಕೆಲಸ. ಆದರೆ ದೇಶದಲ್ಲಿ 'ಗೋಸಂರಕ್ಷಣೆ'ಯ ಹೆಸರಿನಲ್ಲಿ ಅಮಾಯಕರ ಮೇಲೆ ಹಲ್ಲೆ ಮಾಡುವುದು, ಕೊಲ್ಲುವುದು ವಿಪರೀತವಾಗಿ ಹೆಚ್ಚುತ್ತಿರುವುದು ಒಂದು ಆತಂಕಕಾರಿ ವಿದ್ಯಮಾನವಾಗಿದೆ. ದನದ ಮಾಂಸ ತಿಂದದ್ದಕ್ಕೆ ಮಾತ್ರವಲ್ಲ, ದನದ ಮಾಂಸ ತಿಂದಿರಬಹುದು, ದನದ ಮಾಂಸವನ್ನು ಸಾಗಿಸುತ್ತಿರಬಹುದು ಎಂಬ ಕೇವಲ ಅನುಮಾನಗಳ ಆಧಾರದಲ್ಲಿ ಕೊಲೆ ಮತ್ತು ಹಲ್ಲೆಗಳು ನಡೆಯುತ್ತಿರುವುದು ಪರಿಸ್ಥಿತಿಯ ತೀವ್ರತೆ ಏನೆಂಬುದಕ್ಕೆ ಸಾಕ್ಷಿಯಾಗಿದೆ. ಇಲ್ಲಿ ಕೊಲೆ ಮತ್ತು ಹಲ್ಲೆ ಅಂದಾಗ ಬಹುತೇಕ ಈ ರೀತಿಯ ದಾಳಿಗೆ ಒಳಗಾಗುವವರು ಮತೀಯ ಅಲ್ಪಸಂಖ್ಯಾತ ಮುಸ್ಲಿಮರು ಮತ್ತು ದಲಿತರು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಉತ್ತಮ ಶಿಕ್ಷಕ ಪ್ರಶಸ್ತಿ ಯಾರಿಗೆ?

ಮಕ್ಕಳಿಗೆ ಶಿಕ್ಷಣದ ಅವಕಾಶಗಳ ವಂಚನೆಯಾಗದಂತೆ ಉತ್ತಮವಾಗಿ ಕಲಿಸುವವರು, ವಿದ್ಯಾರ್ಥಿ ಪೋಷಕರ ವಿಶ್ವಾಸ ಗಳಿಸಿ ಶಾಲಾ ಕಾಲೇಜಿಗೆ ಹೆಚ್ಚು ಹೆಚ್ಚು ಮಕ್ಕಳು ಸೇರುವಂತೆ ಉತ್ತಮ ಶೈಕ್ಷಣಿಕ ವಾತಾವರಣವನ್ನು ಸೃಷ್ಟಿಸುವ ಮುಖ್ಯ ಶಿಕ್ಷಕರು, ಪ್ರಾಂಶುಪಾಲರು ಉತ್ತಮ ಶಿಕ್ಷಕ ಅಥವಾ ಉತ್ತಮ ಶಿಕ್ಷಕಿ ಪ್ರಶಸ್ತಿಗೆ ಆಯ್ಕೆಯಾಗಬೇಕು. ಉಡುಪಿ ಜಿಲ್ಲೆಯ 2022 ನೇ ಸಾಲಿನ ಉತ್ತಮ ಶಿಕ್ಷಕ ಪ್ರಶಸ್ತಿಗೆ ಅಲ್ಲಿನ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಬಿ.ಜಿ.ಕೃಷ್ಣಾ ಅವರನ್ನು ಆಯ್ಕೆ ಮಾಡಿದ್ದು ಸಾಕಷ್ಟು ವಿವಾದವಾಗಿ, ಕೊನೆಗೆ ಸರಕಾರ ಅವರಿಗೆ ನೀಡಲಾಗಿದ್ದ ಪ್ರಶಸ್ತಿಯನ್ನು ವಾಪಸ್ ಪಡೆದಿದೆ.

2022 ರಲ್ಲಿ ಬಿ.ಜಿ.ಕೃಷ್ಣಾ ಅವರ ಮುಖ್ಯ ಸಾಧನೆ ಏನು? ಹಿಜಾಬ್ ಧರಿಸಿ ಕಾಲೇಜಿಗೆ ಬರುತ್ತಿದ್ದ ಮುಸ್ಲಿಮ್ ವಿದ್ಯಾರ್ಥಿನಿಯರನ್ನು, ಅವರು ಕಾಲೇಜಿನ ಕಾಂಪೌಂಡ್ ಒಳಗೆ ಬರದಂತೆ ತಡೆದು, ಗೇಟ್ ಹಾಕಿ ವಿದ್ಯಾರ್ಥಿನಿಯರ ಶೈಕ್ಷಣಿಕ ಜೀವನಕ್ಕೆ ಕಲ್ಲು ಹಾಕಿದ ಹಿರಿಮೆ ಈ ಕೃಷ್ಣಾ ಅವರದ್ದು. ಉಡುಪಿ ಜಿಲ್ಲೆಯಿಂದ ಸಿಡಿದ ಈ ಕಿಡಿ, ಬೆಂಕಿಯ ಜ್ವಾಲೆಯಾಗಿ ಇಡೀ ರಾಜ್ಯಕ್ಕೆ ಹರಡಿ, ರಾಜ್ಯದ ಉದ್ದಗಲ ಶಾಲೆ-ಕಾಲೇಜುಗಳಲ್ಲಿ ಹಿಂದೂ-ಮುಸ್ಲಿಂ ಎಂಬ ವಿಭಜನೆಯನ್ನು, ಭಾವೋದ್ರೇಕದ ಮತ್ತು ಸಂಘರ್ಷದ ಆತಂಕಕಾರಿ ವಾತಾವರಣವನ್ನು ಸೃಷ್ಟಿಸಿತು. ಬಿ.ಜಿ.ಕೃಷ್ಣಾ ಅವರಿಗೆ ನೀಡಿದ್ದ ಪ್ರಶಸ್ತಿಯನ್ನು ವಾಪಸ್ ಪಡೆಯಲಾಗಿದೆ ಎಂಬುದು ಸಮಾಧಾನಕರವಾದರೂ ಇಂತಹ ಒಬ್ಬ ಶಿಕ್ಷಣ ವಿರೋಧಿ, ಕೋಮುವಾದಿ ಶಿಕ್ಷಕನು ಉತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆಯಾಗಿದ್ದಾದರೂ ಹೇಗೆ ಎಂಬ ಪ್ರಶ್ನೆಯೂ ಇಲ್ಲಿ ಮುಖ್ಯ. ಸರಕಾರ, ಶಿಕ್ಷಣ ಇಲಾಖೆಗಳು ಶಿಕ್ಷಣ ಕ್ಷೇತ್ರದಲ್ಲಿ ಕೋಮುವಾದದ ಬಗೆಗೆ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ವಿಷ ಹರಡುತ್ತಿರುವ ಕೋಮುವಾದಿ ಶಕ್ತಿಗಳ ಬಗೆಗೆ ಸಾಕಷ್ಟು ಎಚ್ಚರಿಕೆ ವಹಿಸುತ್ತಿಲ್ಲ ಎಂಬುದನ್ನು ಈ ಬೆಳವಣಿಗೆ ತೋರಿಸುತ್ತದೆ. ಕೋಮುವಾದಿ ಶಕ್ತಿಗಳ ವಿರುದ್ಧ ಜನಾಕ್ರೋಶದ ಅಲೆಯಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷವು ಈ ರೀತಿ ಮೈಮರೆಯುವುದು ಖಂಡಿತ ಒಳ್ಳೆಯ ಲಕ್ಷಣವಲ್ಲ.

* * *

ದನದ ಮಾಂಸ ತಿಂದ ಶಂಕೆ: ಚಂಡೀಗಢದಲ್ಲಿ ಕಾರ್ಮಿಕನ ಕೊಲೆ

ಇತ್ತೀಚೆಗೆ ಹರ್ಯಾಣ ರಾಜ್ಯದಲ್ಲಿ 'ಗೋರಕ್ಷಕರು' ಎಂದು ಹೇಳಿಕೊಳ್ಳುವ ತಂಡವೊಂದು ಆರ್ಯನ್ ಮಿಶ್ರ ಎಂಬ ಯುವಕನನ್ನು ಬೆನ್ನಟ್ಟಿ, ಗುಂಡು ಹಾರಿಸಿ ಕೊಂದಿರುವ ಪ್ರಕರಣದ ಕುರಿತು ಕಳೆದ ಸಂಚಿಕೆಯಲ್ಲಿ ಓದಿದ್ದೀರಿ. ಅದೊಂದು ಬಿಡಿ ಘಟನೆಯಲ್ಲ. ದೇಶದಲ್ಲಿ ಇಂತಹ ಹಲವು ಘಟನೆಗಳು ಸರಣಿಯಂತೆ ನಡೆಯುತ್ತಲೇ ಇವೆ. ಇಲ್ಲಿ ಅಂತಹ ಇತ್ತೀಚಿನ ಪ್ರಕರಣಗಳ ಕುರಿತು ಕೆಲವು ಸಂಕ್ಷಿಪ್ತ ವರದಿಗಳು ಇಲ್ಲಿವೆ.

ಹರ್ಯಾಣ ರಾಜ್ಯದ ಚರಖಿ ದಾದರಿ ಜಿಲ್ಲೆಯಲ್ಲಿ ಸಬೀರ್ ಮಲಿಕ್ ಎಂಬ 26 ವರ್ಷದ ಕಾರ್ಮಿಕನನ್ನು ಆತ ದನದ ಮಾಂಸ ತಿಂದಿರಬಹುದು ಎಂಬ ಸಂಶಯದ ಆಧಾರದಲ್ಲಿ ಕೊಲೆ ಮಾಡಲಾಗಿದೆ. ಆಗಸ್ಟ್ 27, 2024 ರಂದು ಗೋರಕ್ಷಕರೆಂದು ಹೇಳಿಕೊಳ್ಳುವ ದುಷ್ಕರ್ಮಿಗಳ ತಂಡವೊಂದು ಸಬೀರ್ ಮಲಿಕ್ ನನ್ನು ಹೊಡೆದು ಕೊಲೆ ಮಾಡಿದೆ. ಸಬೀರ್ ಮಲಿಕ್ ಪಶ್ಚಿಮ ಬಂಗಾಳ ಮೂಲದ ಬಡ ಕಾರ್ಮಿಕ. ಗುಡಿಸಲು ನಿವಾಸಿ. ಕಟ್ಟಡ ನಿರ್ಮಾಣದ ಕೆಲಸ ಈತನದು. ಈ ಗೂಂಡಾಗಳು ಸಬೀರ್‌ನನ್ನು ನಿರ್ದಿಷ್ಟ ಜಾಗವೊಂದಕ್ಕೆ ಕರೆಸಿಕೊಂಡು ಹೊಡೆಯುವಾಗ ಕೆಲವು ಸ್ಥಳೀಯರು ಅದನ್ನು ತಡೆದರೂ ಸಹ, ಸಬೀರ್‌ನನ್ನು ಮತ್ತೊಂದು ಜಾಗಕ್ಕೆ ಕರೆದುಕೊಂಡು ಹೋಗಿ ಕೊಲೆ ಮಾಡಲಾಗಿದೆ. ಈ ಕೊಲೆ ಸಂಬಂಧದಲ್ಲಿ 7 ಜನ ಆರೋಪಿಗಳನ್ನು ಬಂಧಿಸಲಾಗಿದೆ. ಅದರಲ್ಲಿ ಇಬ್ಬರು ಕಾನೂನು ಸಂಘರ್ಷಕ್ಕೆ ಒಳಪಟ್ಟ ಬಾಲಕರು. ಅಂದರೆ ವಯಸ್ಕರಲ್ಲ, ಇನ್ನೂ ಮಕ್ಕಳು. ಮುಗ್ಧ ಮಕ್ಕಳ ಮನಸ್ಸಿನಲ್ಲಿ ದ್ವೇಷವನ್ನು ಬಿತ್ತಿ, ಅವರನ್ನು ಕೊಲೆಗಡುಕ ದಾರಿಗೆ ನೂಕಲಾಗಿದೆ.

* * *

ಮಹಾರಾಷ್ಟ್ರ: ವೃದ್ಧರ ಮೇಲೆ ಹಲ್ಲೆ

ಇದೇ ಗೋ ಸಂರಕ್ಷಣೆಯ ಹೆಸರಿನಲ್ಲಿ ವಯೋವೃದ್ಧರೊಬ್ಬರ ಮೇಲೆ ತೀವ್ರ ಹಲ್ಲೆ ನಡೆಸಿರುವ ಘಟನೆ ಮಹಾರಾಷ್ಟ್ರದಿಂದ ವರದಿಯಾಗಿದೆ. ಇಲ್ಲೂ ಸಹ ಖಚಿತ ಸಾಕ್ಷ್ಯವಿಲ್ಲದ 'ಶಂಕೆ'ಯ ಆಧಾರದಲ್ಲಿಯೇ ಹಲ್ಲೆ ನಡೆದಿದೆ. ಅಂದರೆ ಆ ವ್ಯಕ್ತಿಯು ಹಸುವಿನ ಮಾಂಸದ ಆಹಾರವನ್ನು ಸಾಗಿಸುತ್ತಿರಬಹುದು ಎಂಬ ಅನುಮಾನವೇ ಹಲ್ಲೆಗೆ ಪ್ರೇರಣೆ. ಈ ಘಟನೆ ನಡೆದಿರುವುದು ಚಲಿಸುತ್ತಿರುವ ರೈಲಿನೊಳಗೆ. ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಇಗತ್ ಪುರಿ ಎಂಬ ಸ್ಥಳದಲ್ಲಿ ಈ ಘಟನೆ ನಡೆದಿದೆ. ಹಲ್ಲೆಗೆ ತುತ್ತಾದ ಮುಸ್ಲಿಮ್ ವೃದ್ಧ ಹಾಜಿ ಅಶ್ರಫ್ ಮುನ್ಯಾರು ಎಂಬುವವರು. ತಮ್ಮ ಮಗಳ ಮನೆಗೆ ಹೋಗುವ ಮಾರ್ಗದಲ್ಲಿ ದಾಳಿಗೆ ಗುರಿಯಾಗಿದ್ದಾರೆ. ಪ್ರಯಾಣಿಕರ ದೊಡ್ಡ ಗುಂಪೊಂದು ಮುನ್ಯಾರು ಅವರನ್ನು ಪ್ರಶ್ನಿಸುವ ಮತ್ತು ಹಲ್ಲೆ ನಡೆಸುವ ವಿಡಿಯೋ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಪ್ರಸಾರವಾಗಿದೆ. ".....ಶ್ರಾವಣ ಮಾಸದಲ್ಲಿ ಮಾಂಸ ಕೊಂಡೊಯ್ಯುತ್ತಿದ್ದೀಯ.." ಎಂದು ಹಲ್ಲೆಕೋರರ ಗುಂಪು ಆಕ್ಷೇಪಿಸಿದೆ. ಕೊಂಡೊಯ್ಯುತ್ತಿರುವುದು ಕೋಣದ ಮಾಂಸದ ಆಹಾರ ಎಂದರೂ ಕೇಳದೇ ಹಲ್ಲೆ ನಡೆಸಲಾಗಿದೆ. ಮಹಾರಾಷ್ಟ್ರದಲ್ಲಿ ಜಾರಿಯಲ್ಲಿರುವ 'ಗೋಹತ್ಯೆ ನಿಷೇಧ ಕಾಯ್ದೆ' ಪ್ರಕಾರ ಕೋಣದ ಮಾಂಸ ಸೇವನೆ ಅಪರಾಧವಲ್ಲ.

* * *

ಬುಲ್ಡೋಜರ್ ನ್ಯಾಯ: ಸುಪ್ರೀಮ್ ಆಕ್ಷೇಪದ ನಡುವೆಯೂ ಸಮರ್ಥನೆ

ಯಾವುದೇ ವ್ಯಕ್ತಿಯ ಹೆಸರು ಯಾವುದೇ ಅಪರಾಧ ಚಟುವಟಿಕೆಯಲ್ಲಿ ಕೇಳಿಬಂದ ಕೂಡಲೇ ಆ ವ್ಯಕ್ತಿ ಮನೆಯನ್ನು ಬುಲ್ಡೋಜರ್ ನುಗ್ಗಿಸಿ ಧ್ವಂಸ ಮಾಡುವ ಒಂದು ಪ್ರವೃತ್ತಿ ಇತ್ತೀಚಿನ ದಶಕದಲ್ಲಿ ಹಬ್ಬುತ್ತಿದೆ. ಸಂವಿಧಾನಬದ್ಧವಾಗಿ ಆಡಳಿತ ನಡೆಸುತ್ತೇವೆ ಎಂದು ಪ್ರಮಾಣ ಮಾಡಿದ ಸರಕಾರಗಳು ಹೀಗೆ ತಾವೇ ದಿಡೀರ್ ನ್ಯಾಯ ಘೋಷಿಸುವ ಈ ಪ್ರವೃತ್ತಿ ಅತ್ಯಂತ ಅಪಾಯಕಾರಿ. ಆರೋಪ ಕೇಳಿಬಂದಾಕ್ಷಣ ಆತ ಅಥವಾ ಆಕೆ ಅಪರಾಧಿ ಅಲ್ಲ. ಸಾಕ್ಷ್ಯಾಧಾರ, ವಾದ-ಪ್ರತಿವಾದಗಳನ್ನು ಪರಿಶೀಲಿಸಿ ತೀರ್ಪು ನೀಡಬೇಕಾದದ್ದು ಮತ್ತು ಅಪರಾಧ ಸಾಬೀತಾದಲ್ಲಿ ಶಿಕ್ಷೆ ನೀಡಬೇಕಾದದ್ದು ನ್ಯಾಯಾಲಯ. ನ್ಯಾಯಾಲಯಗಳು ಕೂಡ ಸಂವಿಧಾನಬದ್ಧವಾದ ಅಂಗೀಕೃತ ಕಾನೂನುಗಳನ್ನು ಆಧರಿಸಿ ಶಿಕ್ಷೆ ನೀಡಬಹುದೇ ಹೊರತು, ನಿರ್ದಿಷ್ಟ ಕಾರಣವಿಲ್ಲದ ಹೊರತು ಅಪರಾಧಿಯ ಮನೆಯನ್ನು ಧ್ವಂಸ ಮಾಡುವಂತ ತೀರ್ಪು ನೀಡಲು ಸಾಧ್ಯವಿಲ್ಲ.

ಈ ಹಿನ್ನೆಲೆಯಲ್ಲಿ ಸುಪ್ರಿಮ್ ಕೋರ್ಟ್ ಈ 'ಬುಲ್ಡೋಜರ್ ನ್ಯಾಯ'ದ ಕುರಿತು ತೀವ್ರವಾದ ಆಕ್ಷೇಪಣೆಯನ್ನು ಎತ್ತಿರುವುದು ಸಮರ್ಪಕವಾಗಿಯೇ ಇದೆ. ಈ ವಿಷಯ ಸದ್ಯಕ್ಕೆ ಸುಪ್ರಿಂ ಕೋರ್ಟ್ ಅಂಗಳದಲ್ಲಿದೆ. ಉತ್ತರ ಪ್ರದೇಶದಂತಹ ದೊಡ್ಡ ರಾಜ್ಯದ ಮುಖ್ಯಮಂತ್ರಿ ಸ್ಥಾನದಲ್ಲಿರುವ ಆದಿತ್ಯನಾಥ ಅವರಂತಹವರು 'ಬುಲ್ಡೋಜರ್ ನ್ಯಾಯ'ವನ್ನು ಸಮರ್ಥಿಸಿಕೊಳ್ಳುವ ಮಾತುಗಳನ್ನು ಆಡಿರುವುದು ವರದಿಯಾಗಿದೆ. ಅಖಿಲೇಶ್ ಯಾದವ್ ಅವರ ಟೀಕೆಗೆ ಪ್ರತಿಕ್ರಿಯೆಯಾಗಿ ಬುಲ್ಡೋಜರ್ ನ್ಯಾಯವನ್ನು ನೀಡಲು ಸರಕಾರ ನಡೆಸುವವರಿಗೆ ಹೃದಯ ಮತ್ತು ಮೆದುಳು ಎರಡೂ ಇರಬೇಕು ಎಂದು ಆದಿತ್ಯನಾಥ್ ಹೇಳಿದ್ದಾರೆ. ಇನ್ನು ಇದೇ ದಾರಿಯಲ್ಲಿ, 'ರಾಜ್ಯಕ್ಕೆ ಆದಿತ್ಯನಾಥ್ ರಂತಹ ಮುಖ್ಯಮಂತ್ರಿ ಬೇಕು' ಎಂದು ಮೈಸೂರು ಕ್ಷೇತ್ರದ ಮಾಜಿ ಸಂಸದ ಪ್ರತಾಪ್ ಸಿಂಹ ಕೋಮುದ್ವೇಷದ ಮಾತುಗನ್ನಾಡಿರುವುದನ್ನು ನೋಡಿದರೆ, ಬಿಜೆಪಿಯ ರಾಜ್ಯ, ಕೇಂದ್ರ ನಾಯಕರಿಗೆ ದೇಶದ ಉನ್ನತ ನ್ಯಾಯಾಲಯದ ಮೇಲೆ ಸಹ ಯಾವುದೇ ಗೌರವ ಇಲ್ಲ ಎಂಬುದನ್ನು ತೋರಿಸುತ್ತದೆ. ❑

ಮಣಿಪುರ: ಜವಾಬ್ದಾರಿಯಿಂದ ನುಣುಚಿಕೊಳ್ಳುವಿಕೆ

ಪ್ರಕಾಶ್ ಕಾರತ್

ಮಣಿಪುರದಲ್ಲಿ ಜನಾಂಗೀಯ ಸಂಘರ್ಷ ಆರಂಭವಾಗಿ 16 ತಿಂಗಳು ಕಳೆದಿದೆ. ಹಿಂಸಾಚಾರದಲ್ಲಿ 250ಕ್ಕೂ ಹೆಚ್ಚು ಜನರು ಮೃತಪಟ್ಟು ಅನೇಕ ಜನರು ಗಾಯಗೊಂಡಿದ್ದಾರೆ. 60,000ಕ್ಕೂ ಅಧಿಕ ಜನರು ಮನೆಮಾರು ಕಳೆದುಕೊಂಡಿದ್ದು ನಿರಾಶ್ರಿತರ ಶಿಬಿರಗಳಲ್ಲಿ ಕಾಲ ಕಳೆಯುತ್ತಿದ್ದಾರೆ.

ಸಂಘರ್ಷಕ್ಕೆ ಕಾರಣವಾದ ಮೂಲಭೂತ ವಿಚಾರಗಳನ್ನು ಬಗೆಹರಿಸುವಲ್ಲಿ ಕೇಂದ್ರ ಸರಕಾರ ಮತ್ತು ರಾಜ್ಯದ ಬಿಜೆಪಿ ಸರಕಾರ ದಯನೀಯವಾಗಿ ಸೋತಿವೆ. ಜನಾಂಗೀಯ ವಿಭಜನೆ ಇನ್ನಷ್ಟು ಹೆಚ್ಚಾಗುವಂತೆ ಪರಿಸ್ಥಿತಿ ಕೈಮೀರಲು ಅವು ಬಿಟ್ಟಿವೆ. ಮುಖ್ಯವಾಗಿ ಕುಕಿ–ಪ್ರಾಬಲ್ಯದ ಗುಡ್ಡಗಾಡು ಪ್ರದೇಶಗಳು ಮತ್ತು ಮೈತಿ ಪ್ರಾಬಲ್ಯದ ಕಣಿವೆ ನಡುವೆ ಬಫರ್ ವಲಯವನ್ನು ಸೃಷ್ಟಿಸಲು ಕೇಂದ್ರೀಯ ಪೊಲೀಸ್ ಪಡೆಗಳ ಸುಮಾರು 60,000 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

> ಮಣಿಪುರಕ್ಕೆ ಸಂಬಂಧಿಸಿ ಕೇಂದ್ರ ಸರಕಾರ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವುದು ಪ್ರಧಾನಿ ಮೋದಿ ಕಳೆದ 16 ತಿಂಗಳಲ್ಲಿ ಒಮ್ಮೆಯೂ ಮಣಿಪುರಕ್ಕೆ ಭೇಟಿ ನೀಡದಿರುವುದರಿಂದ ಎದ್ದು ಕಾಣುತ್ತದೆ.

ಕಳೆದ 15 ದಿನಗಳಲ್ಲಿ ಪರಿಸ್ಥಿತಿ ಗಣನೀಯವಾಗಿ ಹದಗೆಟ್ಟಿದೆ. ಸೆಪ್ಟೆಂಬರ್ ಒಂದರಂದು ಮೈತಿ ಪ್ರಾಬಲ್ಯದ ಇಂಫಾಲ್ ಪಶ್ಚಿಮ ಜಿಲ್ಲೆಯ ಕೌಟ್ರುಕ್‌ನಲ್ಲಿ ನಡೆದ ಡ್ರೋನ್ ದಾಳಿಯಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಈ ದಾಳಿ ಹಾಗೂ ಇನ್ನೊಂದು ಪ್ರದೇಶದಲ್ಲಿ ನಡೆದ ರಾಕೆಟ್ ದಾಳಿಯಲ್ಲಿ ಕೆಲವು ಕುಕಿ ಉಗ್ರಗಾಮಿಗಳ ಕೈವಾಡವಿದೆ ಎಂದು ನಂಬಲಾಗಿದೆ. ಸೆಪ್ಟೆಂಬರ್ 6ರಂದು ಜಿರಿಬಾಮ್ ಜಿಲ್ಲೆಯಲ್ಲಿ ಮೂರು ಸಶಸ್ತ್ರ ಉಗ್ರಗಾಮಿಗಳ ಸಹಿತ ಐದು ಜನರು ಸತ್ತಿದ್ದಾರೆ. ಅದಾದ ಎರಡು ದಿನಗಳ ನಂತರ, ಕುಕಿ ಮೂಲದ ನಿವೃತ್ತ ಸೇನಾ ಸಿಬ್ಬಂದಿಯೊಬ್ಬರನ್ನು ಹೊಡೆದು ಸಾಯಿಸಲಾಗಿದೆ. ಈ ವ್ಯಕ್ತಿ ಬಫರ್ ವಲಯವನ್ನು ದಾಟಿ ಇಂಫಾಲ್ ಪಶ್ಚಿಮದ ಒಂದು ಮೈತಿ ಪ್ರದೇಶಕ್ಕೆ ಹೋಗಿದ್ದರಿಂದ ಈ ಅಮಾನುಷ ಕೃತ್ಯ ನಡೆಸಲಾಗಿದೆ. ಒಂದು ಸಮುದಾಯದ ಜನರು ಇನ್ನೊಂದು ಸಮುದಾಯದವರ ಪ್ರದೇಶಕ್ಕೆ ಪ್ರವೇಶಿಸುವಂತಿಲ್ಲ ಎಂಬುದು ವಾಸ್ತವತೆಯಾಗಿದೆ.

ಇತ್ತೀಚೆಗೆ ಮತ್ತೆ ಹಿಂಸಾಚಾರ ಭುಗಿಲೆದ್ದಿರುವುದರಿಂದ ಇಂಫಾಲ್ ಮತ್ತಿತರ ಕಡೆಗಳಲ್ಲಿ ವಿದ್ಯಾರ್ಥಿಗಳು ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆಗೆ ಇಳಿದಿದ್ದಾರೆ. ರಾಜ್ಯದ ಭದ್ರತಾ ಸಲಹೆಗಾರ ಮತ್ತು ಪೊಲೀಸ್ ಮಹಾನಿರ್ದೇಶಕರನ್ನು (ಡಿಜಿಪಿ) ವಜಾ ಮಾಡಬೇಕೆನ್ನುವುದು ವಿದ್ಯಾರ್ಥಿಗಳ ಹಕ್ಕೊತ್ತಾಯವಾಗಿದೆ. ಕುಕಿ ಉಗ್ರಗಾಮಿಗಳೊಂದಿಗೆ ಮಾಡಿಕೊಳ್ಳಲಾಗಿರುವ ಕಾರ್ಯಾಚರಣೆ ಅಮಾನತು (ಎಸ್‌ಒಒ) ಒಪ್ಪಂದವನ್ನು ರದ್ದು ಪಡಿಸಬೇಕು ಹಾಗೂ ಏಕೀಕೃತ ಕಮಾಂಡ್ ಕಂಟ್ರೋಲ್ ಅನ್ನು ರಾಜ್ಯ ಸರಕಾರಕ್ಕೆ ಹಸ್ತಾಂತರಿಸ ಬೇಕೆನ್ನುವುದೂ ಅವರ ಆಗ್ರಹವಾಗಿದೆ. ಪೊಲೀಸರೊಂದಿಗೆ ಘರ್ಷಣೆಗಳು ನಡೆದಿರುವುದರಿಂದ ಇಂಫಾಲ್ ಪೂರ್ವ ಮತ್ತು ಪಶ್ಚಿಮ ಜಿಲ್ಲೆಗಳಲ್ಲಿ ಕರ್ಫ್ಯೂ ವಿಧಿಸಲಾಗಿದೆ. ಇಂಟರ್‌ನೆಟ್ ಮತ್ತು ಮೊಬೈಲ್ ಡಾಟಾ ಸೇವೆಗಳ ಮೇಲೆ ನಿಷೇಧವನ್ನೂ ಹೇರಲಾಗಿದೆ.

ರಾಜಕೀಯ ಸಮಸ್ಯೆಗಳನ್ನು ಉಭಯ ಕಡೆಗಳವರ ಜತೆ ಸಂಧಾನ ಮತ್ತು ಮಾತುಕತೆ ನಡೆಸಿ ಬಗೆಹರಿಸಲು ವಿಫಲವಾಗಿರುವುದರಿಂದ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಅನಗತ್ಯವಾಗಿ ಭದ್ರತಾ ಪಡೆಗಳನ್ನು ಅವಲಂಬಿಸುವಂತೆ ಆಗಿದೆ. ಇದರಿಂದ ಶಾಂತಿ ಮರೀಚಿಕೆಯಾಗಿದೆ. ಹೀಗಾಗಿ, ಕೇಂದ್ರೀಯ ಪೊಲೀಸ್ ಪಡೆಗಳು, ಅದರಲ್ಲೂ ವಿಶೇಷವಾಗಿ ಅಸ್ಸಾಂ ರೈಫಲ್ಸ್ ಮತ್ತಿತರ ಪಡೆಗಳು ಮೇಲುಗೈ ಪಡೆದ ಸ್ಥಿತಿಯಲ್ಲಿವೆ. ಅಸ್ಸಾಂ ರೈಫಲ್ಸ್ ಮತ್ತಿತರ ಕೇಂದ್ರೀಯ ಪಡೆಗಳನ್ನು ವಾಪಸ್ ಕರೆಸಿಕೊಳ್ಳುವಂತೆ ಮೈತಿ ರಾಜಕಾರಣಿಗಳು ಮತ್ತು ಗುಂಪುಗಳು ಒತ್ತಾಯಿಸುವುದರೊಂದಿಗೆ ಕುಕಿ ಉಗ್ರರು ಡ್ರೋನ್ ಮತ್ತು ರಾಕೆಟ್‌ಗಳನ್ನು ಬಳಸುತ್ತಿರುವುದರಿಂದ ಸಂಘರ್ಷದಲ್ಲಿ ಬಾಹ್ಯ ಶಕ್ತಿಗಳು ಒಳಗೊಂಡಿರುವ ಭಯ ಇನ್ನಷ್ಟು ಹೆಚ್ಚಿದೆ. ಇದು ರಾಷ್ಟ್ರೀಯ ಭದ್ರತೆ ಮೇಲೆ ಪರಿಣಾಮ ಬೀರಲಿದೆ.



ಕುಕಿ ಉಗ್ರಗಾಮಿಗಳೊಂದಿಗಿನ ಎಸ್‌ಒಒ ಒಪ್ಪಂದ ರದ್ದತಿಯ ಬೇಡಿಕೆಯನ್ನು ಮುಖ್ಯಮಂತ್ರಿ ಎನ್.ಬೀರೇನ್ ಸಿಂಗ್ ಕೂಡ ಎತ್ತಿದ್ದು, ಇದು ಗುಡ್ಡಗಾಡು ಪ್ರದೇಶಗಳಲ್ಲಿ ಹೊಸದಾಗಿ ಬಂಡುಕೋರ ಚಟುವಟಿಕೆ ಆರಂಭಕ್ಕೆ ಹಾದಿ ಮಾಡಿಕೊಡುವ ಸಂಭವವಿದೆ. ಅದು ಬಂಡಾಯವನ್ನು ಹತ್ತಿಕ್ಕಲು ಸೇನೆಯನ್ನು ನಿಯೋಜಿಸಲು ಕಾರಣವಾಗಬಹುದಾಗಿದೆ.

ಮೈತಿ ಸಮುದಾಯಕ್ಕೆ ಪರಿಶಿಷ್ಟ ಪಂಗಡ (ಎಸ್‌ಟಿ) ಸ್ಥಾನಮಾನದ ಬೇಡಿಕೆ ಹಾಗೂ ಅದಕ್ಕೆ ಕುಕಿ–ಝೋ ಸಮುದಾಯದಿಂದ ಉಂಟಾದ ಪ್ರತಿರೋಧದಿಂದ ಆರಂಭವಾದ ಸಂಘರ್ಷವು ಸಿಎಂ ಬೀರೇನ್ ಸಿಂಗ್‌ರ ಪಕ್ಷಪಾತಿ ಪಾತ್ರದಿಂದಾಗಿ ವಿಷಮಿಸಿತು. ಸಿಂಗ್ ಕೆಲವು ನಿರ್ದಿಷ್ಟ ಮೈತಿ ಉಗ್ರಗಾಮಿ ಸಂಸ್ಥೆಗಳನ್ನು ಪೋಷಿಸುತ್ತಿದ್ದಾರೆ. ದೊಂಬಿಗಳ ವಿಚಾರಣೆ ನಡೆಸುತ್ತಿರುವ ನ್ಯಾಯಾಂಗ ಆಯೋಗಕ್ಕೆ ಸಲ್ಲಿಸಲಾಗಿರುವ ಆಡಿಯೋ ಕಡತವೊಂದು ಬಹಳ ಸಂಚಲನ ಮೂಡಿಸಿದೆ. ಮುಖ್ಯಮಂತ್ರಿ ಸಿಂಗ್ ತಮ್ಮ ಅಧಿಕೃತ ನಿವಾಸದಲ್ಲಿ ಪಕ್ಷಪಾತಿತನದ ಮಾತನಾಡಿರುವುದು ಮತ್ತು ರಾಜ್ಯ ಪೊಲೀಸ್ ಶಸ್ತ್ರಾಗಾರದಿಂದ ಸಾವಿರಾರು ಶಸ್ತ್ರಾಸ್ತ್ರಗಳನ್ನು ಲೂಟಿ ಮಾಡಿದವರನ್ನು ತಾನು ಹೇಗೆ ರಕ್ಷಿಸಿದೆ ಎಂದು ಹೇಳಿದ್ದನ್ನು ಈ ಆಡಿಯೋ ಫೈಲ್ ಬಹಿರಂಗಪಡಿಸಿದೆ. ಮುಖ್ಯಮಂತ್ರಿಯಾಗಿ ನಿಷ್ಪಕ್ಷಪಾತ ನಿಲುವು ತಳೆಯಲು ಬೀರೇನ್ ಸಿಂಗ್ ನಿರಾಕರಿಸುತ್ತಿರುವುದು ಸಮಸ್ಯೆಯ ಮೂಲ ಕಾರಣವಾಗಿದೆ.

ಮುಖ್ಯಮಂತ್ರಿಯ ವಿಭಜನಕಾರಿ ಪಾತ್ರದ ಬಗ್ಗೆ ಚೆನ್ನಾಗಿ ಗೊತ್ತಿದ್ದರೂ ಮೋದಿ ಸರಕಾರ ಮತ್ತು ಬಿಜೆಪಿ ಕೇಂದ್ರ ನಾಯಕತ್ವವು ಸಿಂಗ್ ಧೋರಣೆ ಜತೆಗೇ ಅಂಟಿಕೊಂಡಿದೆ. ರಾಜಕೀಯ ಮಟ್ಟದಲ್ಲಿ, ಮೈತಿ ಸಮುದಾಯದ ಉಗ್ರಗಾಮಿ ಅರಾಜಕವಾದದ ಬೆಂಕಿಗೆ ಬಿಜೆಪಿ ಮತ್ತು ಆರೆಸ್ಸೆಸ್ ತುಪ್ಪ ಸುರಿಯುತ್ತಿರುವುದು ಸ್ಪಷ್ಟವಾಗಿದೆ. ಅರಂಬೈ ತೆಂಗೊಲ್ ಎಂಬ ಮೈತಿ ಉಗ್ರ ಸಂಘಟನೆಯ ಸಂಸ್ಥಾಪಕ ಎಲ್.ಸನಜಾವೊಬಾ ಅವರನ್ನು ರಾಜ್ಯ ಸಭೆಯ ಸದಸ್ಯರಾಗಿ ಮಾಡಿದ್ದು ಇದಕ್ಕೆ ಪುರಾವೆಯಾಗಿದೆ. ಸುದೀರ್ಘ ಬಿಕ್ಕಟ್ಟು ಎರಡೂ ಸಮುದಾಯಗಳ ಉಗ್ರಗಾಮಿ ಶಕ್ತಿಗಳ ಕೈಗಳನ್ನು ಬಲಪಡಿಸಿದೆಯಷ್ಟೇ.

ಮಣಿಪುರಕ್ಕೆ ಸಂಬಂಧಿಸಿ ಕೇಂದ್ರ ಸರಕಾರ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವುದು ಪ್ರಧಾನಿ ಮೋದಿ ಕಳೆದ 16 ತಿಂಗಳಲ್ಲಿ ಒಮ್ಮೆಯೂ ಮಣಿಪುರಕ್ಕೆ ಭೇಟಿ ನೀಡದಿರುವುದರಿಂದ ಎದ್ದು ಕಾಣುತ್ತದೆ. ಕೇಂದ್ರ ಸರಕಾರ ನೇರವಾಗಿ ಮಧ್ಯಪ್ರವೇಶ ಮಾಡಿ ಪ್ರಮುಖ ಜನಾಂಗೀಯ ಗುಂಪುಗಳ ನಡುವೆ ರಾಜಕೀಯ ಸಂಧಾನವನ್ನು ಆರಂಭಿಸಬೇಕು. ಮತ್ತು ಎಲ್ಲಾ ಸಮುದಾಯಗಳ ಪ್ರಜೆಗಳ ಹಕ್ಕುಗಳ ರಕ್ಷಣೆಯಾಗುವಂತೆ ಶಾಂತಿ ಮತ್ತು ಸಹಜತೆಯನ್ನು ಮರುಸ್ಥಾಪನೆ ಮಾಡಬೇಕು. ಮಣಿಪುರದ ಈ ಹುಣ್ಣನ್ನು ಗುಣಪಡಿಸದಿದ್ದರೆ ಅದು ಈಶಾನ್ಯ ಭಾರತದಲ್ಲಿ ವ್ಯಾಪಕ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆಯಿದೆ.

ಅನು: ವಿಶ್ವ

ತಿದ್ದುಪಡಿ

ಕಳೆದ ಸಂಚಿಕೆಯ (37) ಮುಖಪುಟದಲ್ಲಿ ಪಿಂಚಣಿ.......... ಕಣ್ತಪ್ಪಿನಿಂದ ತಪ್ಪಾಗಿದೆ. ಅದು ಹಳೆಯ ಪಿಂಚಣಿ ಪದ್ಧತಿಯೇ ಉತ್ತಮ ಎಂದಾಗಬೇಕಿತ್ತು.

–ಸಂ.

ಕಾಮ್ರೇಡ್ ಸೀತಾರಾಮ್



ದುಃಖದ ಕಡಲ ದಾಟಿಸುವ
ನಾವಿಕ ನೀ ನಮಗೆ
ಅರ್ಧೆಗೆ ಹಠ
ಮಾಡಿದವರಂತೆ ಎದ್ದು ನಡೆದೆ?
ಉಸಿರು ಕಸಿವ ದುರುಳರ
ತೆರೆಯಬ್ಬರ ಏಳುತ್ತಿರುವಾಗಲೇ
ಕಣ್ಮುಚ್ಚಿದ್ದು ಮಾತ್ರ ಅನ್ಯಾಯ
–ಎಂದು ಧಿಕ್ಕಾರ ಕೂಗಲೇ?

ವಿಕೋಪಗಳ ನೆರೆಹಾವಳಿ ಸುತ್ತೆಲ್ಲ
ದಡದಲ್ಲಿ ಕೂಡ ಕಡಲ್ಕೊರೆತ ಈಗ
ಬುಸುಗುಡುವ ವಿಷಸರ್ಪಗಳ ಸೀಳುನಾಲಿಗೆ
ನಮ್ಮವರ ಸುತ್ತ,
ಇಷ್ಟಿದ್ದರೂ
ಅಪ್ಪಳಿಸಿ ಬರುವ ತೆರೆಗಳ ತೆಕ್ಕೆಗೆ
ಸಿಕ್ಕಿಬೀಳದ ಅಪರೂಪದ ನಾವಿಕನಾಗಿದ್ದೆ
ಅದೇಕೆ ಹುಟ್ಟು ಕೈಬಿಟ್ಟು ಹೋದೆ?

ಮಿಗುತಾಯ ಹೂತಿಟ್ಟ ಖಜಾನೆಯ
ಒಡೆಯರ ಚಾವಿ ಕಸಿದು,
ಕೊಳ್ಳುಬಾಕರ ಹೊರಗೆಳೆದು
ಕಡಲ್ಗಳ್ಳರು ಬಲುಗಳ್ಳರುಗಳನೆಲ್ಲ ಛೇಡಿಸಿ,
ಛೇದಿಸಿ, ಝಾಡಿಸಿ,
ನಿರ್ಭೀತಿಯಿಂದ ಅಟ್ಟಾಡಿಸುತ್ತಿದ್ದೆಯಲ್ಲ
ಹತಾಶನಾದೆ ಯಾಕೆ ಹೇಳು?

ಭಾವ–ಭೌತವಾದಗಳ ಜಿಜ್ಞಾಸೆಯಲ್ಲಿ
ಭಂಡ ಬಂಡವಾಳಕ್ಕೆ ಘರ್ಷಿಸಿದವರ
ಬೆವರಿಂದ ಅರಳಿದ ಪಕ್ವಫಲ ನೀನಾಗಿದ್ದೆ.
ಧರ್ಮ ಗರಿಮೆಯ ಭ್ರಮೆಯನೊಡೆದು
ನಾಝಿನರಕದ, ವೈರುಧ್ಯಗಳ
ಸೀಮೋಲ್ಲಂಘನ ಗೈದಿದ್ದೆ.
ಆ ಸೇತು ಹಿಮಾಚಲದ
ಗಡಿಯಾಚೆ ಪರದೆಯ ಸರಿಸಿ
ಬ್ರಹ್ಮಾಂಡದಗಲ ಪಸರಿಸಿದ್ದೆ, ಅನ್ವಯಿಸಿದ್ದೆ,
ಸಂಧಿಸಿದ್ದೆ ಮಾರ್ಕ್ಸನ ಎಲ್ಲಾ ಸಂಬಂಧಿಗಳ
...
ಇಷ್ಟಿದ್ದೂ ಅರಿವು ಇರವುಗಳಿಂದ
ಸರಿದೆಯೇಕೆ?

ಭಾವಂ ರಾಗಂ ತಾಲಂ ಭಾರತದ
ಚಂದ್ರಚಾಪ
ವರ್ಣಿಸುವ ವ್ಯಾಖ್ಯಾನದಲ್ಲಿ
ನಿನಗಾರು ಸಮನಿರಲಿಲ್ಲ, ಆದರೂ
ಹೇಳದೇ ಕೇಳದೇ ಎಲ್ಲಿ ಲೀನವಾದೆ ಹೇಳು?

ಇರಲಿ, ಪ್ರಶ್ನೆಗಳಿಗೆಲ್ಲ ಉತ್ತರ ನಿನ್ನ
ಕರೆದೊಯ್ದ ಆ ಸಾವು! ಗೊತ್ತು ನನಗೆ ನೀ
ಪಲಾಯನವಾದಿಯಲ್ಲ; ಗೊಬೆಲ್ಸನ ಸಂತತಿಗೆ
ಸಿಂಹಸ್ವಪ್ನ !
ನಿನ್ನ ಜೀವಿತದಲ್ಲೇ ಕೊಟ್ಟ ಎಚ್ಚರಿಕೆ
ಮರೆಯಲಾರೆವು
ಮೈಮರೆಯುವ ಸಮಯವಲ್ಲವಿದು,
ನಾವೆಗೆ ನೀ ಕಟ್ಟಿದ ರಕ್ತಗೆಂಪಿನ ವಸ್ತ್ರ
ಜೊತೆಗಿದೆ ಅಸ್ತ್ರದಂತೆ ಕಾಪಿಡುವೆವು,
ಒಳಗೂ ಹೊರಗೂ ದಾರಿ ತಪ್ಪದಂತೆ ಕಾಯ್ವ
ದಿಕ್ಸೂಚಿಯದು...

–ಯಮುನಾ ಗಾಂವ್ಕರ್

ಕಾಮ್ರೇಡ್ ಸೀತಾರಾಮ್ ಯೆಚೂರಿ-ಲಾಲ್ ಸಲಾಂ

ಸೀತಾರಾಮ್ ಯೆಚೂರಿ ಅವರ ನಿಧನದ ಸಂದರ್ಭದಲ್ಲಿ ಪಕ್ಷದ ಪೊಲಿಟ್‌ಬ್ಯುರೊ ಶ್ರದ್ಧಾಂಜಲಿ ಹೇಳಿಕೆಯನ್ನು ಈ ಮುಂದೆ ಕೊಡಲಾಗಿದೆ:

ಸೆಪ್ಟೆಂಬರ್ 12, 2024ರಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಸೀತಾರಾಮ್ ಯೆಚೂರಿಯವರ ನಿಧನಕ್ಕೆ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ) ಪೊಲಿಟ್ ಬ್ಯೂರೋ ತನ್ನ ಆಳವಾದ ದುಃಖವನ್ನು ವ್ಯಕ್ತಪಡಿಸುತ್ತದೆ. ಅವರು ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ತೀವ್ರವಾದ ಶ್ವಾಸನಾಳದ ಸೋಂಕಿನೊಂದಿಗೆ ಹೋರಾಡುತ್ತ ನಿಧನರಾದರು. ಅವರಿಗೆ 72 ವರ್ಷ ವಯಸ್ಸಾಗಿತ್ತು.

ಸೀತಾರಾಂ ಯೆಚೂರಿ ಸಿಪಿಐ(ಎಂ)ನ ಅತ್ಯುನ್ನತ ನಾಯಕರಾಗಿದ್ದರು, ಎಡಪಂಥೀಯ ಚಳುವಳಿಯ ಒಬ್ಬ ಅತ್ಯುತ್ತಮ ನಾಯಕ ಮತ್ತು ಸುಪ್ರಸಿದ್ಧ ಮಾರ್ಕ್ಸ್‌ವಾದಿ ಸಿದ್ಧಾಂತಿಯಾಗಿದ್ದರು.

ಅವರು ಅರ್ಥಶಾಸ್ತ್ರದಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳನ್ನು ಪ್ರಥಮ ದರ್ಜೆಯಲ್ಲಿ ಗಳಿಸಿದ ಒಬ್ಬ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು. 1974ರಲ್ಲಿ ಅವರು ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ ಚಳುವಳಿಗೆ ಸೇರಿದರು ಮತ್ತು ಸ್ಟೂಡೆಂಟ್ಸ್ ಫೆಡರೇಶನ್ ಆಫ್ ಇಂಡಿಯಾ(ಎಸ್‌ಎಫ್‌ಐ)ದ ಒಬ್ಬ ನಾಯಕರಾದರು. ಅವರು ಜೆಎನ್‌ಯು ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷರಾಗಿ ಎರಡು ವರ್ಷಗಳ ಅವಧಿಯಲ್ಲಿ ಮೂರು ಬಾರಿ ಆಯ್ಕೆಯಾದರು. 1984ರಿಂದ 1986ರ ವರೆಗೆ ಎಸ್‌ಎಫ್‌ಐ ನ ಅಖಿಲ ಭಾರತ ಅಧ್ಯಕ್ಷರಾಗಿದ್ದ ಅವರು ವಿದ್ಯಾರ್ಥಿ ಸಂಘಟನೆಯನ್ನು ಒಂದು ಅಖಿಲ ಭಾರತ ಶಕ್ತಿಯಾಗಿ ಅಭಿವೃದ್ಧಿಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಯೆಚೂರಿ 1975ರಲ್ಲಿ ಸಿಪಿಐ(ಎಂ) ಸೇರಿದರು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ರಾಜಕೀಯ ಚಟುವಟಿಕೆಗಳಿಗಾಗಿ ಅವರನ್ನು ಬಂಧಿಸಲಾಯಿತು. ಅವರು 1985ರಲ್ಲಿ 12ನೇ ಮಹಾಧಿವೇಶನದಲ್ಲಿ ಪಕ್ಷದ ಕೇಂದ್ರ ಸಮಿತಿಗೆ ಆಯ್ಕೆಯಾದರು ಮತ್ತು ಇದುವರೆಗೂ ಕೇಂದ್ರ ಸಮಿತಿಯಲ್ಲಿದ್ದರು. 1989ರಲ್ಲಿ ಅವರು ಕೇಂದ್ರ ಕಾರ್ಯದರ್ಶಿ ಮಂಡಳಿಗೆ ಮತ್ತು 1992 ರಲ್ಲಿ ಪಕ್ಷದ 14ನೇ ಮಹಾಧಿವೇಶನದಲ್ಲಿ ಪೊಲಿಟ್ ಬ್ಯೂರೋಗೆ ಆಯ್ಕೆಯಾದರು.

ಅವರು 2015 ರಲ್ಲಿ 21ನೇ ಮಹಾಧಿವೇಶನದಲ್ಲಿ ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು, ಈ ಸ್ಥಾನದಲ್ಲಿ ಅವರು ಇಲ್ಲಿಯವರೆಗೂ ಮುಂದುವರೆದಿದ್ದರು. ಮೂರು ದಶಕಗಳ ಕಾಲ ಪಕ್ಷದ ಕೇಂದ್ರದಲ್ಲಿ ನಾಯಕತ್ವ ತಂಡದ ಭಾಗವಾಗಿ, ಕಾಲಕಾಲಕ್ಕೆ ಪಕ್ಷದ ರಾಜಕೀಯ ನಿಲುವುಗಳನ್ನು ರೂಪಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು. ಸೀತಾರಾಮ್ ಒಂದು ವಿಶಿಷ್ಟ ಪಾತ್ರ ವಹಿಸಿದ್ದು ವೈಚಾರಿಕ ಕ್ಷೇತ್ರದಲ್ಲಿ ಪಕ್ಷವು 14ನೇ ಮಹಾಧಿವೇಶನದಲ್ಲಿ "ಕೆಲವು ಸೈದ್ಧಾಂತಿಕ ಪ್ರಶ್ನೆಗಳ ಕುರಿತು" ನಿರ್ಣಯವನ್ನು ಅಂಗೀಕರಿಸಿತು. ಇದು ಸಮಾಜವಾದದಕ್ಕಾದ ಹಿನ್ನಡೆಯ ಸಂದರ್ಭದಲ್ಲಿ ಪಕ್ಷದ ಸೈದ್ಧಾಂತಿಕ ನಿಲುವುಗಳನ್ನು ರೂಪಿಸಿತು. ಈ ನಿರ್ಣಯವನ್ನು ಯೆಚೂರಿ ಅವರು ಮಹಾಧಿವೇಶನದಲ್ಲಿ ಮಂಡಿಸಿದರು. ತರುವಾಯ, 2012ರಲ್ಲಿ ಪಕ್ಷದ 20ನೇ ಮಹಾಧಿವೇಶನದಲ್ಲಿ ಅಂಗೀಕರಿಸಿದ ಸೈದ್ಧಾಂತಿಕ ನಿಲುವುಗಳನ್ನು ಸಮಕಾಲಿಕಗೊಳಿಸಿದ ನಿರ್ಣಯವನ್ನು ಪ್ರಧಾನವಾಗಿ ಮಂಡಿಸಿದವರು ಅವರೇ.

ಕೇಂದ್ರ ಸಮಿತಿಯ ಅಂತರರಾಷ್ಟ್ರೀಯ ವಿಭಾಗದ ಮುಖ್ಯಸ್ಥರಾಗಿ, ಅವರು ಕಮ್ಯುನಿಸ್ಟ್ ಮತ್ತು ಪ್ರಗತಿಪರ ಶಕ್ತಿಗಳ ವಿವಿಧ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಭಾಗವಹಿಸಿದರು ಮತ್ತು ಸಮಾಜವಾದಿ ದೇಶಗಳೊಂದಿಗೆ ಸಂಬಂಧಗಳನ್ನು ಹಾಗೂ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಗಳೊಂದಿಗೆ ಸೌಹಾರ್ದವನ್ನು ಬಲಪಡಿಸಿದರು.



ಯೆಚೂರಿ ಅವರು ಎರಡು ದಶಕಗಳ ಕಾಲ ಪಕ್ಷದ ವಾರಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯ ಸಂಪಾದಕರಾಗಿದ್ದರು. ಅವರು ಸಮೃದ್ಧ ಬರಹಗಾರರೂ ಆಗಿದ್ದರು. ಸೈದ್ಧಾಂತಿಕ ಕ್ಷೇತ್ರದಲ್ಲಿ ಅವರ ಇನ್ನೊಂದು ಮುಖ್ಯ ಕೊಡುಗೆಯೆಂದರೆ ಹಿಂದುತ್ವದ ವಿಮರ್ಶೆ. ಇದು ಅವರ "ಹಿಂದೂ ರಾಷ್ಟ್ರ ಎಂದರೇನು?" ಮತ್ತು "ಕೋಮುವಾದ vs ಸೆಕ್ಯುಲರಿಸಂ" ಪುಸ್ತಕಗಳಲ್ಲಿ ಪ್ರಕಟವಾಯಿತು.

2005 ರಿಂದ 2017 ರವರೆಗೆ ಎರಡು ಅವಧಿಗೆ ರಾಜ್ಯಸಭೆಯ ಸದಸ್ಯರಾಗಿದ್ದ ಯೆಚೂರಿ ಸಿಪಿಐ(ಎಂ) ಗುಂಪಿನ ನಾಯಕರಾಗಿ ಸೇವೆ ಸಲ್ಲಿಸಿದರು ಮತ್ತು ಒಬ್ಬ ಪರಿಣಾಮಕಾರಿ ಸಂಸದರಾಗಿದ್ದರು. ಅವರಿಗೆ 2017ರಲ್ಲಿ ಅತ್ಯುತ್ತಮ ಸಂಸದ ಪ್ರಶಸ್ತಿ ನೀಡಲಾಯಿತು.

ಇತ್ತೀಚಿನ ಅವಧಿಯಲ್ಲಿ, ಯೆಚೂರಿ ಜಾತ್ಯತೀತ ವಿರೋಧ ಪಕ್ಷಗಳ ವಿಶಾಲ ಏಕತೆಯನ್ನು ರೂಪಿಸಲು ಸಾಕಷ್ಟು ಸಮಯ ಮತ್ತು ಶಕ್ತಿಯನ್ನು ವಿನಿಯೋಗಿಸಿದರು, ಅದು 'ಇಂಡಿಯ'ಬಣದ ಸ್ವರೂಪವನ್ನು ಪಡೆದುಕೊಂಡಿತು. ಸಿಪಿಐ(ಎಂ) ಬೆಂಬಲಿಸುತ್ತಿದ್ದ ಸಂಯುಕ್ತ ರಂಗ ಸರ್ಕಾರದ ಅವಧಿಯಲ್ಲಿ ಮತ್ತು ನಂತರದ ಯುಪಿಎ ಸರ್ಕಾರದ ಅವಧಿಯಲ್ಲಿ, ನಡೆದ ಸಂವಾದಗಳಲ್ಲಿ ಸಿಪಿಐ(ಎಂ) ಪರವಾಗಿ ಪ್ರಮುಖವಾಗಿ ಭಾಗವಹಿಸುತ್ತಿದ್ದವರಲ್ಲಿ ಯೆಚೂರಿ ಒಬ್ಬರು.

ಅವರ ಸ್ನೇಹಪರ ಮನೋಧರ್ಮದಿಂದಾಗಿ, ಅವರು ಎಲ್ಲ ಬಣ್ಣಗಳ ರಾಜಕೀಯ ವಲಯಗಳಲ್ಲಿ ವ್ಯಾಪಕವಾದ ಸ್ನೇಹಿತ-ವಲಯವನ್ನು ಹೊಂದಿದ್ದರು. ಅವರ ರಾಜಕೀಯ ಸಮಗ್ರತೆ ಮತ್ತು ಬದ್ಧತೆಗಾಗಿ ಅವರನ್ನು ಎಲ್ಲರೂ ಗೌರವಿಸುತ್ತಿದ್ದರು.

ನಮ್ಮ ರಾಷ್ಟ್ರ ರಾಜಕಾರಣದ ಈ ನಿರ್ಣಾಯಕ ಘಟ್ಟದಲ್ಲಿ ಯೆಚೂರಿಯವರ ಅಕಾಲಿಕ ನಿಧನವು ಸಿಪಿಐ(ಎಂ)ಗೆ ದೊಡ್ಡ ಏಟು ಮತ್ತು ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಶಕ್ತಿಗಳಿಗೆ ದುರ್ಭರ ನಷ್ಟವಾಗಿದೆ.

ಪೊಲಿಟ್ ಬ್ಯೂರೋ ನಮ್ಮ ಪ್ರೀತಿಯ ಸಹೋದ್ಯೋಗಿಗೆ ಗೌರವಪೂರ್ವಕ ಶ್ರದ್ಧಾಂಜಲಿ ಸಲ್ಲಿಸುತ್ತದೆ ಮತ್ತು ಅವರ ನೆನಪಿಗಾಗಿ ಕೆಂಬಾವುಟವನ್ನು ಬಾಗಿಸುತ್ತದೆ. ಪಕ್ಷದ ಎಲ್ಲ ಕಾರ್ಯಕರ್ತರು ಒಟ್ಟುಗೂಡಿ ಒಂದು ಶೋಷಣಾ-ಮುಕ್ತ ಸಮಾಜಕ್ಕಾಗಿ ಹೋರಾಟವನ್ನು ಮುಂದೊಯ್ಯಲು ಇನ್ನಷ್ಟು ಕಠಿಣವಾಗಿ ಶ್ರಮಿಸಬೇಕು ಎಂದು ಪೊಲಿಟ್ ಬ್ಯೂರೋ ಕರೆ ನೀಡುತ್ತದೆ. ಇದು ಅವರಿಗೆ ಸಲ್ಲಿಸಬಹುದಾದ ಅತ್ಯುತ್ತಮ ಶ್ರದ್ಧಾಂಜಲಿ.

ಅವರ ಪತ್ನಿ ಸೀಮಾ, ಪುತ್ರಿ ಅಖಿಲಾ, ಪುತ್ರ ದಾನಿಶ್, ಸಹೋದರ ಶಂಕರ್ ಮತ್ತು ಕುಟುಂಬದ ಇತರ ಎಲ್ಲ ಸದಸ್ಯರಿಗೆ ಪೊಲಿಟ್ ಬ್ಯೂರೋ ತನ್ನ ಆಳವಾದ ಸಹಾನುಭೂತಿ ಮತ್ತು ಸಂತಾಪವನ್ನು ತಿಳಿಸಿದೆ. ❑



ಚಿಂತನೆ ಮತ್ತು ಚಳುವಳಿ ಮೇಳೈಸಿದಂತಹ ವ್ಯಕ್ತಿತ್ವ

ಅದೊಂದು ತಾತ್ವಿಕ ಚಿಂತಕರ, ಬುದ್ದಿಜೀವಿಗಳ, ರಾಜಕಾರಣಿಗಳ, ಹೋರಾಟಗಾರರ, ದೇಶ-ವಿದೇಶದಿಂದ ಬಂದ ಪ್ರತಿನಿಧಿಗಳ ಸಂಗಮವಾಗಿತ್ತು. ಮತ್ತಲ್ಲಿ ಬೆಚ್ಚನೆಯ ಕಣ್ಣೀರಿತ್ತು. ಗದ್ಗದಿತ ಕಂಠಗಳಿದ್ದೂ ಬಿಗಿದ ಮುಷ್ಠಿಗಳೆತ್ತಿ 'ಕಾ.ಸೀತಾರಾಮ ಯೇಚೂರಿ ಅಮರ್ ರಹೆ' ಹೇಳುತ್ತಿದ್ದರು. ಚಿಂತನೆ ಮತ್ತು ಚಳುವಳಿ ಮೇಳೈಸಿದಂತಹ ವ್ಯಕ್ತಿತ್ವ ಕಾ.ಸೀತಾರಾಮರದ್ದಾಗಿದ್ದರಿಂದ ವಿವರಣೆಗೆ ಒದಗದ ಭಾವವೊಂದು ಆಪ್ತತೆಯೊಂದಿಗೆ ಕ್ರಾಂತಿಕಾರಕ ಮನೋಭಾವವೂ ಅಲ್ಲಿ ಸ್ಥಾಯಿಯಾಗಿತ್ತು. ಮಾಸದ ಮುಗುಳ್ನಗೆಯು ಬಿಗುವಿಲ್ಲದ ವರ್ತನೆಯು ಸೂಜಿಗಲ್ಲಿನಂತೆ ಸೆಳೆವ ತಾಖತ್ತು ಹೊಂದಿತ್ತು. ಅವರ ವಿದ್ವತ್ಪೂರ್ಣ ವಾಗ್ಮಿತೆ, ವಿವೇಕಪೂರ್ಣ ನಡಾವಳಿಕೆಯಿಂದ ರಾಜಕೀಯ ವಲಯದಲ್ಲಿಯೂ ಗೌರವಾರ್ಹವಾಗಿದ್ದರು. ಸಿನೇಮಾ ಗೀತೆಗಳು ಕೇಳುವುದು ಕಮ್ಯುನಿಸ್ಟ್ ಸಂಗಾತಿಯೊಬ್ಬರ ಹಾಬಿಯಾಗಿತ್ತೆನ್ನುವುದು ಕೆಲವರ ಹುಬ್ಬೇರಬಹುದು. ಆದರೆ ಕಾ.ಯೆಚೂರಿಯವರಿಗೆ ಸಾಂಸ್ಕೃತಿಕ ಟಚ್ ಅಪ್ಯಾಯಮಾನವಾಗಿತ್ತು. ಆದ್ದರಿಂದಲೇ ಅವರ ವ್ಯಕ್ತಿತ್ವವು ನಿರಾಳ- ನಿತಾಂತತೆಯಿಂದ ಕೂಡಿತ್ತು.

ಓದಿದ ವಿಶ್ವವಿದ್ಯಾಲಯದಲ್ಲಿ ಅವರಿಗೆ ದೊರೆತ ಗೌರವಪೂರ್ವಕ ಕ್ರಾಂತಿಕಾರಕ ಬೀಳ್ಕೊಡುಗೆಯು ಚರಿತ್ರೆಯಲ್ಲಿ ತಾತ್ವಿಕ ವಿಶ್ಲೇಷಣೆಯೊಂದಿಗೆ ದಾಖಲಾಗುವುದು. ವಿದ್ಯಾರ್ಥಿ ದೆಸೆಯಿಂದ ಅವರು ನಂಬಿದ ಸೈದ್ಧಾಂತಿಕ ಬದ್ಧತೆಯ ನಿರಂತರ ಚಲನೆ ಪಡೆಯಬೇಕಾದ ಮತ್ತು ಚಲನೆಗೆ ತೀವ್ರಗತಿ ಒದಗಬೇಕಾದ ಸಂಕೇತದಂತೆ ಜೆ ಎನ್ ಯು ಸಾಕ್ಷಿಯಾಯಿತು. ಅವರ ದೇಹವು ಆಸ್ಪತ್ರೆಯಿಂದ ಜೆ.ಎನ್.ಯು. ಗೆ, ಅಲ್ಲಿಂದ ಮನೆಗೆ, ಮನೆಯಿಂದ ಪಕ್ಷದ ಕಚೇರಿಗೆ ಮತ್ತು ಪಕ್ಷದ ಕಚೇರಿಯಿಂದ ಮರಳಿ ಆಸ್ಪತ್ರೆಗೆ ತೆರಳಿತು. ಈ ಒಟ್ಟೂ ಪರ್ಯಟನೆಯಲ್ಲಿ ಮೊಳಗಿದ ಘೋಷಣೆ "ಇನ್ ಕ್ವಿಲಾಬ್ ಜಿಂದಾಬಾದ್, ಕಾ.ಯೆಚೂರಿ ಅಮರ್ ರಹೆ". ಕಡೆಯಲ್ಲಿ ವೈದ್ಯಕೀಯ ವ್ಯಾಸಂಗಕ್ಕೆ ಸಂಶೋಧನೆಗೆ ಅವರ ದೇಹವು ದಾಸೋಹವಾಗಿ ಹಸ್ತಾಂತರವಾಯಿತು. ಪ್ರಸಾದ ಕಾಯವು ಕೆಡದಂತೆ ಮರಳಿ ವಿವೇಕವಾಗಲು ಪ್ರಯೋಗಕ್ಕೊಡ್ಡಿಕೊಂಡಿತು. ಅವರ ಬಾಳಸಂಗಾತಿ ಸೀಮಾ, ಮತ್ತಿಬ್ಬರು ಮಕ್ಕಳ ಕಣ್ಣಲ್ಲಿ ಹಿಡಿದಿಟ್ಟ ಕಂಬನಿ ಇತ್ತು. ಕಾ.ಇಂದ್ರಾಣಿ ಕಣ್ಣುಗಳಲ್ಲಿ ಕಂಬನಿಗಳು ನಿಲ್ಲದೆ ಹರಿಯುತ್ತಿದ್ದವು. ಪಾಲಿಟ್ ಬ್ಯೂರೊ ಸದಸ್ಯರು, ಮತ್ತೆಲ್ಲ ಸಂಗಾತಿಗಳು ಭಾರವಾದ ಹೃದಯಗಳನ್ನು ಹೊತ್ತೇ ಕರ್ತವ್ಯ ನಿರ್ವಹಿಸುತ್ತಿದ್ದರು. ವ್ಯಕ್ತಿ, ಕುಟುಂಬ ಮತ್ತು ಚಳುವಳಿ ಅಟೂಟ್ ಸಂಬಂಧದಂತೆ ಅಲ್ಲಿ ಬೆಸೆದುಕೊಂಡಿತ್ತು.

ನಾವು ಹೂವಿಟ್ಟು ನಮನ ಸಲ್ಲಿಸಿದೆವು. ಮನದಲ್ಲಿಯೇ ದೃಢವಾಗಿ ಹೇಳಿಕೊಂಡೆವು, 'ಬೆವರ ಲೋಕದೊಂದಿಗೆ ಬೆಸೆದುಕೊಂಡ ತತ್ವವನ್ನು ಮುಕ್ಕಾಗದಂತೆ ಮುಂದಕ್ಕೊಯ್ಯುವೆವು. ಸಂಗಾತಿಯೇ ನಿಮಗಿದುವೇ ಶ್ರದ್ಧಾಂಜಲಿ".

-ಕೆ. ನೀಲಾ

ಜೆ.ಎನ್.ಯು: ಹೊಸ ರೆಕ್ಕೆ ಬೆಳೆಸುವ ಗೂಡಾಗಿಸಿದ ಕಾಂ. ಸೀತಾರಾಮ್

ಜಿ.ಎನ್. ನಾಗರಾಜ್



"ಅಲ್ಲಿ ನೀವು ಧರಿಸಿದ ಉಡುಪುಗಳಿಂದ ನಿಮ್ಮನ್ನು ಅಳೆಯುವುದಿಲ್ಲ. ಶೋ ಮ್ಯಾನ್/ ವುಮನ್‌ಶಿಪ್ ನಡೆಯುವುದಿಲ್ಲ"
"ನಿಮ್ಮ ಅಪ್ಪ ಅಮ್ಮ, ಅವರ ಅಂತಸ್ತುಗಳಿಗೆ ಬೆಲೆಯಿಲ್ಲ, ನಿಮ್ಮ ತಿಳುವಳಿಕೆ ಏನು ಎಂಬುದಕ್ಕಷ್ಟೇ ಬೆಲೆ'
"ನನ್ನಂತಹ ದೇಶದ ಮೂಲೆ ಮೂಲೆಯ ಬಡ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿ, ಅತ್ಯಂತ ಕಡಿಮೆ ಫೀಸಿನಲ್ಲಿ ಅತ್ಯುತ್ತಮ ಶಿಕ್ಷಣ ನೀಡುವ ಅಪರೂಪದ ವಿಶ್ವ ವಿದ್ಯಾಲಯ ಇದು"

–ಗೌತಮ್ ಕುಮಾರ್

"ಅಲ್ಲಿ ಪಾಠಗಳನ್ನು ಬಾಯಿಪಾಠ ಮಾಡುವವರಿಗೆ ಜಾಗವಿಲ್ಲ. ನೀವು ಗಳಿಸುವ ಮಾರ್ಕ್‌ಗಳಿಗೂ ಬೆಲೆಯಿಲ್ಲ. ನಿಮ್ಮ ಚಿಂತನಾ ಸಾಮರ್ಥ್ಯ, ವಿಶ್ಲೇಷಣಾ ವಿಧಾನ, ವೈಚಾರಿಕ ಬೆಳವಣಿಗೆಗಷ್ಟೇ ಬೆಲೆ." – ದಿವ್ಯಾಂಶ್ ತ್ರಿಪಾಠಿ

"ವಿಸ್ತಾರವಾದ ಅಧ್ಯಯನ, ವಿಶ್ವದೆಲ್ಲ ಹೊಸ ವಿಚಾರ, ಸಿದ್ಧಾಂತಗಳ ಅರಿವು, ವಿಷಯಾಧಾರಿತ ಚರ್ಚೆಗೆ ನಿಮ್ಮನ್ನು ದೂಡುತ್ತದೆ ಈ ವಿ.ವಿ."–ಎಸ್.ಶುಭಮ್

"ಇಲ್ಲಿ ಮೊದಲು ನಿಮ್ಮನ್ನು ನೀವೇ ಪ್ರಶ್ನಿಸಿಕೊಳ್ಳಲು ಕಲಿಸಲಾಗುತ್ತದೆ. ನಂತರ ನಿಮ್ಮ ಸಹಪಾಠಿಗಳನ್ನು, ಪ್ರಾಧ್ಯಾಪಕರನ್ನು ಕೂಡಾ ಪ್ರಶ್ನೆ ಮಾಡಲು ಕಲಿಸುತ್ತದೆ. ಆದರೆ ಸರಿಯಾದ ಆಧಾರಗಳಿಂದ"– ಅನ್ಬಗಳಗನ್ ಅಂಬ್ರೋಸ್

ಇದು ಜೆಎನ್‌ಯುದಲ್ಲಿ ವಿದ್ಯಾಭ್ಯಾಸ ಮಾಡಿದ ನೂರಾರು ವಿದ್ಯಾರ್ಥಿಗಳು ಫೇಸ್‌ಬುಕ್, ವಾಟ್ಸಪ್, ಕೋರಾ ಮೊದಲಾದ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡ ಅನುಭವಗಳು. ಈ ವಿದ್ಯಾರ್ಥಿಗಳು ಯಾರೂ ಎಸ್‌ಎಫ್‌ಐಗಾಗಲೀ ಎಡಪಂಥಕ್ಕಾಗಲಿ ಸೇರಿದವರಲ್ಲ. ಜೆಎನ್‌ಯು ಬಗ್ಗೆ ಭಾರಿ ಅಪಪ್ರಚಾರ ನಡೆಯುತ್ತಿದ್ದಾಗ ಬರೆದ ಅಭಿಪ್ರಾಯಗಳು.

ಸುರ್ಜೀತ್‌ರವರು ಭೂ ಸುಧಾರಣೆಯ ಬಗ್ಗೆ ಬರೆಯುತ್ತಿದ್ದ ಒಂದು ಪುಸ್ತಕಕ್ಕೆ ಸಹಾಯ ಮಾಡಲು 80 ರ ದಶಕದ ಕೊನೆಯಲ್ಲಿ ನನ್ನನ್ನು ಅವರು ಕರೆಸಿಕೊಂಡಾಗ ಮೂರ್ನಾಲ್ಕು ತಿಂಗಳ ಕಾಲ ದೆಹಲಿಯಲ್ಲಿದ್ದೆ. ಆಗ ಮೊದಲ ಬಾರಿಗೆ ಜೆಎನ್‌ಯುಗೆ ಭೇಟಿ ಕೊಟ್ಟಾಗ ಗೇಟು ದಾಟಿ ಒಳಗೆ ಕಾಲಿಟ್ಟ ಕ್ಷಣದಿಂದ ಆಶ್ಚರ್ಯವೋ ಆಶ್ಚರ್ಯ.

ಇದೇನು ವಿಶ್ವ ವಿದ್ಯಾಲಯವೋ ಅಥವಾ ಯಾವುದೋ ಮಾರುಕಟ್ಟೆ ಬೀದಿಯಲ್ಲಿದ್ದೇನೋ ಎನಿಸಿಬಿಟ್ಟಿತು. ಏಕೆಂದರೆ ಅಲ್ಲಿಯ ಪುಸ್ತಕ ಭಂಡಾರ, ವಿವಿಧ ವಿಭಾಗಗಳ ಕಟ್ಟಡಗಳ ಮೇಲೆ ಯಾವುದೇ ಬೇಧವಿಲ್ಲದೆ ವಿವಿಧ ಬಣ್ಣದ ಗೋಡೆ ಬರಹಗಳು, ಪೋಸ್ಟರ್‌ಗಳು ರಾರಾಜಿಸುತ್ತಿವೆ. ಆದರೆ ಅವ್ಯಾವೂ ಪ್ರಿಂಟ್ ಮಾಡಿದ ಪೋಸ್ಟರ್‌ಗಳಲ್ಲ. ಕೈಯಲ್ಲೇ ಬರೆದವು. ಸುಂದರವಾದ ಕೈ ಬರಹ, ಬಣ್ಣ ವಿನ್ಯಾಸ ಮತ್ತು ಚಿತ್ರಗಳು.

ನಾನು ಯಾವುದೋ ಚುನಾವಣೆ ಇರಬೇಕು ಅದರ ಬರಹಗಳು ಎಂದು ಕೊಂಡು ಮುಂದೆ ಹೋಗುತ್ತಿದ್ದೆ. ಆದರೆ ದೊಡ್ಡ ಅಕ್ಷರಗಳಲ್ಲಿ ಪ್ಯಾಲೆಸ್ಟೈನ್, ಅಪಾರ್ಥೀಡ್, ನೆಲ್ಸನ್ ಎಂಬ ಪದಗಳು, ಮಂಡೇಲಾ, ಚೆ, ಕ್ಯಾಸ್ಟ್ರೋ ರವರ ಮುಖಗಳು ಕಂಡವು. ಚುನಾವಣೆಗಳಿಗೆ ಸಂಬಂಧಿದವಲ್ಲ ಎಂದು ತಿಳಿದ ಮೇಲೆ ಹತ್ತಿರ ಹೋಗಿ ನೋಡುತ್ತಾ ಹೋದೆ. ಅವುಗಳಲ್ಲಿ ಅಂದಿನ ಇಡೀ ವಿಶ್ವದ ವಿದ್ಯಮಾನಗಳ ಚಿತ್ರಣವೇ ಕಂಡಿತು. ಅಧ್ಯಯನಶೀಲನಾದ ನನಗೂ ತಿಳಿಯದ ಹಲವು ಸಂಗತಿಗಳು ಅಲ್ಲಿ ಕಂಡವು.

ಅವುಗಳು ಕೇವಲ ಮಾಹಿತಿ ನೀಡುವ ಬರಹಗಳಾಗಿರಲಿಲ್ಲ. ಪ್ರತಿಭಟನೆ, ಮೆರವಣಿಗೆ, ಸಭೆ, ವಿಚಾರ ಸಂಕಿರಣಗಳಿಗೆ ಕರೆ ಕೊಡುತ್ತಿದ್ದವು. ಓ! ಎಷ್ಟೊಂದು ವಿಷಯಗಳ ಮೇಲೆ ಪ್ರತಿಭಟನೆ ನಡೆಯುತ್ತಿವೆ! ಸರಿಸುಮಾರು ಪ್ರತಿ ದಿನವೂ ಒಂದಲ್ಲಾ ಒಂದು ಪ್ರತಿಭಟನೆ, ಚರ್ಚೆ.

ಅಲ್ಲಿಯ ವಿದ್ಯಾರ್ಥಿಗಳನ್ನು ವಿಚಾರಿಸಿದಾಗ "ಹೌದು, ದೇಶದಲ್ಲಿ ಮಾತ್ರವಲ್ಲ ವಿಶ್ವದಲ್ಲಿ ಎಲ್ಲಿ ಏನೆ ಘಟನೆ ನಡೆದರೂ ಇಲ್ಲಿ ನಾವು ಅದಕ್ಕೆ ಸ್ಪಂದಿಸುತ್ತೇವೆ. ಒಂದೇ ವಿಚಾರಧಾರೆಯ ಪ್ರತಿಭಟನೆ, ಚಟುವಟಿಕೆಗಳಲ್ಲ, ವಿರುದ್ಧ ವಿಚಾರಗಳ ಪ್ರತಿಭಟನೆ, ವಿಚಾರ ಸಂಕಿರಣಗಳೂ ಜರುಗುತ್ತವೆ. ಹೀಗೆ ಗೊಡೆಬರಹ, ಘೋಷಣೆಗಳು, ಭಾಷಣಗಳ ಮೂಲಕ ಒಂದು ವಿಷಯದ ಎಲ್ಲ ಮಗ್ಗಲುಗಳೂ ನಮಗೆ ತಿಳಿಯುತ್ತವೆ. ತರಗತಿಗಳಲ್ಲಿ ಪಾಠ ಮಾಡದ, ನಮ್ಮ ಪದವಿಗೆ ಸಂಬಂಧಿಸದ ವಿಷಯಗಳ ಬಗ್ಗೆ ನಮಗೆ ತಿಳುವಳಿಕೆ ಮೂಡುವುದೇ ಈ ವಿವಿಯ ವಿಶೇಷ " ಎಂದರು.

ನಾನು ಅಲ್ಲಿ ಕೆಲವೊಮ್ಮೆ ಭೇಟಿ ಕೊಟ್ಟಾಗ ರಾತ್ರಿ ವಿದ್ಯಾರ್ಥಿ ನಿಲಯದಲ್ಲಿಯೇ ಉಳಿದಿದ್ದೆ. ಹಗಲೆಲ್ಲ ಬಹಳಷ್ಟು ಮೌನವಾಗಿರುವ ಈ ಕ್ಯಾಂಪಸ್ ಸಂಜೆಯಾಗುತ್ತಿದ್ದಂತೆ ಸಂತೆಯಂತೆ ಗಿಜಿಗುಡುತ್ತದೆ.

ಆವರಣದ ಹಲವೆಡೆ ವಿದ್ಯಾರ್ಥಿಗಳು ಹತ್ತು, ಇಪ್ಪತ್ತು ಹೀಗೆ ವಿವಿಧ ಸಂಖೆಗಳಲ್ಲಿ ಗುಂಪು ಕೂಡಿ ಚರ್ಚಿಸುತ್ತಿರುತ್ತಾರೆ. ಅವರವರಿಗೆ ಆಸಕ್ತಿ ಇರುವ ವಿಷಯಗಳಲ್ಲಿ ಚರ್ಚೆ ನಡೆದಿರುತ್ತದೆ. ಒಂದು ವಿಷಯದಿಂದ ಮತ್ತೊಂದು ವಿಷಯಕ್ಕೆ ಹಾದು ಹೋಗುತ್ತದೆ.

ಈ ಚರ್ಚೆಗಳು ಹಲವೊಮ್ಮೆ ಬಿಸಿ ಬಿಸಿಯಾಗುತ್ತದೆ. ಆದರೆ ಜಗಳ ಏನಿದ್ದರೂ ಮಾತಿನಲ್ಲೇ, ವಿಷಯಾಧಾರಿತವಾಗಿ. ಈ ಚರ್ಚೆಗಳು ಮಧ್ಯ ರಾತ್ರಿಯವರೆಗೂ ನಡೆಯುವುದು ಸಾಮಾನ್ಯ. ಕೆಲವೊಮ್ಮೆ ಬೆಳಗಿನ ಜಾವದವರೆಗೂ.

ಅವರ ಚರ್ಚೆಗಳಲ್ಲಿ ವಿಶ್ವದ ವಿಖ್ಯಾತ ವಿದ್ವಾಂಸರ ಪುಸ್ತಕಗಳ, ಪ್ರಬಂಧಗಳ ವಿಚಾರಗಳು ಉಲ್ಲೇಖಗೊಳ್ಳುತ್ತಿರುತ್ತವೆ. ವಿಶ್ವ ವಿದ್ಯಾಲಯದ ಜ್ಞಾನಾರ್ಜನೆಯಲ್ಲಿ ತರಗತಿಗಳಷ್ಟೇ ಈ ಚರ್ಚೆಗಳಿಗೂ ಪ್ರಾಮುಖ್ಯತೆ ಇರುತ್ತದೆ. ಈ ಚರ್ಚೆಗಳ ಮೂಲಕವೇ ದಿಟ್ಟವಾಗಿ, ಸ್ಪಷ್ಟವಾಗಿ ತಮ್ಮ ವಿಚಾರಗಳನ್ನು ವಿಶ್ಲೇಷಿಸುವುದು ಮಂಡಿಸುವುದು ಮಾತ್ರವೇ ಅಲ್ಲದೆ ಪ್ರಶ್ನಿಸುವುದನ್ನೂ ಸಹಜ ಸ್ವಭಾವವಾಗಿ ರೂಢಿಸಿಕೊಳ್ಳುತ್ತಾರೆ.

ಈ ಚರ್ಚೆಗಳಲ್ಲಿ ಹುಡುಗ ಹುಡುಗಿ ಬೇಧವಿಲ್ಲ. ಹುಡುಗಿಯರೂ ರಾತ್ರಿಯ ಚರ್ಚೆಗಳಲ್ಲಿ ಪಾಲ್ಗೊಳ್ಳುತ್ತಾರೆ. ಬಿರುಸು ಚರ್ಚೆ ಮಾಡುತ್ತಿರುತ್ತಾರೆ. ಈ ಕ್ಯಾಂಪಸ್‌ನಲ್ಲಿ ನಮಗೆ ಯಾವುದೇ ಭಯವಿಲ್ಲ ಎನ್ನುತ್ತಾರೆ ಅವರು.

ಇಂತಹ ಅಧ್ಯಯನ, ಚರ್ಚೆ, ಸಂವಾದ ಆಧಾರಿತ ವಿವಿ ಸಂಸ್ಕೃತಿ ದೇಶದ ಬೇರಾವುದೇ ವಿವಿಗಳಲ್ಲಿ ಕಾಣುವುದಿಲ್ಲ. ಇಂತಹ ವಿವಿಯನ್ನು ಪ್ರವೇಶಿಸಿದ ವಿದ್ಯಾರ್ಥಿಗಳು ಎಂತಹ ಮೌನಿ, ಹಿಂಜರಿಕೆಯ ಮನಸ್ಥಿತಿಯವರಾಗಿದ್ದರೂ ವಿವಿಯಿಂದ ಹೊರಬರುವ ವೇಳೆಗೆ ದಿಟ್ಟ ವಿಚಾರಶೀಲರಾಗುತ್ತಾರೆ. ಇತಿಹಾಸ, ಅರ್ಥಶಾಸ್ತ್ರ ಮೊದಲಾದ ಸಾಮಾಜಿಕ ವಿಜ್ಞಾನಗಳ ವಿಭಾಗಗಳ ವಿದ್ಯಾರ್ಥಿಗಳಲ್ಲಿ ಈ ಬೆಳವಣಿಗೆ ಮತ್ತಷ್ಟು ಪ್ರಖರವಾಗಿವೆ.

ಅಧಿಕಾರಸ್ಥರನ್ನು ಮುಲಾಜಿಲ್ಲದೆ ಪ್ರಶ್ನೆ ಮಾಡುವ ಈ ವಾತಾವರಣವನ್ನು ರೂಪಿಸಿದ ಸೀತಾರಾಮ್ ತುರ್ತು ಪರಿಸ್ಥಿತಿ ವಿರುದ್ಧ ವಿದ್ಯಾರ್ಥಿ ಪ್ರತಿರೋಧ ಸಂಘಟಿಸಿದ ಕಾರಣ ಬಂಧನಕ್ಕೊಳಗಾದರು.

ಬಿಡುಗಡೆಯಾದ ಕೂಡಲೇ ಆಗ ಚುನಾವಣೆಯಲ್ಲಿ ಸೋತಿದ್ದ ಇಂದಿರಾಗಾಂಧಿಯವರು ಜೆಎನ್‌ಯುವಿನ ಚಾನ್ಸಲರ್ ಆಗಿ ಮುಂದುವರೆದುದನ್ನು ವಿರೋಧಿಸಿ ವಿವಿಯಿಂದ ಇಂದಿರಾ ನಿವಾಸಕ್ಕೆ ಹತ್ತು ಕಿಮಿ ದೂರದ ಕಾಲ್ನಡಿಗೆ ಪ್ರತಿಭಟನೆ ಸಂಘಟಿಸಿದರು ಮತ್ತು ಅವರ ಮನೆ ಮುಂದೆ ಮನವಿ ಸ್ವೀಕರಿಸಲು ಸ್ವತಃ ಅವರೇ ಖುದ್ದು ಬರಬೇಕೆಂದು ಒತ್ತಾಯಿಸಿ ಅವರು ಮನೆಯಿಂದ ಹೊರಬರುವಂತೆ ಮಾಡಿದರು.

ಅವರ ಮುಂದೆಯೇ ಅವರ ವಿರುದ್ಧದ ವಿದ್ಯಾರ್ಥಿ ಚಾರ್ಜ್ ಶೀಟ್ ಓದಿದರು. ಮುಂದೆರಡು ದಿನಗಳಲ್ಲಿ ಇಂದಿರಾ ರಾಜೀನಾಮೆ ಕೊಡುವಂತಾಯಿತು.

ಹೀಗೆ ನಿರ್ಭೀತ ವಾತಾವರಣ, ವಿಷಯಾಧಾರಿತ ಆಳವಾದ ಚಿಂತನೆ, ವಿಶ್ಲೇಷಣೆ ಇಲ್ಲಿಯ ಪದವೀಧರರು ಬಹಳಷ್ಟು ಜನ ಐಎಎಸ್ ಪಾಸಾಗಿ ದೇಶದ ವಿವಿಧ ಭಾಗಗಳಲ್ಲಿ ಹಾಗೂ ಕೇಂದ್ರ ಸರ್ಕಾರದಲ್ಲಿ ಮುಖ್ಯ ಸ್ಥಾನಗಳಲ್ಲಿದ್ದಾರೆ. ಜೆಎನ್‌ಯು ಐಎಎಸ್‌ಗಳ ಕಾರ್ಖಾನೆಯೆಂದೇ ಪ್ರಸಿದ್ಧವಾಗಿದೆ. ಹಾಗೆಯೇ ದೇಶದ ಹಾಗೂ ವಿದೇಶಗಳ ವಿವಿಧ ವಿವಿಗಳ ಪ್ರಾಧ್ಯಾಪಕರಾಗಿದ್ದಾರೆ. ಪ್ರಮುಖ ಮಾಧ್ಯಮಗಳ, ಪತ್ರಿಕೆಗಳ ಪತ್ರಕರ್ತರಾಗಿದ್ದಾರೆ.

ಈ ಎಲ್ಲ ರಂಗಗಳಲ್ಲಿ ಇವರಲ್ಲಿ ಬಹಳಷ್ಟು ಜನರು ವಿವಿಯಲ್ಲಿ ರೂಢಿಸಿಕೊಂಡ ವಿಚಾರಶೀಲತೆ, ನಿರ್ಭೀತ ಮನೋಭಾವವನ್ನು ಬೆಳೆಸುತ್ತಿದ್ದಾರೆ.

ಈಗ ನಿಮಗೆ ಅರ್ಥವಾಗಿರಬಹುದಲ್ಲ ಇಡೀ ದೇಶದ 56 ಇಂಚಿನ ಎದೆಯ ಪ್ರಧಾನಿ ಮೋದಿ–ಮತ್ತವರ ಗುಜರಾತ್ ಹತ್ಯಾಕಾಂಡದ ಜೋಡಿ ಶಾ ಕೇವಲ ಒಂದು ವಿಶ್ವವಿದ್ಯಾಲಯಲಯದ ಮೇಲೆ ಹತ್ತು ವರ್ಷಗಳಿಂದ ನಿರಂತರ ಯುದ್ಧ ಏಕೆ ಸಾರಿದ್ದಾರೆಂದು! ಪರಮ ವಿಧೇಯತೆಯನ್ನು ಬಯಸುವ ವಿಚಾರಶೀಲತೆ ಎಂದರೇ ಅಂಜುವ ಮೋದಿ ಮತ್ತವರ ಆರೆಸ್ಸೆಸ್ ಇಂತಹ ನಿರ್ಭಯ ವಾತಾವರಣ ವನ್ನು ಸಹಿಸಲು ಸಾಧ್ಯವೇ? ಇಂತಹ ಪ್ರಶ್ನಿಸುವ, ಚರ್ಚೆಯ, ಆಳವಾದ ಚಿಂತನೆಯ ವಾತಾವರಣವನ್ನು ರೂಪಿಸುವುದರಲ್ಲಿ ಅಲ್ಲಿ ಅಧ್ಯಯನ ಮಾಡಿದ, ಎರಡು ವರ್ಷ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿದ್ದ ಸೀತಾರಾಮ್ ಪ್ರಮುಖ ಪಾತ್ರ ವಹಿಸಿದ್ದಾರೆ. ಈ ಮೊದಲು ಅಲ್ಲಿ ವಿದ್ಯಾರ್ಥಿಯಾಗಿ, ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿದ್ದ ಪ್ರಕಾಶ್ ಕಾರತ್‌ರವರು ಈ ವಾತಾವರಣಕ್ಕೆ ರೂಪಿಸುವುದಕ್ಕೆ ಅಡಿಪಾಯ ಹಾಕಿದರು. ವಿವಿಯ ಪ್ರವೇಶ ಪಡೆಯಲು ಇದ್ದ ನಿಯಮಗಳನ್ನು ಬಡವರ, ಹಿಂದುಳಿದ ಪ್ರದೇಶಗಳ, ಮಹಿಳಾ ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುಕೂಲಕರವಾಗಿ ವಿಶೇಷಾಂಕ ನೀಡುವಂತೆ ಬದಲಾಯಿಸುವುದಕ್ಕೆ ಒತ್ತಾಯಿಸಿ ಯಶಸ್ವಿಯಾದರು. ವಿವಿಯ ವಿದ್ಯಾರ್ಥಿ ಸಂಘದ ಚುನಾವಣೆಗಳನ್ನು ಆಡಳಿತ ವರ್ಗದ ಉಸ್ತುವಾರಿಯ ಹೆಸರಿನಲ್ಲಿ ಬಾಲಂಗೋಚಿಗಳನ್ನು ಆರಿಸುವುದಕ್ಕೆ ಅವಕಾಶವಿಲ್ಲದಂತೆ ವಿದ್ಯಾರ್ಥಿಗಳೇ ಆರಿಸಿದ ಚುನಾವಣಾ ಆಯೋಗ ಚುನಾವಣೆಗಳನ್ನು ನಡೆಸುವ ನಿಯಮ ರೂಪಿಸಿದರು. ಇತರ ವಿವಿಗಳಲ್ಲಿ ವಿವಿಯ ಹೊರಗಿನಿಂದ ಹಣ ಹರಿಯುವುದಕ್ಕೆ, ಗೂಂಡಾಗಿರಿ ನಡೆಸಿ ಸಂಘಗಳನ್ನು ಹಾಳುಮಾಡಲು ಅವಕಾಶವಿಲ್ಲದಂತೆ ವಿದ್ಯಾರ್ಥಿಗಳದೇ ಹಣ, ಅವರದೇ ಶ್ರಮ, ವಿಷಯಾಧಾರಿತ ಪ್ರಚಾರದ ಮೂಲಕ ಚುನಾವಣೆಗಳು ನಡೆಸುವಂತೆ ರೂಪಿಸಿದರು.

ಇಂತಹ ವಿದ್ಯಾರ್ಥಿ ಪ್ರಜಾಪ್ರಭುತ್ವದ ಜೊತೆ ಜೊತೆಗೇ ಅಲ್ಲಿಯ ಪ್ರಾಧ್ಯಾಪಕ ವೃಂದವೂ ಸಂಘ ರೂಪಿಸಿಕೊಂಡು ಆಡಳಿತ ವರ್ಗವನ್ನು ಹಿಂಜರಿಕೆಯಿಲ್ಲದೆ ಪ್ರಶ್ನಿಸುತ್ತದೆ. ವಿದ್ಯಾರ್ಥಿ ಪ್ರಜಾಪ್ರಭುತ್ವದ ಬಲವಾದ ಆಧಾರದ ಮೇಲೆ ವಿವಿಯ ಶುಲ್ಕಗಳು ಹೆಚ್ಚಾಗದಂತೆ, ದೇಶದ ಯಾವುದೇ ವಿಶ್ವವಿದ್ಯಾಲಯಕ್ಕಿಂತ ಅನುಕೂಲಕರವಾಗಿ ಬಡವರು ಉನ್ನತ ವಿದ್ಯಾಭ್ಯಾಸ ಪಡೆಯಲು ಸಾಧ್ಯವಾಗಿದೆ.

ಸೀತಾರಾಮ್ ಯೆಚೂರಿ ಈ ಅಡಿಪಾಯದ ಮೇಲೆ ದೃಢವಾದ ಕಟ್ಟಡ ಕಟ್ಟಿದರು. ನಿರಂತರವಾಗಿ ವಿವಿಯ ವಿದ್ಯಾರ್ಥಿಗಳೊಡನೆ ಸಂಪರ್ಕ ಇಟ್ಟುಕೊಂಡಿದ್ದರು. ನಮ್ಮ ಪಕ್ಷದ ವಿವಿಧ ರಂಗಗಳ ಹಲವು ನಾಯಕರು ಜೆಎನ್‌ಯು ವಿದ್ಯಾರ್ಥಿಗಳಾಗಿದ್ದರೂ ಸೀತಾರಾಮ್ ಹೆಸರೇ ಜೆಎನ್‌ಯು ಜೊತೆ ತಳುಕಿಹಾಕಿಕೊಂಡಿದೆ.

ಹೀಗೆ ಜೆಎನ್‌ಯು ದೇಶದಲ್ಲಿ, ವಿದೇಶಗಳಲ್ಲಿಯೂ ವಿವಿಗಳ ಒಳಗಿನ ಅಕಾಡೆಮಿಕ್ ಪ್ರಜಾಪ್ರಭುತ್ವಕ್ಕೆ ಒಂದು ಆದರ್ಶವಾದ ಮಾದರಿಯಾಗಿದೆ.

ಇಂತಹ ಮಾದರಿಯನ್ನು ಉಳಿಸಿ ಬೆಳೆಸಿದ ಕಾಂ.ಸೀತಾರಾಮ್‌ರವರ ಕೊಡುಗೆಯನ್ನು ನೆನೆಯೋಣ. ❑

ಸಂವಿಧಾನ, ಪ್ರಜಾಪ್ರಭುತ್ವವನ್ನು ಉಳಿಸುವ ಹಂತವನ್ನು ಸಿದ್ಧಗೊಳಿಸಿದ ಸೀತಾರಾಮ್ ಯೆಚೂರಿ: ಶ್ರದ್ಧಾಂಜಲಿ

ವಿಜೆಕೆ ನಾಯರ್

ಸೀತಾರಾಮ್ ಯೆಚೂರಿಯವರ ನಿಧನದಿಂದ ಉಂಟಾಗಿರುವ ತೆರವು ದೇಶಾದ್ಯಂತ ನಮ್ಮ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ಸದಸ್ಯರು ಮಾತ್ರವಲ್ಲ, ಭಾರತೀಯ ಸಂವಿಧಾನದ ನೆಚ್ಚಿನ ಮೌಲ್ಯಗಳನ್ನು ರಕ್ಷಿಸಬಯಸುವ ಪ್ರತಿಯೊಬ್ಬ ರಾಜಕೀಯ ನಾಯಕರು/ಕಾರ್ಯಕರ್ತರ ಅನುಭವಕ್ಕೂ ಬಂದಿದೆ. ಇದು ಒಂದು ಕ್ರಾಂತಿಕಾರಿ ಆಂದೋಲನದ ಕೇಂದ್ರ ನಾಯಕತ್ವದ ಭಾಗವಾಗಿ ಸುಮಾರು ಅರ್ಧ ಶತಮಾನದ ರಾಜಕೀಯ ಕೆಲಸದ ಒಂದು ಅನನ್ಯ ಸಾಧನೆಯಾಗಿದೆ.

ವಸಾಹತುಶಾಹಿ ವಿರೋಧಿ ಹೋರಾಟದಲ್ಲಿ ರೂಪುಗೊಂಡ ಸಂವಿಧಾನದ ಮೌಲ್ಯಗಳು ಕಳೆದ ಒಂದು ದಶಕದಲ್ಲಿ ಕವಲು ದಾರಿಯಲ್ಲಿವೆ. ಒಂದೆಡೆಯಲ್ಲಿ ಕಾರ್ಪೊರೇಟ್–ಕೋಮುವಾದಿ ನಂಟು, ಇನ್ನೊಂದೆಡೆಯಲ್ಲಿ ಜನಕೇಂದ್ರಿತ ಜಾತ್ಯತೀತ ಪ್ರಜಾಸತ್ತಾತ್ಮಕ ಶಕ್ತಿಗಳ ನಡುವೆ ಈ ಕವಲುದಾರಿ ಬಲಪಂಥೀಯರ ಹಾದಿಯನ್ನು ಈಗಷ್ಟೇ ಮಂಕಾಗಿಸಿದ್ದರೆ, ಇತ್ತ ಎಡಪಂಥೀಯ ಮಾರ್ಗವೂ ತೊಂದರೆಗಳಿಂದ ಕೂಡಿದೆ. ಆದರೂ ಸಂವಿಧಾನವನ್ನು ಉಳಿಸಬೇಕೆನ್ನುವ ಶಕ್ತಿಗಳಿಗೆ ಅವಕಾಶ ಉಜ್ವಲವಾಗುತ್ತಿರುವಂತೆ ಕಾಣುತ್ತಿದೆ.

ರಾಷ್ಟ್ರೀಯ ಚಳುವಳಿಯಾದ್ಯಂತ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ವಿಭಿನ್ನ ಕೊಡುಗೆಗಳು ಮತ್ತು ವಿಭಿನ್ನ ಮಾರ್ಗಗಳು ಕೂಡಿಕೊಂಡದ್ದನ್ನು ಕಾಣಬಹುದು. ಆರಂಭದ ಅವಧಿಯಲ್ಲಿ ಅವಿಭಜಿತ ಪಂಜಾಬ್ ಮತ್ತು ಬಂಗಾಲ ಜನ್ಮ ನೀಡಿದ ಕ್ರಾಂತಿಕಾರಿಗಳಿಂದ ಹಿಡಿದು, ಎರಡನೇ ಮಹಾಯುದ್ಧದ ನಂತರದ ರಿನ್ ಬಂಡಾಯ, ತೆಲಂಗಾಣ, ಪುನ್ನಪ್ರ–ವಾಯಲಾರ್, ತೆಭಾಗ ಮುಂತಾದ ಹೋರಾಟಗಳ ಪ್ರಕ್ಷುಬ್ಧ ವಾತಾವರಣದ ವರೆಗೆ ಇದನ್ನು ಕಾಣಬಹುದು. ಅಂಡಮಾನಿನ ಸೆಲ್ಯುಲರ್ ಜೈಲುವಾಸಕ್ಕೆ ಗುರಿಯಾದವರಲ್ಲಿ, ಸೀತಾರಾಮ್ ಯೆಚೂರಿಯವರು ಹೇಳಿದಂತೆ, ಶೇಕಡಾ 80ರಷ್ಟು ಕಮ್ಯುನಿಸ್ಟರು.

ರಾಷ್ಟ್ರೀಯ ಒಮ್ಮತವನ್ನು ಪುನಃಸ್ಥಾಪಿಸಲು, ಏನಿಲ್ಲವೆಂದರೂ ಸ್ವಲ್ಪ ಮಟ್ಟಿಗೆ ಕೋಮುವಾದಿ ಶಕ್ತಿಗಳನ್ನು ಹಿಂದಕ್ಕೆ ತಳ್ಳುವ ಕೆಲಸವನ್ನು ತಾಳ್ಮೆಯಿಂದ ಮಾಡುವಲ್ಲಿ, ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಉಳಿಸುವ ಹಂತವನ್ನು ಸಿದ್ಧಗೊಳಿಸಿ, ಒಂದು ಎಡ ಪ್ರಜಾಸತ್ತಾತ್ಮಕ ವೇದಿಕೆಯತ್ತ ಮುನ್ನಡೆಯನ್ನು ಸಾಧ್ಯಗೊಳಿಸುವಲ್ಲಿ ಸೀತಾರಾಮ್ ಆಧಾರಭೂತ ಪಾತ್ರವನ್ನು ವಹಿಸಿದರು.

ಆಗಸ್ಟ್ 15, 1947 ರಂದು, ಒಂದೊಮ್ಮೆ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಕಾಮ್ರೇಡ್ ಎ.ಕೆ.ಗೋಪಾಲನ್ ಅವರನ್ನು ಬಿಡುಗಡೆ ಮಾಡಿರಲಿಲ್ಲ, ಅವರು ಕಣ್ಣೂರು ಸೆಂಟ್ರಲ್ ಜೈಲಿನೊಳಗೇ ಜೈಲುವಾಸಿಗಳ ಒಂದು ಮೆರವಣಿಗೆ ನಡೆಸಿ ರಾಷ್ಟ್ರಧ್ವಜವನ್ನು ಹಾರಿಸಿದರು ಎಂಬುದು ಸ್ವಾತಂತ್ರ್ಯದ ಮುನ್ನಾದಿನದಂದು ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ನಡುವೆ ವೈರತ್ವವಿಲ್ಲದ ವೈರುಧ್ಯಗಳಿದ್ದವು ಎಂಬ ಕಟುವಾಸ್ತವದ ಮೇಲೆ ಬೆಳಕು ಚೆಲ್ಲುತ್ತದೆ.

ಹಾಗೆಯೇ ಮೂರು ದಶಕಗಳ ನಂತರ ಎಲ್ಲರ ಗಮನ ಸೆಳೆದ ಮತ್ತೊಂದು ಘಟನೆಯೆಂದರೆ, 25 ವರ್ಷ ವಯಸ್ಸಿನ ಸೀತಾರಾಮ್ ಜೆಎನ್‌ಯು ವಿದ್ಯಾರ್ಥಿ ಸಂಘದ ಜ್ಞಾಪಕ ಪತ್ರವನ್ನು ಇಂದಿರಾ ಗಾಂಧಿಯವರಿಗೆ ಸಲ್ಲಿಸಿ, ಆಕೆ ಜೆಎನ್‌ಯು ಕುಲಪತಿ ಹುದ್ದೆಯಿಂದ ರಾಜೀನಾಮೆ ಕೊಡುವಂತೆ ಮಾಡಿದ್ದು.

ಕಮ್ಯೂನಿಸ್ಟ್ ಪಕ್ಷ ಮತ್ತು ಭಾರತ ರಾಷ್ಟ್ರೀಯ ಕಾಂಗ್ರೆಸ್ ನಡುವೆ ಇಂತಹ ಹಲವಾರು ಸಂಘರ್ಷದ ತಾಣಗಳಿವೆ. ಕೇರಳ ಪಶ್ಚಿಮ ಬಂಗಾಳ, ತ್ರಿಪುರಾ ಮುಂತಾದ ಸ್ಥಳಗಳಲ್ಲಿ ಕಾಂಗ್ರೆಸ್ ನೇತೃತ್ವದ ಕಮ್ಯೂನಿಸ್ಟ್ ವಿರೋಧಿ ಘಟನೆಗಳ ಸಮಯದಲ್ಲಾಗಲೀ, ವಿ.ವಿ.ಗಿರಿಯವರ ಚುನಾವಣೆ, ಬಾಂಗ್ಲಾದೇಶ ವಿಮೋಚನೆಯ ಸಮಯದಲ್ಲಿ ಕಾಂಗ್ರೆಸಿನ ಇಂದಿರಾ ಬಣಕ್ಕೆ ಕಮ್ಯೂನಿಸ್ಟರ ರಾಜಿ–ಸಂಧಾನದ ನಿಲುವಿನಲ್ಲಾಗಲೀ ಇದನ್ನು ಕಾಣಬಹುದು.

ಸೀತಾರಾಮ್, ಸ್ವಾತಂತ್ರ್ಯದ ಐದು ವರ್ಷಗಳ ನಂತರ ಜನಿಸಿದರೂ, ತಮ್ಮ ವಿದ್ಯಾರ್ಥಿ ದೆಸೆಯಲ್ಲಿಯೇ ಕ್ರಾಂತಿಕಾರಿ ನಿಲುವಿನತ್ತ ಸೆಳೆಯಲ್ಪಟ್ಟು ಸ್ವಾತಂತ್ರ್ಯ ಆಂದೋಲನದ ಜನಪರ ಪ್ರಜಾಪ್ರಭುತ್ವವಾದಿ ಮಾರ್ಗದಲ್ಲಿ, ಸಾಂಪ್ರದಾಯಿಕ ಬಣ್ಣ ಬಳಿದುಕೊಂಡ ಕಾಂಗ್ರೆಸ್ ಪ್ರವೃತ್ತಿಯಂತೆ ಅವರೇನೂ ಕಣ್ಣು–ಪಟ್ಟಿ ಕಟ್ಟಿಕೊಳ್ಳದೇ ಉಜ್ವಲ ಕೆಂಪು ಬಣ್ಣವನ್ನು ತಮ್ಮದಾಗಿಸಿಕೊಂಡರು.

ಮಹಾಯುದ್ಧದ ಮತ್ತು ಪ್ರಜಾಪ್ರಭುತ್ವ–ಪೂರ್ವ ಅವಧಿಯಲ್ಲಿ ನಮ್ಮ ದೇಶದ ಎಲ್ಲ ಪ್ರಗತಿಪರ ಶಕ್ತಿಗಳ ನಡುವೆ ಒಂದು ರಾಷ್ಟ್ರೀಯ ಒಮ್ಮತವಿತ್ತು. ಇದು ಎಡಪಂಥೀಯರು ಆರಂಭದಲ್ಲಿ ತಳೆದ ಕುರುಡು–ಸೈದ್ಧಾಂತಿಕ ಪ್ರವೃತ್ತಿಯಿಂದಾಗಿ ಮತ್ತು ಶೀತಲ ಸಮರದ ಅವಧಿಯಾದ್ಯಂತ ಕಾಂಗ್ರೆಸಿನ ಕಮ್ಯೂನಿಸ್ಟ್–ವಿರೋಧಿ ನಿಲುವಿನಿಂದಾಗಿ ಛಿದ್ರಗೊಂಡಿತು. ಇದು ಬಂಗಾಳ ಮತ್ತು ಕೇರಳದಂತಹ ಎಡ ಪ್ರಾಬಲ್ಯದ ಪ್ರದೇಶಗಳಲ್ಲಿ ಘರ್ಷಣೆಗೆ ಕಾರಣವಾಯಿತು. ಸೋವಿಯತ್ ಒಕ್ಕೂಟದ ವಿಸರ್ಜನೆಯ ನಂತರ ಶೀತಲ ಸಮರ ಬಹಿರಂಗವಾಗಿ ಕೊನೆಗೊಂಡಿತು. ಆದರೆ ಸಮಾಜವಾದ ಪಾಳೆಯಕ್ಕಾದ ಹಿನ್ನಡೆಯು ಬಲಪಂಥೀಯ ಶಕ್ತಿಗಳನ್ನು ಹುರಿದುಂಬಿಸಿತು ಮತ್ತು ಸಾಮ್ರಾಜ್ಯಶಾಹಿ ಪ್ರಾಯೋಜಿತ ಕಾರ್ಪೊರೇಟ್–ಕೋಮುವಾದಿ ನವ–ಫ್ಯಾಸಿಸ್ಟ್ ಶಕ್ತಿಗಳನ್ನು ಸೃಷ್ಟಿಸಿತು. ಇಂತಹ ಸಂದರ್ಭಧಲ್ಲಿ, ನಾವು ಬೆಂಕಿ ನಂದಿಸುವಲ್ಲಿ ಪ್ರಗತಿಪರ ಶಕ್ತಿಗಳ ಅಂತರಾಷ್ಟ್ರೀಯ ಸೌಹಾರ್ದವನ್ನು ಸ್ಪಷ್ಟೀಕರಿಸುವಲ್ಲಿ ನಮ್ಮ ಪಕ್ಷದ ಪಾತ್ರವನ್ನು ಸ್ಪಷ್ಟವಾಗಿ ಕಾಣಲು ಸಾಧ್ಯವಾಯಿತು. ನಮ್ಮ ಮುಖಂಡತ್ವ ಈ ಕಾರ್ಯಭಾರವನ್ನು ಅಂತರಾಷ್ಟ್ರೀಯ ಸಂಬಂಧಗಳಲ್ಲಿ ಮತ್ತು ಸೋವಿಯತ್ ಒಕ್ಕೂಟದಲ್ಲಿನ ಸ್ಥಿತಿ–ಗತಿಗಳನ್ನು ಕುರಿತು 14ನೇ ಮಹಾಧಿವೇಶನದ ಠರಾವುಗಳನ್ನು ರೂಪೀಕರಿಸಿ ಮಂಡಿಸುವ ಕೆಲಸವನ್ನು ಸೀತಾರಾಮ್ ಗೆ ವಹಿಸಿದ್ದನ್ನು ನೋಡಿದ್ದೇವೆ.

ನಿಸ್ಸಂದೇಹವಾಗಿಯೂ, ಈ ಅವಧಿಯಲ್ಲಿ ರಾಷ್ಟ್ರೀಯವಾಗಿ ಪ್ರಗತಿಪರ ಶಕ್ತಿಗಳನ್ನು ಹಿಮ್ಮೆಟ್ಟಿಸಿ ಲಾಭ ಪಡೆಯಲಾರಂಭಿಸಿದ್ದು ಕೋಮುವಾದಿ ಶಕ್ತಿಗಳೇ. ಕಳೆದ ಒಂದು ದಶಕದಲ್ಲಿ ಸಂವಿಧಾನಿಕ ನೀತಿಗಳಿಗೆ ಸವಾಲು ಬಂದಿರುವ ಕಟುವಾಸ್ತವ ನಮ್ಮ ಮುಂದಿದೆ.

ರಾಷ್ಟ್ರೀಯ ಒಮ್ಮತವನ್ನು ಪುನಃಸ್ಥಾಪಿಸಲು, ಏನಿಲ್ಲವೆಂದರೂ ಸ್ವಲ್ಪ ಮಟ್ಟಿಗೆ ಕೋಮುವಾದಿ ಶಕ್ತಿಗಳನ್ನು ಹಿಂದಕ್ಕೆ ತಳ್ಳುವ ಕೆಲಸವನ್ನು ತಾಳ್ಮೆಯಿಂದ ಮಾಡುವಲ್ಲಿ ಮತ್ತು ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಉಳಿಸುವ ಹಂತವನ್ನು ಸಿದ್ಧಗೊಳಿಸಿ ಒಂದು ಎಡ ಪ್ರಜಾಸತ್ತಾತ್ಮಕ ವೇದಿಕೆಯತ್ತ ಮುನ್ನಡೆಯನ್ನು ಸಾಧ್ಯಗೊಳಿಸುವಲ್ಲಿ ಸೀತಾರಾಂ ಆಧಾರಭೂತ ಪಾತ್ರವನ್ನು ವಹಿಸಿದರು.



ಸೀತಾರಾಮ್ ಯೆಚೂರಿ: ಕಾಕಿನಾಡದಿಂದ–ದೆಹಲಿಯವರೆಗೆ

ಸೀತಾರಾಮ್ ಯೆಚೂರಿ ಅವರು 1952ರ ಆಗಸ್ಟ್ 12ರಂದು ಮದ್ರಾಸಿನ ತೆಲುಗು ಕುಟುಂಬದಲ್ಲಿ ಜನಿಸಿದರು. ತಂದೆ ಸರ್ವೇಶ್ವರ ಸೋಮಯಾಜುಲ ಯೆಚೂರಿ ಮತ್ತು ತಾಯಿ ಕಲ್ಪಕಂ ಯೆಚೂರಿಯವರು ಆಂಧ್ರಪ್ರದೇಶದ ಕಾಕಿನಾಡದವರು. ಯೆಚೂರಿಯವರ ತಂದೆ ಆಂಧ್ರಪ್ರದೇಶ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (APSRTC) ಯಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು. ಅವರ ತಾಯಿ ಸರ್ಕಾರಿ ಉದ್ಯೋಗಿ. ತಾಯಿ ಇತ್ತೀಚೆಗೆ ತೀರಿಕೊಂಡರು. ಮದ್ರಾಸಿನಲ್ಲಿ ಹುಟ್ಟಿದರೂ ಯೆಚೂರಿ ಬೆಳೆದದ್ದು ಹೈದರಾಬಾದ್ ನಲ್ಲಿ. 10ನೇ ತರಗತಿವರೆಗೆ ಆಲ್ ಸೇಂಟ್ಸ್ ಹೈಸ್ಕೂಲಿನಲ್ಲಿ ಓದಿದರು. 1969ರಲ್ಲಿ ತೆಲಂಗಾಣ ಚಳುವಳಿಯ ಸಮಯದಲ್ಲಿ ಅವರು ದೆಹಲಿ ಸೇರಿಕೊಂಡರು. ಅಲ್ಲಿ ಪ್ರೆಸಿಡೆಂಟ್ ಎಸ್ಟೇಟ್ ಶಾಲೆಗೆ ಸೇರಿ ಸಿಬಿಎಸ್‌ಇ ಹೈಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ ಪ್ರಥಮ ರ್‍ಯಾಂಕ್ ಗಳಿಸಿದರು.

ಅದರ ನಂತರ, ಅವರು ದೆಹಲಿಯ ಸೇಂಟ್ ಸ್ಟೀಫನ್ಸ್ ಕಾಲೇಜಿನಲ್ಲಿ ಅರ್ಥಶಾಸ್ತ್ರದಲ್ಲಿ ಬಿಎ (ಆನರ್ಸ್) ಮತ್ತು ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಿಂದ ಎಂಎ ಅಧ್ಯಯನ ಮಾಡಿದರು. ಎರಡರಲ್ಲೂ ಪ್ರಥಮ ದರ್ಜೆಯಲ್ಲಿ ತೇರ್ಗಡೆ. ಅವರು ಅರ್ಥಶಾಸ್ತ್ರದಲ್ಲಿ ಪಿ.ಎಚ್.ಡಿಗಾಗಿ ಜೆಎನ್‌ಯು ಸೇರಿದರು. ತುರ್ತುಪರಿಸ್ಥಿತಿಯ ಸಮಯದಲ್ಲಿ ಅವರನ್ನು ಬಂಧಿಸಲಾಯಿತು ಮತ್ತು ಅಧ್ಯಯನವು ಮಧ್ಯದಲ್ಲಿಯೇ ನಿಂತುಹೋಯಿತು.

ರಾಜಕೀಯ ಜೀವನ

1974ರಲ್ಲಿ ಯೆಚೂರಿ ಎಸ್‌ಎಫ್‌ಐ ಸೇರಿದರು. ಅದರ ಮುಂದಿನ ವರ್ಷ ಸಿಪಿಎಂ ನಲ್ಲಿ ಸೇರಿದರು. ಜೆಎನ್‌ಯು ವಿದ್ಯಾರ್ಥಿಯಾಗಿದ್ದಾಗ 1975ರಲ್ಲಿ ಅವರನ್ನು ಬಂಧಿಸಲಾಯಿತು. ಬಂಧನಕ್ಕೂ ಮುನ್ನ ಯೆಚೂರಿ ಸ್ವಲ್ಪ ಕಾಲ ಭೂಗತರಾಗಿ ತುರ್ತುಪರಿಸ್ಥಿತಿ ವಿರುದ್ಧ ಕೆಲಸ ಮಾಡಿದರು. ತುರ್ತು ಪರಿಸ್ಥಿತಿಯ ನಂತರ 1977–78ರಲ್ಲಿ ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ಮೂರು ಅವಧಿಗೆ ಆಯ್ಕೆಯಾದರು. ಪ್ರಕಾಶ್ ಕಾರಟ್ ಜೊತೆಗೂಡಿ ಜೆಎನ್‌ಯು ನಲ್ಲಿ ಅಜೇಯವಾದ ಎಡಪಂಥೀಯರ ಕೋಟೆಯನ್ನು ನಿರ್ಮಿಸಲು ಶ್ರಮಿಸಿದರು. 1978ರಲ್ಲಿ ಯೆಚೂರಿ ಎಸ್‌ಎಫ್‌ಐ ಅಖಿಲ ಭಾರತ ಜಂಟಿ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಆ ನಂತರ ಎಸ್‌ಎಫ್‌ಐನ ಅಖಿಲ ಭಾರತ ಅಧ್ಯಕ್ಷರಾದರು. 1984ರಲ್ಲಿ ಅವರನ್ನು ಸಿಪಿಎಂನ ಕೇಂದ್ರ ಸಮಿತಿಗೆ ಆಯ್ಕೆ ಮಾಡಿಕೊಂಡರು. 1985ರಲ್ಲಿ ರಚನೆಯಾದ ಪಕ್ಷದ ಕೇಂದ್ರ ಸಮಿತಿ ಸದಸ್ಯರಾದರು. ಯೆಚೂರಿ, ಕಾರಟ್, ಸುನಿಲ್ ಮೊಯಿತ್ರಾ, ಪಿ.ರಾಮಚಂದ್ರನ್ ಮತ್ತು ಎಸ್.ರಾಮಚಂದ್ರನ್ ಪಿಳ್ಳೈ ಅವರಿದ್ದ ಕೇಂದ್ರ ಸಮಿತಿಯು ಪಾಲಿಟ್‌ಬ್ಯೂರೋ ನಿರ್ದೇಶನದಲ್ಲಿ ಕೆಲಸ ಮಾಡಿದೆ.

1986ರ ವರೆಗೆ ಯೆಚೂರಿ ಎಸ್‌ಎಫ್‌ಐನಲ್ಲಿ ಮುಂದುವರಿದಿದ್ದರು. ಅವರು 1992ರಲ್ಲಿ ನಡೆದ ಸಿಪಿಎಂನ 14ನೇ ಅಖಿಲ ಭಾರತ ಮಹಾಧಿವೇಶನದಲ್ಲಿ ಪಕ್ಷದ ಪಾಲಿಟ್‌ಬ್ಯೂರೋಗೆ ಆಯ್ಕೆಯಾದರು. 19 ಏಪ್ರಿಲ್ 2015ರಂದು ವಿಶಾಖಪಟ್ಟಣದಲ್ಲಿ ನಡೆದ ಪಕ್ಷದ 15ನೇ ರಾಷ್ಟ್ರೀಯ ಮಹಾಧಿವೇಶನದಲ್ಲಿ ಸಿಪಿಐ(ಎಂ)ನ ಐದನೇ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಏಪ್ರಿಲ್ 2018ರಲ್ಲಿ ಹೈದರಾಬಾದ್‌ನಲ್ಲಿ ನಡೆದ ಸಿಪಿಎಂನ 22ನೇ ಮಹಾಧಿವೇಶನದಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಮರು ಆಯ್ಕೆಯಾದರು. ಏಪ್ರಿಲ್ 2022ರಲ್ಲಿ ಕೇರಳದ ಕಣ್ಣೂರಿನಲ್ಲಿ ನಡೆದ ಪಕ್ಷದ 23ನೇ ಮಹಾಧಿವೇಶನದಲ್ಲಿ ಯೆಚೂರಿ ಅವರನ್ನು ಮೂರನೇ ಅವಧಿಗೆ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು.

ಸಮ್ಮಿಶ್ರ ರಾಜಕಾರಣದಲ್ಲಿ ಸಿಪಿಐ(ಎಂ)ನ ಮಾಜಿ ಪ್ರಧಾನ ಕಾರ್ಯದರ್ಶಿ ಹರಿಕಿಶನ್ ಸಿಂಗ್ ಸುರ್ಜಿತ್ ಅವರು ನಿರ್ವಹಿಸಿದ ಪಾತ್ರ ಅಸಂಖ್ಯಾತ. ಯೆಚೂರಿ ಅದನ್ನು ಮತ್ತಷ್ಟು ಮುಂದಕ್ಕೆ ಕೊಂಡೊಯ್ದರು. 1996ರಲ್ಲಿ ಯುನೈಟೆಡ್ ಫ್ರಂಟ್ ಸರ್ಕಾರಕ್ಕಾಗಿ ಕಾಂಗ್ರೆಸ್ ನಾಯಕ ಪಿ.ಚಿದಂಬರಂ ಜೊತೆಗೂಡಿ, ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ರಚಿಸಿದರು. 2004ರಲ್ಲಿ ಯುಪಿಎ ಸರ್ಕಾರ ರಚನೆಯಾದ ಸಂದರ್ಭದಲ್ಲಿ ಒಕ್ಕೂಟ ರಚನೆಯಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು. ಜನರ ಮೂಲಭೂತ ಹಕ್ಕುಗಳ ರಕ್ಷಣೆಗಾಗಿ ಅವರು ಅವಿರತ ಹೋರಾಟ ನಡೆಸಿದರು. 'ವಿವಿಧತೆಯಲ್ಲಿ ಏಕತೆ' ಎಂಬ ಸಿದ್ಧಾಂತದಲ್ಲಿ

ಪುಟ 12 ಕ್ಕೆ

ವಿಶ್ವದ ಕಮ್ಯೂನಿಸ್ಟ್ ಚಳುವಳಿಗಳೊಂದಿಗೆ ನಿಕಟ ಸಂಬಂಧ ಇರಿಸಿಕೊಂಡಿದ ಕಾಮ್ರೇಡ್ ಸೀತಾರಾಮ್ ಹಲವಾರು ಸಂದಿಗ್ಧ ಸನ್ನಿವೇಶಗಳಲ್ಲಿ, ಮಹತ್ತರ ವಿದ್ಯಾಮಾನಗಳಲ್ಲಿ ಸೈದ್ಧಾಂತಿಕ ನಿಲುವು ರೂಪಿಸುವಲ್ಲಿ ಸಕ್ರಿಯ ಪಾತ್ರ ವಹಿಸಿದರು. ಮಹತ್ತದ ಅವರ ಪಾತ್ರದ ಬಗ್ಗೆ ಲೇಖಕರು ವಿವರಿಸಿದ್ದಾರೆ.

ವಿಶ್ವ ಕಮ್ಯುನಿಸ್ಟ್ ಚಳುವಳಿಯ ಉಳಿವಿಗೆ, ಐಕ್ಯತೆಯ ಬೆಳವಣಿಗೆಗೆ ಸೀತಾರಾಮ್ ಶ್ರಮ

ಜಿ.ಎನ್. ನಾಗರಾಜ್



1989-91ರ ಸಮಯ ವಿಶ್ವದ ಕಮ್ಯುನಿಸ್ಟ್ ಚಳುವಳಿಗೆ ಉಂಟಾದ ಶಾಕ್ ಅನುಭವಿಸಿದವರಿಗಷ್ಟೇ ಗೊತ್ತು. ಎರಡನೇ ಜಗತ್ತು ಎಂದು ಕರೆಯಲು ಕಾರಣವಾಗಿದ್ದ ಪೂರ್ವ ಯುರೋಪಿನ ಹಲವು ಸಮಾಜವಾದಿ ದೇಶಗಳು ಒಂದೊಂದಾಗಿ ಜನತೆಯ ದಂಗೆಯನ್ನೆದುರಿಸಿ ನೆಲ ಕಚ್ಚಿದವು. ಕೊನೆಗೆ ಸೋವಿಯತ್ ರಷ್ಯಾದ ಸರ್ಕಾರವೇ ಕುಸಿಯಿತು. ವಿಶ್ವಾದ್ಯಂತ ಕಮ್ಯುನಿಸ್ಟ್ ಪಕ್ಷಗಳು ಮರಗಟ್ಟಿದಂತಾದವು. ಕಾಂ.ಸುರ್ಜೀತ್‌ರವರು ಹೇಳಿದಂತೆ 'ಎಷ್ಟೋ ಕಮ್ಯುನಿಸ್ಟ್ ಪಕ್ಷಗಳು ರಾತ್ರೋರಾತ್ರೆ ಕಮ್ಯುನಿಸ್ಟ್ ಪಕ್ಷವೆಂಬ ಹೆಸರನ್ನೇ ಬದಲಿಸಿ ಬೋರ್ಡನ್ನು ಮಾತ್ರವಲ್ಲ, ಮಾರ್ಕ್ಸ್‌ವಾದಿ, ಲೆನಿನ್‌ವಾದಿ ಸಿದ್ಧಾಂತವನ್ನೂ ಬದಲಿಸಿಬಿಟ್ಟವು. ಇನ್ನು ಕೆಲವು ಇದೇನು ಎಂದು ಅರ್ಥ ಮಾಡಿಕೊಳ್ಳಲು ಸೋತು ಗೊಂದಲದಲ್ಲಿದ್ದವು. ಮತ್ತೆ ಹಲವು ಇಡೀ ಬೆಳವಣಿಗೆಗಳನ್ನು ಮಾರ್ಕ್ಸ್‌ವಾದಿ ಕಣ್ಣೋಟದಿಂದ ವಿಶ್ಲೇಷಿಸಲು ಹೆಣಗುತ್ತಿದ್ದವು.' ಆ ಕತ್ತಲ ಸಮಯದಲ್ಲಿ ನಮ್ಮ ಪಕ್ಷದ ಪತ್ರಿಕೆ ಪಿ.ಡಿ.ಯಲ್ಲಿ ಬಂದ ಲೇಖನಗಳು ನಮ್ಮ ಪಕ್ಷ ಆ ದೇಶಗಳ ಜನತೆಯ ಪರವಾಗಿ, ಅಂದಿನ ಸಮಾಜವಾದಿ ದೇಶಗಳ ದಬ್ಬಾಳಿಕೆಯ ಆಳ್ವಿಕೆಗಳ ವಿರುದ್ಧವಾಗಿ ದೃಢ ನಿಲುವು ತಳೆಯಿತು. ಇದು ಕತ್ತಲಲ್ಲಿ ದಾರಿ ಕಾಣದಂತಾಗಿದ್ದ ನಮ್ಮ ಪಕ್ಷದ ಸದಸ್ಯರಿಗೆ ಬೆಳಕು ತೋರಿಸಿತು. ಅರವತ್ತರ ದಶಕದಲ್ಲಿ ಎರಡು ಬಾರಿ ತೀವ್ರ ಒಡಕು ಕಂಡಿದ್ದ ನಮ್ಮ ಪಕ್ಷ ಮತ್ತೆ ಯಾವ ಒಡಕಿಲ್ಲದೇ ಒಗ್ಗಟ್ಟಿನಿಂದ ಉಳಿಯಲು ಸಾಧ್ಯವಾಯಿತು. ಇದು ಸಾಧ್ಯವಾಗಿದ್ದು ಸಿಪಿಎಂ ಪಕ್ಷವನ್ನು ರೂಪಿಸಿದ ನವರತ್ನಗಳೆಂದು ಹೆಸರಾದ ಪಾಲಿಟ್‌ಬ್ಯೂರೋ ಸದಸ್ಯರ ಮಾರ್ಕ್ಸ್‌ವಾದಿ ತಿಳುವಳಿಕೆ ಹಾಗೂ ಅನುಭವದ ಆಳದಿಂದ.

ಆದರೆ ಇಂತಹ ಅನುಭವ ಗಣಿಗಳಿಗೆ ತಮಗೆ ಆಗಲೇ ವಯಸ್ಸಾಗಿದೆ. ಎಂಬತ್ತರ ದಶಕದ ಮಧ್ಯಭಾಗದ ವೇಳೆಗೆ ಈ ಒಂಬತ್ತರಲ್ಲಿ ನಾಲ್ಕು ಜನ-ಎ.ಕೆ.ಗೋಪಾಲನ್, ಬಂಗಾಲದ ಪ್ರಮೋದ್ ದಾಸ್ ಗುಪ್ತ, ಪಿ.ಸುಂದರಯ್ಯ ಇಲ್ಲವಾಗಿದ್ದಾರೆ. ಪಿ.ರಾಮಮೂರ್ತಿಯವರು ತಮಿಳುನಾಡಿಗೆ ಸೀಮಿತವಾಗಿ ಅಲಭ್ಯವಾಗಿದ್ದಾರೆ. ಉಳಿದ ಐದು ಜನರಿಗೂ ಎಪ್ಪತ್ತು ಎಂಬತ್ತರ ನಡುವಣ ವೃದ್ಧಾಪ್ಯ. ಮುಂದೆ ಪಕ್ಷದ ನಾಯಕತ್ವ ಹೇಗೆ ಎಂಬ ಬಗ್ಗೆ ಚರ್ಚಿಸಿ ಭರವಸೆ ನೀಡುವ ಯುವಕರು ಮಾರ್ಕ್ಸ್‌ವಾದದ ತಿಳುವಳಿಕೆ, ವಿವಿಧ ರಾಜ್ಯಗಳ ಕಮ್ಯೂನಿಸ್ಟ್ ಸಂಘರ್ಷದ ಅನುಭವ ಇರುವ ಸಂಗಾತಿಗಳನ್ನು ನಾಯಕತ್ವದಲ್ಲಿ ತೊಡಗಿಸಿಕೊಳ್ಳಬೇಕೆಂದು ಚಿಂತಿಸಿದರು. ಆಗ ಕೇಂದ್ರ ಸಮಿತಿ ಮತ್ತು ಪಾಲಿಟ್ ಬ್ಯೂರೋಗೆ ಸೇರಿದವರು ಪ್ರಕಾಶ್ ಕಾರತ್ ಮತ್ತು ಯೆಚೂರಿ.

ವಿಶ್ವ ಕಮ್ಯುನಿಸ್ಟ್ ಚಳುವಳಿಯ ಮಹಾ ಬಿಕ್ಕಟ್ಟಿನ ಸಂದರ್ಭದಲ್ಲಿ ನಮ್ಮ ಪಕ್ಷದಲ್ಲಿ ವಿಶ್ವದ ಕಮ್ಯುನಿಸ್ಟ್ ಪಕ್ಷಗಳ ಜೊತೆ ಸಂಬಂಧದ ಜವಾಬುದಾರಿ ಹೊತ್ತಿದ್ದವರು ಕಾಂ. ಸುರ್ಜಿತ್. ಸಿಪಿಎಂ ರೂಪುಗೊಂಡ 1964 ರ ನಂತರ ವಿಶ್ವದ ಎಲ್ಲ ಕಮ್ಯುನಿಸ್ಟ್ ಪಕ್ಷಗಳೂ ಸಿಪಿಎಂ ಜೊತೆ ಸಂಬಂಧ ಕಡಿದುಕೊಂಡ ಮತ್ತು ಈ ಕಡೆ ರಷ್ಯಾ ಆ ಕಡೆ ಚೀನಾ ಎರಡೂ ದೊಡ್ಡ ಕಮ್ಯುನಿಸ್ಟ್ ಪಕ್ಷಗಳ ಕಟು ಟೀಕೆಯನ್ನು ಎದುರಿಸುತ್ತಿದ್ದ ದುರ್ದಿನಗಳಲ್ಲಿ ಸುರ್ಜಿತ್ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಜೊತೆಗೆ ಸಂಬಂಧವನ್ನು ನಿಧಾನವಾಗಿ ಬೆಸೆದಿದ್ದರು.

ಅವರಿಗೆ 85 ರ ನಂತರ ವಿಶ್ವದ ಕಮ್ಯೂನಿಸ್ಟ್ ಪಕ್ಷಗಳ ಜೊತೆ ಕೆಲಸದಲ್ಲಿ ಸಹಾಯಜರಾಗಿ ಹೊಣೆ ನೀಡಲ್ಪಟ್ಟವರು ಸೀತಾರಾಮ್. ಅಂದಿನಿಂದಲೇ ಕಾಂ. ಸುರ್ಜಿತ್, ಕಾಂ. ಜ್ಯೋತಿ ಬಸು ಇತರ ಪಿಬಿ ಸಂಗಾತಿಗಳು ರಷ್ಯಾ, ಚೀನಾ, ಕ್ಯೂಬಾ, ಮೊದಲಾದ ವಿದೇಶಗಳ ಕಮ್ಯೂನಿಸ್ಟ್ ಪಕ್ಷಗಳ ಜೊತೆ ಚರ್ಚಿಸಲು ಹೋದಾಗೆಲ್ಲ ಸೀತಾರಾಮ್ ಅವರ ಸಹಚರರಾದರು. ಈ ಮಹಾನ್ ಪಕ್ಷಗಳ ಮುಖ್ಯ ನಾಯಕರ ನಡುವಣ ಚರ್ಚೆಗಳಿಗೆ ಸಾಕ್ಷಿಯಾದರು. ಮಾರ್ಕ್ಸ್‌ವಾದವನ್ನು ವಿವಿಧ ದೇಶಗಳು ತಮ್ಮ ನಿರ್ದಿಷ್ಟ ಪರಿಸ್ಥಿತಿಗೆ ಅಳವಡಿಸಿಕೊಂಡ ಪರಿಯನ್ನು ವೀಕ್ಷಿಸಿದರು. ಅಧ್ಯಯನ ಮಾಡಿದರು. ಈ ಚರ್ಚೆಗಳಿಂದ ಕಲಿತರು.

ಅವರು ಆ ವೇಳೆಗಾಗಲೇ ಮಾಡಿದ್ದ ಮಾರ್ಕ್ಸ್‌ವಾದ ಲೆನಿನ್‌ವಾದದ ಮೂಲಭೂತ ಗ್ರಂಥಗಳ ಅಧ್ಯಯನ ಅವರ ಸಹಾಯಕ್ಕೆ ಬಂದಿತು. ಈ ನಾಯಕರುಗಳ ಜೊತೆ ಸಂವಾದ ಮಾಡುವ ಅರ್ಹತೆ ದಕ್ಕಿತು.

ಹೀಗೆ ನಡೆದಿರುವಾಗ ಎಂಬತ್ತರ ಕೊನೆಯ ವೇಳೆಗೆ ಎರಗಿದ ಸಮಾಜವಾದಿ ಕುಸಿತಗಳ ಬಿಕ್ಕಟ್ಟನ್ನು ಅರ್ಥೈಸಿಕೊಳ್ಳಲು, ಇದು ಮಾರ್ಕ್ಸ್‌ವಾದದ ಬಿಕ್ಕಟ್ಟಲ್ಲ, ಅದರನ್ನು ಅನುಸರಿಸುವುದರಲ್ಲಿ ಉಂಟಾದ ಪ್ರಮಾದ ಎಂಬುದನ್ನು ಪಕ್ಷ ವಿಶ್ಲೇಷಣೆ ಮಾಡಿತು. ಈ ಕಾರ್ಯದಲ್ಲಿ ಸೀತಾರಾಮ್‌ರವರು ಪಾಲಿಟ್ ಬ್ಯೂರೋಗೆ ಸಹಾಯ ಮಾಡಿದರು.

ಪಕ್ಷದ 14 ನೇ ಚೆನ್ನೈ ಮಹಾಧಿವೇಶನದಲ್ಲಿ ಸೈದ್ಧಾಂತಿಕ ನಿರ್ಣಯ ಮಂಡಿಸುವಂತಹ ಮಹಾ ಹೊಣೆಯನ್ನು ಸೀತಾರಾಮ್‌ರವರಿಗೆ ನೀಡಲಾಯಿತು.

ಈ ನಿರ್ಣಯ ಇಡೀ ವಿಶ್ವದ ಕಮ್ಯುನಿಸ್ಟ್ ಚಳುವಳಿಯ ಗಮನ ಸೆಳೆಯಿತು. ಹಲವು ದೇಶಗಳ ಕಮ್ಯುನಿಸ್ಟ್ ಪಕ್ಷಗಳು ಅದನ್ನು ತಮ್ಮ ಭಾಷೆಗಳಿಗೆ ಅನುವಾದ ಮಾಡಿಕೊಂಡು ಅಧ್ಯಯನ ಮಾಡಿದರು. ಇದರ ಜೊತೆಗೆ ನಮ್ಮ ಪಕ್ಷ ಒಂದು ಮಹತ್ವದ ನಿರ್ಣಯ ಮಾಡಿತು. ವಿಶ್ವದ ಕಮ್ಯುನಿಸ್ಟ್ ಪಕ್ಷಗಳ ಗೊಂದಲಗಳನ್ನು ನಿವಾರಿಸಲು ಭಾರತದಲ್ಲಿ ವಿಶ್ವ ಕಮ್ಯುನಿಸ್ಟ್ ಪಕ್ಷಗಳ ಸಮಾವೇಶ ಒಂದನ್ನು ಕೂಡಲೇ ನಡೆಸಬೇಕೆಂದು ನಿರ್ಣಯಿಸಿತು.

ಈ ನಿರ್ಣಯವನ್ನು ಯಶಸ್ವಿ ಮಾಡಲು ಕಾಂ. ಸುರ್ಜಿತ್ ಮತ್ತು ಯೆಚೂರಿ ಜೋಡಿ ವಿಶ್ವದ ಹಲವು ದೇಶಗಳಿಗೆ ಭೇಟಿ ಕೊಟ್ಟಿತು. 1993 ರಲ್ಲಿ ಕಲ್ಕತ್ತಾದಲ್ಲಿ ಈ ಸಮಾವೇಶ ಜರುಗಿತು. ಈ ಸಮಾವೇಶ ವಿವಿಧ ಕಮ್ಯುನಿಸ್ಟ್ ಪಕ್ಷಗಳಲ್ಲಿ ಸಮಾಜವಾದಿ ಕುಸಿತದ ಬಗ್ಗೆ ಸಮಾನವಾದ ತಿಳುವಳಿಕೆ ಮತ್ತು ಮಾರ್ಕ್ಸ್‌ವಾದ ಲೆನಿನ್‌ವಾದದಲ್ಲಿ ದೃಢವಾಗಿ ಬೇರು ಬಿಟ್ಟ ಸೈದ್ಧಾಂತಿಕ ಬದ್ಧತೆ ಮತ್ತು ಐಕ್ಯತೆ ಮೂಡಿಸಲು ನೆರವಾಯಿತು.

ನಂತರ ಸೀತಾರಾಮ್ ಸುರ್ಜೀತ್‌ರವರ ಜೊತೆಯಾಗಿ ಮತ್ತು ಪ್ರತ್ಯೇಕವಾಗಿ ಹಲವು ಕಮ್ಯುನಿಸ್ಟ್ ಪಕ್ಷಗಳ ಮಹಾಧಿವೇಶನಗಳಲ್ಲಿ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಸಿಪಿಎಂನ ನಿರ್ಣಯವನ್ನು ವಿವರಿಸಿದರು. ಈ ಬಗೆಗೆ ಆಗಿಂದಾಗ್ಗೆ ಪಿಡಿಯಲ್ಲಿ ಬಂದ ವರದಿಗಳನ್ನು ಗಮನಿಸಬಹುದು. ಅವರ ಕೆಲ ಪುಸ್ತಕಗಳಲ್ಲಿ ಅವರು ಮಾಡಿದ ಉಪನ್ಯಾಸಗಳ ಒಂದೆರಡು ಮಾದರಿಗಳು ಪ್ರಕಟವಾಗಿವೆ. ಅದರಲ್ಲಿ ಅವರು ನಮ್ಮ ಪಕ್ಷದ ಮುಖವಾಣಿಯಾಗಿ ನಿರ್ಣಯ ಮತ್ತು ಸೈದ್ಧಾಂತಿಕ ತಿಳುವಳಿಕೆಯನ್ನು ವಿವರಿಸಿ ಮನವರಿಕೆ ಮಾಡಿದ ವಿಧಾನವನ್ನು, ಅದರಲ್ಲಿ ಪ್ರಕಟವಾದ ಮಾರ್ಕ್ಸ್‌ವಾದಿ ತಿಳುವಳಿಕೆಯ ಆಳವನ್ನು ಕಾಣಬಹುದು.

ಈ ಕಾರ್ಯ ವಿಶ್ವ ಕಮ್ಯುನಿಸ್ಟ್ ಚಳುವಳಿಯ ಗೊಂದಲ ನಿವಾರಿಸಲು, ಐಕ್ಯತೆಯಿಂದ ಮುಂದೆ ನಡೆಯಲು ಗಣನೀಯ ಸಹಾಯ ಮಾಡಿದೆ.

ಅಂದಿನಿಂದ ಮೂರು ದಶಕಗಳ ಕಾಲ ಸೀತಾರಾಮ್ ವಿಶ್ವ ಕಮ್ಯುನಿಸ್ಟ್ ಪಕ್ಷಗಳ ವಿವಿಧ ಜಂಟಿ ಸಮಾವೇಶಗಳಲ್ಲಿ, ಮಹಾಧಿವೇಶನಗಳಲ್ಲಿ ಭಾಗವಹಿಸುತ್ತಾ ಬಂದಿದ್ದಾರೆ.

ಈ ಪಕ್ಷಗಳ ಜೊತೆ ದ್ವಿಪಕ್ಷೀಯ ಚರ್ಚೆ ಮಾಡಿದ್ದಾರೆ. ಚೀನಾ, ಕ್ಯೂಬಾ, ವಿಯೆಟ್ನಾಂನ ಕ್ರಾಂತಿಗಳ ನಾಯಕರ ಜೊತೆ ಮುಖಾಮುಖಿಯಾಗಿದ್ದಾರೆ. ನಮ್ಮ ಪಕ್ಷದ ಭಿನ್ನ ಅಭಿಪ್ರಾಯಗಳನ್ನೂ ವಿವರಿಸಿದ್ದಾರೆ. ಈ ಪಕ್ಷಗಳ ನಾಯಕರು ಸೀತಾರಾಮ್‌ರವರ ವಿಶ್ಲೇಷಣೆಗೆ ಮನ್ನಣೆ ನೀಡಿ ಆಸಕ್ತಿಯಿಂದ ಆಲಿಸುತ್ತಿದ್ದರು ಎಂಬುದು ಪಕ್ಷದ ಗೌರವವನ್ನು ಹೆಚ್ಚಿಸಿದೆ. ●



ದೆಹಲಿಯ ಎ.ಕೆ.ಜಿ. ಭವನದಲ್ಲಿ ಕಾಮ್ರೇಡ್ ಸೀತಾರಾಮ್ ಯೆಚೂರಿಯವರ ಅಂತಿಮ ದರ್ಶನ ಪಡೆದು ಪಕ್ಷದ ಕರ್ನಾಟಕ ರಾಜ್ಯ ಸಮಿತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಅಂತಿಮ ದರ್ಶನದಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಮತ್ತು ಕೇಂದ್ರ ಸಮಿತಿ ಸದಸ್ಯರಾದ ಕಾಮ್ರೇಡ್ ಯು.ಬಸವರಾಜ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರುಗಳಾದ ಕಾಮ್ರೇಡ್ ಮೀನಾಕ್ಷಿ ಸುಂದರಂ, ಕಾಮ್ರೇಡ್ ಕೆ.ನೀಲಾ, ಜನಶಕ್ತಿ ಪ್ರಧಾನ ಸಂಪಾದಕರಾದ ಕಾಂ. ಕೆ. ಪ್ರಕಾಶ್, ಎಂ.ಪಿ. ಮುನಿವೆಂಕಟಪ್ಪ ಮತ್ತು ರಾಜ್ಯ ಸಮಿತಿ ಸದಸ್ಯರಾದ ಕಾಮ್ರೇಡ್ ಅನಿಲ್ ಕುಮಾರ್ ಹಾಗೂ ಹಿರಿಯ ವಕೀಲರು ಕುಟುಂಬದ ಸ್ನೇಹಿತರಾದ ಕೆ.ಆರ್. ವೆಂಕಟೇಶಗೌಡ, ನಾಗರಾಜ್ ನಂಜುಂಡಯ್ಯ, ಕ್ರಿಯಾ ಚಂದ್ರು ಭಾಗವಹಿಸಿದರು.

ನವ–ಉದಾರವಾದದ ಎಲ್ಲ ವಿಕೃತಿಗಳ ವಿರುದ್ಧ ಹೋರಾಟದ ಮುಖ–ಸಿಐಟಿಯು

ಕಾಮ್ರೇಡ್ ಸೀತಾರಾಂ ಯೆಚೂರಿ ಎಂಬತ್ತರ ದಶಕದ ಉತ್ತರಾರ್ಧ/90ರ ದಶಕದ ಆರಂಭದಿಂದಲೂ ನವ–ಉದಾರವಾದ ಮತ್ತು ಭಾರತದಲ್ಲಿ ಅರ್ಥವ್ಯವಸ್ಥೆ, ರಾಜಕೀಯ ಮತ್ತು ಸಮಾಜದಲ್ಲಿ ಅದರ ಎಲ್ಲಾ ವಿಕೃತ ಬಿಂಬಗಳ ವಿರುದ್ಧದ ಹೋರಾಟಗಳ ಮುಖಗಳಲ್ಲಿ ಒಬ್ಬರಾಗಿದ್ದರು ಎಂದು ಸಿಐಟಿಯು ತನ್ನ ಶ್ರದ್ಧಾಂಜಲಿಯಲ್ಲಿ ಹೇಳಿದೆ.

ಸಿಪಿಐ(ಎಂ) ನಾಯಕರಾಗಿ ಮತ್ತು ಸಂಸದರಾಗಿ ವಿವಿಧ ವಲಯಗಳ ಎಲ್ಲಾ ಕಾರ್ಮಿಕ ವರ್ಗದ ಹೋರಾಟಗಳಲ್ಲಿ ಭಾಗವಹಿಸಲು ಅವರು ಬಹಳ ಆಸಕ್ತರಾಗಿದ್ದರು. ಅವರು ರಾಜ್ಯಸಭೆಯಲ್ಲಿ ದುಡಿಯುವ ಜನರ ವಿವಿಧ ವಿಭಾಗಗಳ ಸಮಸ್ಯೆಗಳನ್ನು ಎತ್ತಿದರು ಮತ್ತು ಸಂಸತ್ತಿನಲ್ಲಿ ತಮ್ಮ ಸೊಗಸಾದ ಭಾಷಣಗಳ ಮೂಲಕ ಆಳುವ ವರ್ಗಗಳ ಹಲವಾರು ವಿಕೃತ ಜನವಿರೋಧಿ ಮತ್ತು ಪ್ರಜಾಪ್ರಭುತ್ವ ವಿರೋಧಿ ನೀತಿಗಳನ್ನು ಬಯಲಿಗೆಳೆದರು. ಅವರು 2017ರಲ್ಲಿ ಅತ್ಯುತ್ತಮ ಸಂಸದೀಯ ಪ್ರಶಸ್ತಿಯನ್ನು ಪಡೆದರು ಎಂದು ಅದು ಹೇಳಿದೆ.

2005–2017 ರವರೆಗೆ ರಾಜ್ಯಸಭಾ ಸದಸ್ಯರಾಗಿ ಅವರು ಸಂಸತ್ತಿನಲ್ಲಿ ಶ್ರಮಜೀವಿಗಳ, ವಿಶೇಷವಾಗಿ ಕಾರ್ಮಿಕ ವರ್ಗದ ದನಿ ಎತ್ತಿದರು. ಅವರು ಸಾರ್ವಜನಿಕ ವಲಯದ ಉದ್ದಿಮೆಗಳ ಖಾಸಗೀಕರಣವನ್ನು ವಿರೋಧಿಸಿದರು ಮತ್ತು ಕೇಂದ್ರ ಸರ್ಕಾರದ ನವ ಉದಾರೀಕರಣ ನೀತಿಗಳಿಂದ ಹೊಮ್ಮಿದ ಅನೇಕ ಭ್ರಷ್ಟಾಚಾರ ಹಗರಣಗಳನ್ನು ಬಹಿರಂಗಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಅವರು ಈಗ ಆಳ್ವಿಕೆ ನಡೆಸುತ್ತಿರುವವರ ರಾಜಕೀಯವು ಪ್ರಾಯೋಜಿಸುತ್ತಿರುವ ಎಲ್ಲಾ ರೀತಿಯ ಕೋಮುವಾದ ಮತ್ತು ಕಂದಾಚಾರಗಳ ವಿರುದ್ಧ ದೃಢ ಹೋರಾಟಗಾರನ ಪಾತ್ರವನ್ನು ವಹಿಸಿದ್ದಾರೆ ಎಂದು ಸಿಐಟಿಯು ಹೇಳಿದೆ.

ಸಿಪಿಐ(ಎಂ) ನಾಯಕರಾಗಿ ಅವರು ಚುನಾವಣಾ ಬಾಂಡ್‌ಗಳ ವಿರುದ್ಧ ನ್ಯಾಯಾಲಯದಲ್ಲಿಯೂ ಹೋರಾಡಿದರು. ಬಿಜೆಪಿ ಸರ್ಕಾರವು 370ನೇ ವಿಧಿಯನ್ನು ರದ್ದುಗೊಳಿಸುವುದನ್ನು ಅವರು ಕಟುವಾಗಿ ವಿರೋಧಿಸಿದರು ಮತ್ತು ಕಾಶ್ಮೀರವನ್ನು ಜೈಲು ಮಾಡಲು ಪ್ರಯತ್ನಿಸಿದ ಸರ್ಕಾರದ ವಿರುದ್ಧದ ಹೋರಾಟದಲ್ಲಿ ಕಾಶ್ಮೀರಕ್ಕೆ ಭೇಟಿ ನೀಡಿದ ಮೊದಲ ಮುಖಂಡರು ಎಂದು ಸಿಐಟಿಯು ಹೇಳಿಕೆ ನೆನಪಿಸಿಕೊಂಡಿದೆ.

ಅವರು ತಮ್ಮ ಸಕ್ರಿಯ ರಾಜಕೀಯ ಬದುಕಿನಾದ್ಯಂತ ಸಮಾಜವಾದದ ಆದರ್ಶಗಳನ್ನು ಎತ್ತಿ ಹಿಡಿದರು ಮತ್ತು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ವೈಜ್ಞಾನಿಕ ಸಮಾಜವಾದವನ್ನು ಎತ್ತಿಹಿಡಿಯುವ ಸೈದ್ಧಾಂತಿಕ ಹೋರಾಟಕ್ಕೆ ನೇತೃತ್ವ ನೀಡಿದರು.

ವಿವಿಧ ಭಾಷೆಗಳಲ್ಲಿ ಅತ್ಯುತ್ತಮ ವಾಗ್ಮಿಯಾಗಿದ್ದ ಯೆಚೂರಿ ಸಾಮಾನ್ಯ ಕಾರ್ಮಿಕರೊಂದಿಗೂ ಮತ್ತು ಅಷ್ಟೇ ಸುಗಮವಾಗಿ ಬುದ್ಧಿಜೀವಿಗಳೊಂದಿಗೂ ಸಂವಹನ ನಡೆಸ ಬಲ್ಲವರಾಗಿದ್ದರು.

ನಮ್ಮ ರಾಷ್ಟ್ರ ರಾಜಕಾರಣದ ಪ್ರಸಕ್ತ ನಿರ್ಣಾಯಕ ಘಟ್ಟದಲ್ಲಿ ಯೆಚೂರಿಯವರ ಅಕಾಲಿಕ ನಿಧನದಿಂದ ವಿಶೇಷವಾಗಿ ಕಾರ್ಮಿಕ ವರ್ಗದ ಚಳುವಳಿಗೆ ಮತ್ತು ಪ್ರಗತಿಶೀಲ ಮೌಲ್ಯಗಳಿಗೆ ಮತ್ತು ಒಟ್ಟಾರೆ ಸಮಾಜಕ್ಕೆ ದೊಡ್ಡ ನಷ್ಟವಾಗಿದೆ ಎಂದು ಸಿಐಟಿಯು ತನ್ನ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತ ಹೇಳಿದೆ.



ಚಿತ್ರ ಕೃಪೆ: ಸತೀಶ ಆಚಾರ್ಯ, ಫೇಸ್‌ಬುಕ್

ದುಡಿಮೆಗಾರರ ಅಗ್ರಮಾನ್ಯ ನೇತಾರರು–ಎಐಕೆಎಸ್

ಕಾಮ್ರೇಡ್ ಸೀತಾರಾಮ್ ಯೆಚೂರಿ ದುಡಿಯುವ ಜನಗಳ ಒಬ್ಬ ಅಗ್ರಮಾನ್ಯ ಮುಖಂಡರಾಗಿದ್ದರು ಮತ್ತು ಅತ್ಯಂತ ಗೌರವಾನ್ವಿತ ಚಿಂತಕರಾಗಿದ್ದರು ಎಂದು ಅಖಿಲ ಭಾರತ ಕಿಸಾನ್ ಸಭಾ ಶ್ರದ್ಧಾಂಜಲಿ ಅರ್ಪಿಸುತ್ತ ಹೇಳಿದೆ.

ತನ್ನ ರಾಜಕೀಯ ಜೀವನದಾದ್ಯಂತ ಯೆಚೂರಿ ಸದಾ ಸಾಮ್ರಾಜ್ಯಶಾಹಿ ಮತ್ತು ನವ–ವಸಾಹತುಶಾಹಿಯ ಅತ್ಯಂತ ತೀಕ್ಷ್ಣ ಟೀಕಾಕಾರರಾಗಿಯೇ ಉಳಿದವರು. ತಮ್ಮ ಬದುಕಿನುದ್ದಕ್ಕೂ "ಕರ್ಷಕ ಪ್ರಶ್ನೆ"ಯನ್ನು ಬಗೆಹರಿಸಲು ತೋರಿದ ಬದ್ಧತೆ ಅವರನ್ನು ರೈತಾಪಿ ಜನಗಳಿಗೆ ಮತ್ತು ರೈತ ಆಂದೋಲನಕ್ಕೆ ಬಹಳ ಹತ್ತಿರದವರನ್ನಾಗಿ ಮಾಡಿತ್ತು. 1990ರ ದಶಕದ ಆರಂಭದಲ್ಲಿ ಆಳುವ ವರ್ಗಗಳ ವಿಭಿನ್ನ ಬಣಗಳು ಮತ್ತು ಅವರ ಬುದ್ಧಿಜೀವಿಗಳು ನವ–ಉದಾರವಾದಿ ಧೋರಣೆಗಳ ಹೇರಿಕೆಯೊಂದಿಗೆ ಶಾಮೀಲಾಗಿದ್ದಾಗ, ರೈತರು ಮತ್ತು ದುಡಿಯುವ ಜನರೊಂದಿಗೆ ಯೆಚೂರಿ ಬಂಡೆಯಂತೆ ಅಚಲರಾಗಿ ನಿಂತರು. ರಾಜಕೀಯ ಅರ್ಥಶಾಸ್ತ್ರದ ಅವರ ಆಳವಾದ ಸೈದ್ಧಾಂತಿಕ ತಿಳುವಳಿಕೆ ನವ–ಉದಾರವಾದಿ ಸುಧಾರಣೆಗಳು ರೈತರನ್ನು ವಿಧ್ವಂಸಗೊಳಿಸುತ್ತವೆ ಎಂದು ಮುಂಗಾಣುವಂತೆ ಮಾಡಿತು. "ಏಕೆ ಈ ಆರ್ಥಿಕ ಧೋರಣೆ" ಎಂಬ ಅವರ ಬಹು ಪ್ರಶಂಸಿತ ಪ್ರಬಂಧ ಸಾಮ್ರಾಜ್ಯಶಾಹಿಯ ಮತ್ತು ಏಕಸ್ವಾಮ್ಯ ಕಂಪನಿಗಳ ಸುಲಿಗೆಯ ಬಗ್ಗೆ ಬಹಳಷ್ಟು ಸ್ಪಷ್ಟತೆಯನ್ನು ಕೊಟ್ಟಿತ್ತು ಎಂದು ಎಐಕೆಎಸ್ ನೆನಪಿಸಿಕೊಂಡಿದೆ.

ಯೆಚೂರಿ ಫ್ಯಾಸಿಸ್ಟ್ ತೆರನ ಹಿಂದುತ್ವ ಶಕ್ತಿಗಳ ಉದಯಕ್ಕೂ, ಜಾಗತಿಕ ಹಣಕಾಸು ಬಂಡವಾಳದ ಉನ್ನತಿ ಮತ್ತು ಪ್ರಾಬಲ್ಯಕ್ಕೂ ಸಂಬಂಧವಿದೆ ಎಂದು ಸದಾ ಹೇಳುತ್ತಿದ್ದರು. ಹಿಂದುತ್ವ ರಥವನ್ನು ತಡೆದು ನಿಲ್ಲಿಸುವುದು ರೈತ–ಕಾರ್ಮಿಕ ಮೈತ್ರಿಯಿಂದ ಮಾತ್ರ ಸಾಧ್ಯ ಎಂದು ಅವರು ಒತ್ತಿ ಹೇಳುತ್ತಿದ್ದರು.

ಅವರು ರಾಜ್ಯಸಭಾ ಸದಸ್ಯರಾಗಿದ್ದ ಎರಡು ಅವಧಿಗಳು ದುಡಿಯುವ ಜನಗಳ ವರ್ಗ ಪ್ರಶ್ನೆಗಳು ಮೊಳಗಿದ ಅಪರೂಪದ ಅವಧಿ ಎನ್ನಿಸಿರುವ ಎಐಕೆಎಸ್ ಮೋದಿ ಆಳ್ವಿಕೆ ಕೃಷಿಯ ಕಾರ್ಪೊರೇಟೀಕರಣವನ್ನು ತೀವ್ರಗೊಳಿಸ ಬಯಸಿದಾಗ, ಸಂಸತ್ತಿನಲ್ಲೂ ಮತ್ತು ಬೀದಿಗಳಲ್ಲೂ ವಿವಿಧ ವಿರೋಧಿ ಶಕ್ತಿಗಳನ್ನು ಒಗ್ಗೂಡಿಸುವಲ್ಲಿ ಅವರು ಮುಂಚೂಣಿಯಲ್ಲಿದ್ದರು. ಒಬ್ಬ ನೈಜ ದೇಶಪ್ರೇಮಿಯಾಗಿ ಯೆಚೂರಿ ಭಾರತದ ಕೃಷಿಯನ್ನು ಬಹುಅಗ್ಗ ಬೆಲೆಯಲ್ಲಿ ಏಕಸ್ವಾಮ್ಯ ಕಂಪನಿಗಳಿಗೆ ಕೊಟ್ಟು ಬಿಡುವುದರ ವಿರುದ್ಧ ಉಗ್ರ ಹೋರಾಟ ನಡೆಸಿದರು, ಕರ್ಷಕ ಕ್ಷೇತ್ರದಲ್ಲಿನ ವೈರುಧ್ಯಗಳ ಬಗ್ಗೆ ಅವರ ಒಳನೋಟಗಳು ಕಾರ್ಪೊರೇಟ್–ವಿರೋಧಿ ರೈತ ಆಂದೋಲನಕ್ಕೆ ಬಹಳ ಪೋಷಕವಾಗಿತ್ತು ಎಂದು ಹೇಳಿದೆ.

ಸೀತಾರಾಮ್ ಯೆಚೂರಿ: ಕಾಕಿನಾಡದಿಂದ.........

ಪುಟ 10 ರಿಂದ

ವಿಶ್ವಾಸ ಇಟ್ಟವರು. ದೇಶದಲ್ಲಿ ಎಲ್ಲಿ ಹಿಂಸೆ ನಡೆದರೂ ಅದರ ವಿರುದ್ಧ ಧ್ವನಿ ಎತ್ತುವವರು.

ಯೆಚೂರಿ ಪಕ್ಷದ ಅಂತಾರಾಷ್ಟ್ರೀಯ ವಿಭಾಗದ ನೇತೃತ್ವ ವಹಿಸಿದ್ದರು. ಅನೇಕ ಸಮಾಜವಾದಿ ದೇಶಗಳಲ್ಲಿ ಪಕ್ಷದ ಮಹಾಸಭೆಗಳು ನಡೆದ ಸಂದರ್ಭದಲ್ಲಿ ಸ್ನೇಹಪರ ಪ್ರತಿನಿಧಿಯಾಗಿ ಭಾಗವಹಿಸುತ್ತಿದ್ದರು.

ರಾಜ್ಯಸಭಾ ಸದಸ್ಯರಾಗಿ

2005ರಲ್ಲಿ ಪಶ್ಚಿಮ ಬಂಗಾಳದಿಂದ ರಾಜ್ಯಸಭೆಗೆ ಯೆಚೂರಿ ಆಯ್ಕೆಯಾಗಿದ್ದರು. ಅನೇಕ ಪ್ರಮುಖ ವಿಷಯಗಳನ್ನು ಸಂಸತ್ತಿನ ಗಮನಕ್ಕೆ ತಂದವರು. ಪ್ರಮುಖ ವಿಷಯಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿದವರು. ಸಂಸತ್ತಿನ ಕಲಾಪಕ್ಕೆ ಆಗಾಗ ಅಡ್ಡಿಪಡಿಸುತ್ತಿದ್ದಾರೆ ಎಂದು ಆಡಳಿತ ಪಕ್ಷ ಟೀಕಿಸಿದಾಗ 'ಕಲಾಪಕ್ಕೆ ಅಡ್ಡಿಪಡಿಸುತ್ತಿದ್ದಾರೆ ಎಂದು ಪ್ರತಿಪಕ್ಷಗಳ ಮೇಲೆ ಆರೋಪ ಹೊರಿಸಿ ಸರಕಾರ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲಾಗದು' ಎಂದು ಉತ್ತರಿಸಿದರು. ಸಂಸತ್ತಿಗೆ ಅಡ್ಡಿಪಡಿಸುವುದು ಪ್ರಜಾಪ್ರಭುತ್ವದಲ್ಲಿ ಕಾನೂನುಬದ್ಧ ಪ್ರಕ್ರಿಯೆ ಎಂದು ಹೇಳಿದರು. ಭಾರತ–ಅಮೆರಿಕ ಅಣು ಒಪ್ಪಂದಕ್ಕಾಗಿ ಸಮಾಲೋಚನೆಗಳು ನಡೆಯುತ್ತಿರುವ ಸಮಯದಲ್ಲಿ ಅದಕ್ಕೆ ತಮ್ಮ ಪಕ್ಷ ವಿಧಿಸಿದ್ದ ಎಲ್ಲ ಷರತ್ತುಗಳನ್ನು ಯೆಚೂರಿ ರಾಜ್ಯಸಭೆಯಲ್ಲಿ ಪ್ರಸ್ತಾಪಿಸಿದರು. ಸಿಪಿಐ(ಎಂ) ಷರತ್ತುಗಳು ಪ್ರಧಾನಿ ಮನಮೋಹನ್ ಸಿಂಗ್ ಅವರಿಗೆ ಒಪ್ಪಿಗೆಯಾದವು.

ಮಾರ್ಚ್ 3, 2015 ರಂದು ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಮಾಡಿದ ಭಾಷಣಕ್ಕೆ ಯೆಚೂರಿ ತಿದ್ದುಪಡಿಯನ್ನು ಪ್ರಸ್ತಾಪಿಸಿದರು. ಅದನ್ನು ರಾಜ್ಯಸಭೆ ಅನುಮೋದಿಸಿದ್ದು ಮೋದಿ ಸರ್ಕಾರ ತಲೆತಗ್ಗಿಸುವಂತೆ ಮಾಡಿತು. ಯೆಚೂರಿ ಅವರ ಅಭಿಪ್ರಾಯವನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ವೆಂಕಯ್ಯ ನಾಯ್ಡು ಹೇಳಿದರು. ರಾಷ್ಟ್ರಪತಿಯವರ ಭಾಷಣಕ್ಕೆ ತಿದ್ದುಪಡಿ ತರಲು ಮುಂದಾಗಿರುವುದು ಸಂಪ್ರದಾಯವಲ್ಲ ಎಂದು, ಹಾಗಾಗಿ ಅದನ್ನು ಹಿಂಪಡೆಯಲು ಸೂಚಿಸಿದರು. ಎಂದಿನಂತಿದ್ದರೆ ಈ ಮನವಿಯನ್ನು ಸ್ವೀಕರಿಸುತ್ತಿದ್ದೆ, ಆದರೆ 14 ಗಂಟೆಗಳ ಚರ್ಚೆಯ ನಂತರವೂ ಸರ್ಕಾರವು ಬಗ್ಗದ ಕಾರಣಕ್ಕಾಗಿ ತಿದ್ದುಪಡಿಗೆ ಒತ್ತಾಯಿಸುತ್ತಿರುವುದಾಗಿ ಯೆಚೂರಿ ಉತ್ತರಿಸಿದರು. ರಾಷ್ಟ್ರಪತಿಗಳ ಭಾಷಣಕ್ಕೆ ಧನ್ಯವಾದ ನಿರ್ಣಯದ ಮೇಲೆ ಪ್ರತಿಪಕ್ಷಗಳು ಮಂಡಿಸಿದ ತಿದ್ದುಪಡಿಯನ್ನು ಸದನವು ಅಂಗೀಕರಿಸಿದ್ದು ರಾಜ್ಯಸಭೆಯ ಇತಿಹಾಸದಲ್ಲಿ ಇದು ನಾಲ್ಕನೇ ಬಾರಿ.

ವೈಯಕ್ತಿಕ ಜೀವನ

ಯೆಚೂರಿ ಪತ್ನಿ ಸೀಮಾ ಚಿಸ್ತಿ ಪತ್ರಕರ್ತೆ. ಅವರು 'ದಿ ವೈರ್' ಪೋರ್ಟಲ್‌ನ ಸಂಪಾದಕರಾಗಿ ಮತ್ತು ಮೊದಲು ಬಿಬಿಸಿ ಹಿಂದಿ ಸೇವೆಗಳ ಸಂಪಾದಕರಾಗಿ ಕೆಲಸ ಮಾಡಿದರು. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ದೆಹಲಿ ನಿವಾಸಿ ಸಂಪಾದಕರಾಗಿಯೂ ಸೇವೆ ಸಲ್ಲಿಸಿದ್ದರು. ಯೆಚೂರಿ ಅವರ ಪುತ್ರಿ ಅಖಿಲಾ ಯೆಚೂರಿ ಅವರು ಎಡಿನ್‌ಬರ್ಗ್ ವಿಶ್ವವಿದ್ಯಾಲಯ ಮತ್ತು ಸೇಂಟ್ ಆಂಡ್ರ್ಯೂಸ್ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕಿಯಾಗಿದ್ದಾರೆ. ಆಂಧ್ರಪ್ರದೇಶ ಸರ್ಕಾರದ ಮಾಜಿ ಮುಖ್ಯ ಕಾರ್ಯದರ್ಶಿ ಮೋಹನ್ ಕಾಂಡ ಯೆಚೂರಿ ಅವರ ಚಿಕ್ಕಪ್ಪ. ಯೆಚೂರಿ ಅವರ ಪುತ್ರ ಆಶೀಶ್ ಯೆಚೂರಿ ಅವರು ಕೋವಿಡ್‌ನಿಂದಾಗಿ ಏಪ್ರಿಲ್ 22, 2021 ರಂದು ನಿಧನರಾದರು.

2020 ರ ದೆಹಲಿ ಗಲಭೆ ಪ್ರಕರಣದಲ್ಲಿ ಯೆಚೂರಿ, ಯೋಗೇಂದ್ರ ಯಾದವ್ ಮತ್ತು ಇತರರನ್ನು ಪೂರಕ ಚಾರ್ಜ್ ಶೀಟ್‌ನಲ್ಲಿ ಸೇರಿಸಲಾಗಿದೆ. ಈ ಕುರಿತು ಪ್ರತಿಕ್ರಿಯಿಸಿದ ಯೆಚೂರಿ, ವಿರೋಧ ಪಕ್ಷಗಳನ್ನು ಗುರಿಯಾಗಿಸಲು ಬಿಜೆಪಿ ತನ್ನ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿದೆ ಎಂದು ಟೀಕಿಸಿದರು.

ಬರಹಗಾರರಾಗಿ?

ಯೆಚೂರಿ ಅವರು ಲೇಖಕರಾಗಿ ಹಲವು ಪುಸ್ತಕಗಳನ್ನು ಬರೆದಿದ್ದಾರೆ. ವಾಟ್ ಇಸ್ ದಿಸ್ ಹಿಂದೂ ರಾಷ್ಟ್ರ? (ಕನ್ನಡದಲ್ಲಿ: ಏನಿದು ಹಿಂದೂ ರಾಷ್ಟ್ರ?), ಆನ್ ಗೋಲ್ವಾಲ್ಕರ್ ಫ್ಯಾಸಿಸ್ಟ್ ಐಡಿಯಾಲಜಿ ಅಂಡ್ ಸಫ್ರಾನ್ ಬ್ರಿಗೇಡ್ಸ್ ಪ್ರಾಕ್ಟಿಸ್ (An Golwalkar Fascist Ideology and Saffron Brigades Practice), ಸೂಡೋ ಹಿಂದುಯಿಸಂ ಎಕ್ಸ್ಪೋಸಡ್ (Pseudo Hinduism Exposed), ಕೇಸರಿ ಬ್ರಿಗೇಡ್ ಪುರಾಣಗಳು ಮತ್ತು ವಾಸ್ತವ (Saffron Brigade Myths and Reality), ಇಂದು ಭಾರತೀಯ ರಾಜಕೀಯದಲ್ಲಿ ಜಾತಿ ಮತ್ತು ವರ್ಗ (Cast and Class in Indian Politics Today), ತೈಲ ಸಂಗ್ರಹದ ಕೊರತೆ ಅಥವಾ ಸೆಸ್ ಪೂಲ್ ಆಫ್ ಡಿಸಿಟ್ (Oil Pool Deficit or Cess Pool of Decit), ಬದಲಾಗುತ್ತಿರುವ ಜಗತ್ತಿನಲ್ಲಿ ಸಮಾಜವಾದ (Socialism in a Changing World), Left Hand Drive: Concrete Analysis of Concrete Conditioṇ, ಮೋದಿ ಸರ್ಕಾರ: ನ್ಯೂ ಸರ್ಜ್ ಆಫ್ ಕಮ್ಯುನಲಿಸಂ (Modi Government: New Surge of Communalism), Communalism Versus Secularism, Grina Ki Rajneeti, ಮುಂತಾದ ಪುಸ್ತಕಗಳನ್ನು ಬರೆದಿದ್ದಾರೆ. ಪೀಪಲ್ಸ್ ಡೈರಿ ಆಫ್ ಫ್ರೀಡಂ ಸ್ಟ್ರಗಲ್, ದಿ ಗ್ರೇಟ್ ರಿವಾಲ್ಟ್ ಎ ಲೆಫ್ಟ್ ಅಪ್ರೈಸಲ್, ಗ್ಲೋಬಲ್ ಎಕನಾಮಿಕ್ ಕ್ರೈಸಿಸ್: ಎ ಮಾರ್ಕ್ಸಿಸ್ಟ್ ಪರ್ಸ್ಪೆಕ್ಟಿವ್ ಎಂಬ ಪುಸ್ತಕಗಳು ಅವರ ಸಂಪಾದಕತ್ವದಲ್ಲಿ ಪ್ರಕಟವಾಗಿವೆ. ದೀರ್ಘಕಾಲ ಸಿಪಿಎಂನ ಅಧಿಕೃತ ವಾರಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯ ಸಂಪಾದಕರಾಗಿದ್ದರು.

ಕೃಪೆ: ಪ್ರಜಾಶಕ್ತಿ ಕನ್ನಡಕ್ಕೆ: ಸಿದ್ದಯ್ಯ ಸಿ.



ಪಾಶ್ಚಾತ್ಯ ಪ್ರಜಾತಂತ್ರವೀಗ ಅಸಂಬದ್ಧ ಪರಿಸ್ಥಿತಿಯಲ್ಲಿ

ಜನರನ್ನು ಎಲ್ಲ ರೀತಿಯ ಪ್ರಚಾರಗಳಿಗೆ ಒಳಪಡಿಸಿದರೂ ಸಹ, ಅವರು ಏನನ್ನು ಬಯಸುತ್ತಾರೆ ಮತ್ತು ರಾಜಕೀಯ ವ್ಯವಸ್ಥೆಯು ಏನನ್ನು ಆದೇಶಿಸುತ್ತಿದೆ ಎಂಬುದರ ನಡುವಿನ ವ್ಯತ್ಯಾಸವು ಎಲ್ಲ ಪಾಶ್ಚಾತ್ಯ ದೇಶಗಳನ್ನೂ ಬಾಧಿಸುತ್ತಿದೆ. ಈ ದೇಶಗಳು ಪ್ರಚಾರದ ಮೂಲಕ "ಭಿನ್ನಾಭಿಪ್ರಾಯವನ್ನು ಕುಶಲವಾಗಿ ನಿರ್ವಹಣೆ" ಮಾಡುತ್ತಿದ್ದ ಹಂತದಿಂದ ಭಿನ್ನಾಭಿಪ್ರಾಯವನ್ನು ಸಂಪೂರ್ಣವಾಗಿ ನಿರ್ಲಕ್ಷಿಸುವ ಹಂತಕ್ಕೆ ಪರಿವರ್ತನೆಯಾಗಿವೆ. ಮಾತ್ರವಲ್ಲ, ಪ್ರಚಾರಕ್ಕೆ ಬಗ್ಗದ ಬಹುಮತದ ಭಿನ್ನಾಭಿಪ್ರಾಯವನ್ನೂ ಸಹ ಸಂಪೂರ್ಣವಾಗಿ ನಿರ್ಲಕ್ಷಿಸುವ ಹಂತಕ್ಕೆ ಈ ದೇಶಗಳು ಬಂದಿವೆ. ಇದು ಪ್ರಜಾಪ್ರಭುತ್ವವು ದುರ್ಬಲಗೊಳ್ಳುತ್ತಿರುವ, ಒಂದು ಅಭೂತಪೂರ್ವ ನೈತಿಕ ದಿವಾಳಿತನದಿಂದ ಬಳಲುತ್ತಿರುವ ಒಂದು ಹೊಸ ಹಂತವನ್ನು ಪ್ರತಿನಿಧಿಸುತ್ತದೆ. ಇದು ಫ್ಯಾಸಿಸಂ ಬೆಳೆಯಲು ವಾತಾವರಣವನ್ನು ನಿರ್ಮಿಸುತ್ತದೆ. ಈಗಾಗಲೇ ಇದು ಪಾಶ್ಚಾತ್ಯ ಸಮಾಜಗಳಲ್ಲಿ ಅಭೂತಪೂರ್ವ ಎನ್ನುವ ಮಟ್ಟಿಗೆ ಜನರನ್ನು ನಿರ್ಬಲೀಕರಿಸಿದೆ.

ಪ್ರೊ. ಪ್ರಭಾತ್ ಪಟ್ನಾಯಕ್

ಅನು: ಕೆ.ಎಂ.ನಾಗರಾಜ್

ಮುಂದುವರೆದ ಪಾಶ್ಚಾತ್ಯ ದೇಶಗಳಲ್ಲಿ ಯುದ್ಧಾನಂತರದ ಸಮಯದಿಂದಲೂ ಅಸ್ತಿತ್ವದಲ್ಲಿರುವ ಪ್ರಜಾತಂತ್ರದ ರೀತಿ-ನೀತಿಗಳು ಇಂದು ತಲುಪಿರುವ ಅಧೋಗತಿಯ ಮಟ್ಟವನ್ನು ಹಿಂದೆಂದೂ ಕಂಡಿರಲಾಗದು. ಪ್ರಜಾಪ್ರಭುತ್ವವೆಂದರೆ ಮತದಾರರ ಆಶಯಗಳಿಗೆ ಅನುಗುಣವಾಗಿ ನೀತಿಗಳನ್ನು ರೂಪಿಸುವುದು ಮತ್ತು ಅಳವಡಿಸಿಕೊಳ್ಳುವುದು ಎಂದರ್ಥ. ನಿಜ, ಸರ್ಕಾರಗಳು ಜನರ ಆಸೆ-ಆಕಾಂಕ್ಷೆಗಳೇನು ಎಂಬುದನ್ನು ಮೊದಲು ಖಚಿತಪಡಿಸಿಕೊಂಡು, ನಂತರ ಅದಕ್ಕನುಗುಣವಾಗಿ ಕಾರ್ಯ-ನೀತಿಯನ್ನು ನಿರ್ಧರಿಸುವುದಿಲ್ಲ. ಒಂದು ಬೂರ್ಜ್ವಾ ವ್ಯವಸ್ಥೆಯಲ್ಲಿ ಸರ್ಕಾರವು ಜನರು ವ್ಯಕ್ತಪಡಿಸಿದ ಆಸೆ-ಆಕಾಂಕ್ಷೆಗಳ ಸಂಬಂಧವಾಗಿ ತಾನು ನಿರ್ಧರಿಸಿದ ನೀತಿಗಳನ್ನು ಆಳುವ ವರ್ಗದ ಹಿತಾಸಕ್ತಿಗಳಿಗೆ ಅನುಗುಣವಾಗಿ ಮಾರ್ಪಡಿಸುತ್ತದೆ. ನಂತರ, ಈ ನೀತಿಗಳು ಜನರ ಹಿತ ಕಾಯುವ ಕಾಳಜಿ ಹೊಂದಿವೆ ಎಂಬುದನ್ನು ಜನರಿಗೆ ಮನವರಿಕೆ ಮಾಡಿಕೊಡುವಲ್ಲಿ ಸರ್ಕಾರದ ಪ್ರಚಾರ ಯಂತ್ರವು ಯಶಸ್ವಿಯಾಗುತ್ತದೆ. ಈ ರೀತಿಯಲ್ಲಿ, ಜನರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಆಳುವ ವರ್ಗದ ಹಿತಾಸಕ್ತಿಯೊಂದಿಗೆ ಹೊಂದಿಸುವ ಒಂದು ಸಂಕೀರ್ಣವಾದ ಕಾರ್ಯವನ್ನು ಚತುರತೆಯಿಂದ ಸಾಧಿಸಲಾಗುತ್ತದೆ.

ಆದರೆ ಪಶ್ಚಿಮದ ದೇಶಗಳಲ್ಲಿ ಇಂದಿನ ದಿನಗಳಲ್ಲಿ ಜರುಗುತ್ತಿರುವ ವಿದ್ಯಮಾನವು ಸಂಪೂರ್ಣವಾಗಿ ಭಿನ್ನವಾಗಿದೆ. ಜನರ ಅಭಿಪ್ರಾಯವನ್ನು ಮುಸುಕುಗೊಳಿಸಲು ಮಾಧ್ಯಮಗಳ ಮೂಲಕ ನಡೆಸುವ ಎಲ್ಲ ಪ್ರಚಾರಗಳ ಹೊರತಾಗಿಯೂ, ಒಂದು ವ್ಯವಸ್ಥಿತ ರೀತಿಯಲ್ಲಿ ಸರ್ಕಾರವು ಅನುಸರಿಸುತ್ತಿರುವ ಆಳುವ ವರ್ಗಗಳ-ಪರ ನೀತಿಗಳಿಗಿಂತ ಸಂಪೂರ್ಣವಾಗಿ ಭಿನ್ನವಾದ ನೀತಿಗಳನ್ನು ಅನುಸರಿಸಬೇಕೆಂದು ಜನತೆ ಬಯಸುತ್ತದೆ. ಅಂದರೆ, ಆಳುವ ವರ್ಗವು ಬಯಸುವ ನೀತಿಗಳನ್ನು ಅನುಸರಿಸಲಾಗುತ್ತಿದೆ ಮತ್ತು ಈ ನೀತಿಗಳನ್ನು ಜನರು ಸ್ಪಷ್ಟವಾಗಿ ಮತ್ತು ವ್ಯವಸ್ಥಿತವಾಗಿ ವಿರೋಧಿಸುತ್ತಿದ್ದಾರೆ. ಮತ್ತು ಸರ್ಕಾರಕ್ಕೆ ಈ ನೀತಿಗಳನ್ನು ಬೆಂಬಲಿಸಲು ಬಹುತೇಕ ರಾಜಕೀಯ ಪಕ್ಷಗಳು ಸಾಲುಗಟ್ಟಿ ನಿಂತಿರುವುದರಿಂದ, ಅವುಗಳನ್ನು ಅನುಸರಿಸುವುದು ಸಾಧ್ಯವಾಗಿದೆ. ಅಂದರೆ, ಬಹುಪಾಲು ಮತದಾರರು ವ್ಯಕ್ತಪಡಿಸುವ ಅಭಿಪ್ರಾಯಗಳಿಗೆ ವಿರುದ್ಧವಾಗಿ ಈ ನೀತಿಗಳನ್ನು ಬಹುತೇಕ ರಾಜಕೀಯ ಪಕ್ಷಗಳು ಒಪ್ಪಿಕೊಂಡಿವೆ ಮತ್ತು ಬೆಂಬಲಿಸುತ್ತವೆ. ಹಾಗಾಗಿ, ಪ್ರಸ್ತುತ ಪರಿಸ್ಥಿತಿಯಲ್ಲಿ ಸ್ಪಷ್ಟವಾಗಿ ಎರಡು ಲಕ್ಷಣಗಳು ಕಾಣಬರುತ್ತಿವೆ. ಒಂದನೆಯದು, ಬಹುತೇಕ ರಾಜಕೀಯ ಪಕ್ಷಗಳ ನಡುವೆ ಈ ನೀತಿಗಳ ಬಗ್ಗೆ ಒಂದು ಒಮ್ಮತವಿದೆ. ಎರಡನೆಯದು, ಈ ಪಕ್ಷಗಳು ಏನನ್ನು ಒಪ್ಪಿಕೊಂಡಿವೆ ಎಂಬುದರ ಬಗ್ಗೆ ಮತ್ತು ಜನರು ಏನನ್ನು ಬಯಸುತ್ತಾರೆ ಎಂಬುದರ ನಡುವೆ ಸಂಪೂರ್ಣ ಅಸಮಂಜಸತೆ ಇದೆ. ಇಂತಹ ಒಂದು ಪರಿಸ್ಥಿತಿಯು ಬೂರ್ಜ್ವಾ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಅಭೂತಪೂರ್ವವಾಗಿದೆ. ಮೇಲಾಗಿ, ಈ ನೀತಿಗಳು ಇದೋ ಅಥವಾ ಅದೋ ಎನ್ನುವ ರೀತಿಯ ಸಣ್ಣ ಪ್ರಶ್ನೆಗಳಿಗೆ ಸಂಬಂಧಿಸಿದ ವಿಷಯವಲ್ಲ. ಇದು ಯುದ್ಧ ಮತ್ತು ಶಾಂತಿಗೆ ಸಂಬಂಧಿಸಿದ ಮೂಲಭೂತ ವಿಷಯಗಳಿಗೆ ಸಂಬಂಧಿಸಿದೆ.

ಈ ಬಗ್ಗೆ ಒಂದು ಉದಾಹರಣೆಯಾಗಿ ಅಮೆರಿಕಾದಲ್ಲಿ ಏನಾಗುತ್ತಿದೆ ಎಂಬುದನ್ನು ನೋಡೋಣ. ಲಭ್ಯವಿರುವ ಎಲ್ಲ ಅಭಿಪ್ರಾಯ ಸಂಗ್ರಹಣೆಗಳ ಪ್ರಕಾರ, ಅಮೆರಿಕದ ಬಹುಪಾಲು ಜನರು ಪ್ಯಾಲೆಸ್ಟೀನಿಯನ್ ಜನತೆಯ ವಿರುದ್ಧ ಇಸ್ರೇಲ್ ನಡೆಸುತ್ತಿರುವ ನರಮೇಧ ಯುದ್ಧದಿಂದ ದಿಗ್ಭ್ರಮೆಗೊಂಡಿದ್ದಾರೆ. ಯುದ್ಧವನ್ನು ಅಮೆರಿಕಾ ಕೊನೆಗೊಳಿಸಬೇಕೆಂದು ಅವರು ಬಯಸುತ್ತಾರೆ ವಿನಃ, ಯುದ್ಧವನ್ನು ಮುಂದುವರೆಸಲು ಇಸ್ರೇಲಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸುವುದನ್ನಲ್ಲ. ಆದರೆ, ಅಮೆರಿಕಾದ ಸರ್ಕಾರವು ಅದಕ್ಕೆ ತದ್ವಿರುದ್ಧವಾದುದನ್ನು ಮಾಡುತ್ತಿದೆ. ಈ ಯುದ್ಧವು ಹಂತ ಹಂತವಾಗಿ ವಿಸ್ತರಿಸಿ ಇಡೀ ಮಧ್ಯಪ್ರಾಚ್ಯವನ್ನು ಆವರಿಸುವ ಅಪಾಯವಿದ್ದರೂ ಸಹ. ಅಂತೆಯೇ, ಅಮೆರಿಕದ ಜನಾಭಿಪ್ರಾಯವು ಉಕ್ರೇನ್ ಯುದ್ಧದ ಮುಂದುವರಿಕೆಯನ್ನು ಬಯಸುವುದಿಲ್ಲ. ಶಾಂತಿ-ಸಂಧಾನದ ಮೂಲಕ ಆ ಸಂಘರ್ಷವು ಕೊನೆಗೊಳ್ಳುವುದನ್ನು ಜನಾಭಿಪ್ರಾಯ ಬೆಂಬಲಿಸುತ್ತದೆ. ಆದರೆ, ಅಮೆರಿಕದ ಸರ್ಕಾರವು (ಇಂಗ್ಲೆಂಡಿನ ಜೊತೆಯಲ್ಲಿ ಸೇರಿಕೊಂಡು) ಶಾಂತಿಯುತ ಇತ್ಯರ್ಥದ ಎಲ್ಲ ಸಾಧ್ಯತೆಗಳನ್ನು ವ್ಯವಸ್ಥಿತವಾಗಿ ಧ್ವಂಸಗೊಳಿಸುತ್ತದೆ. ಉಕ್ರೇನ್-ರಷ್ಯಾ ನಡುವಿನ ಮಿನ್ಸ್ಕ ಒಪ್ಪಂದಗಳಿಗೆ ತನ್ನ ವಿರೋಧವಿದೆ ಎಂಬ ಸಂದೇಶವನ್ನು ಬ್ರಿಟಿಷ್ ಪ್ರಧಾನ ಮಂತ್ರಿ ಬೋರಿಸ್ ಜಾನ್ಸನ್ ಅವರ ಮೂಲಕ ಉಕ್ರೇನ್‌ಗೆ ರವಾನಿಸುವ ಮೂಲಕ ಅಮೆರಿವು ಈ ಯುದ್ಧಕ್ಕೆ ನಾಂದಿ ಹಾಡಿತು. ಈಗಲೂ ಶಾಂತಿ ಸ್ಥಾಪನೆಗಾಗಿ ಕೆಲವು ಪ್ರಸ್ತಾಪಗಳನ್ನು ಪುಟಿನ್ ಮಾಡಿದಾಗ, ಕುರ್ಸ್ಕ್ ಆಕ್ರಮಣವನ್ನು ಪ್ರಾರಂಭಿಸುವಂತೆ ಉಕ್ರೇನನ್ನು ಅಮೆರಿಕಾ ಪ್ರಚೋದಿಸಿತು. ಈ ವಿದ್ಯಮಾನವು, ಶಾಂತಿ ನೆಲಸುವ ಎಲ್ಲ ಭರವಸೆಗಳನ್ನೂ ಕೊನೆಗೊಳಿಸಿತು.

ಒಂದು ಗಮನಾರ್ಹವಾದ ಸಂಗತಿಯೆಂದರೆ, ಜನಾಭಿಪ್ರಾಯವು ಶಾಂತಿಯನ್ನು ಬಯಸುತ್ತದೆ ಮತ್ತು ಉಕ್ರೇನ್‌ನ ಆಕ್ರಮಣಕಾರಿ ಸಾಹಸವು ಪರಮಾಣು ಯುದ್ಧವಾಗಿ ಪರಿಣಮಿಸಿ ಅದು ವಿಶ್ವವನ್ನು ಸುಟ್ಟು ಬೂದಿ ಮಾಡುತ್ತದೆ ಎಂಬ ಅಂಶದ ಹೊರತಾಗಿಯೂ, ನೆತನ್ಯಾಹು ಮತ್ತು ಝೆಲೆನ್ಸ್ಕಿ ಇವರಿಗೆ ಶಸ್ತ್ರಾಸ್ತ್ರಗಳನ್ನು ಒದಗಿಸುವ ಅಮೆರಿಕದ ನೀತಿಯನ್ನು ಆ ದೇಶದ ರಿಪಬ್ಲಿಕನ್ನರು ಮತ್ತು ಡೆಮೋಕ್ರಾಟ್‌ರು ಒಪ್ಪಿಕೊಂಡಿದ್ದಾರೆ.

ಜರ್ಮನಿಯ ಉದಾಹರಣೆ

ಜನರನ್ನು ಎಲ್ಲ ರೀತಿಯ ಪ್ರಚಾರಗಳಿಗೆ ಒಳಪಡಿಸಿದರೂ ಸಹ, ಅವರು ಏನನ್ನು ಬಯಸುತ್ತಾರೆ ಮತ್ತು ರಾಜಕೀಯ ರೂಢ ವ್ಯವಸ್ಥೆಯು ಏನನ್ನು ಆದೇಶಿಸುತ್ತಿದೆ ಎಂಬುದರ ನಡುವಿನ ಈ ವ್ಯತ್ಯಾಸವು, ಮುಂದುವರೆದ ಎಲ್ಲ ದೇಶಗಳನ್ನೂ ಬಾಧಿಸುತ್ತಿದೆ. ಉಕ್ರೇನ್ ಯುದ್ಧವು ಜರ್ಮನಿಯನ್ನು ನೇರವಾಗಿ ಮತ್ತು ಬಹಳವಾಗಿ ತಟ್ಟುತ್ತದೆ. ಏಕೆಂದರೆ, ಜರ್ಮನಿಯು ತನ್ನ ಇಂಧನದ ಅಗತ್ಯಗಳಿಗಾಗಿ ರಷ್ಯಾವನ್ನು ಸಂಪೂರ್ಣವಾಗಿ ಅವಲಂಬಿಸಿದೆ. ರಷ್ಯಾದ ಮೇಲೆ ಅಮೆರಿಕಾ ಹೇರಿದ ನಿರ್ಬಂಧಗಳು ಜರ್ಮನಿಯಲ್ಲಿ ಅನಿಲದ ಕೊರತೆಯನ್ನು ಉಂಟುಮಾಡಿವೆ. ರಷ್ಯಾದ ಬದಲಿಗೆ ಅಮೆರಿಕದಿಂದ ಆಮದು ಮಾಡಿಕೊಳ್ಳುತ್ತಿರುವ ಅನಿಲದ ಬೆಲೆಗಳು ಜರ್ಮನಿಯ ಕಾರ್ಮಿಕರ ಜೀವನಮಟ್ಟವನ್ನು ಬಲವಾಗಿ ಕೆಳಗೆ ತಳ್ಳುವಷ್ಟು ದುಬಾರಿಯಾಗಿವೆ. ಉಕ್ರೇನ್ ಯುದ್ಧವನ್ನು ತುರ್ತಾಗಿ ಕೊನೆಗೊಳಿಸುವಂತೆ ಜರ್ಮನ್ ಕಾರ್ಮಿಕರು ಒತ್ತಾಯ ಮಾಡಿದ್ದಾರೆ. ಆದರೆ, ಸೋಶಿಯಲ್ ಡೆಮೋಕ್ರಾಟ್‌ಗಳು, ಫ್ರೀಡೆಮಾಕ್ರಟ್‌ಗಳು ಮತ್ತು ಗ್ರೀನ್‌ಗಳನ್ನು ಒಳಗೊಂಡು ಆಡಳಿತ ನಡೆಸುತ್ತಿರುವ ಮೈತ್ರಿ ಕೂಟವಾಗಲಿ ಅಥವಾ ಕ್ರಿಶ್ಚಿಯನ್ ಡೆಮೋಕ್ರಾಟ್‌ಗಳು ಮತ್ತು ಕ್ರಿಶ್ಚಿಯನ್ ಸೋಷಿಯಲಿಸ್ಟ್‌ಗಳನ್ನು ಒಳಗೊಂಡಿರುವ ಮುಖ್ಯ ವಿರೋಧಿ ಕೂಟವಾಗಲಿ ಈ ಸಂಘರ್ಷವನ್ನು ಶಾಂತಿಯುತವಾಗಿ ಪರಿಹರಿಸುವಲ್ಲಿ ಕೊಂಚವೂ ಆಸಕ್ತಿ ತೋರಿಸುತ್ತಿಲ್ಲ. ಇದಕ್ಕೆ ತದ್ವಿರುದ್ಧವಾಗಿ ಜರ್ಮನಿಯ ರಾಜಕೀಯ ವ್ಯವಸ್ಥೆಯು ಜರ್ಮನಿಯ ಗಡಿಗಳಲ್ಲಿ ರಷ್ಯಾದ ಪಡೆಗಳು ಕಾಣಿಸಿಕೊಳ್ಳುವ ಭಯವನ್ನು ಹುಟ್ಟುಹಾಕುವ ಪ್ರಯತ್ನ ಮಾಡುತ್ತಿದೆ. ವಿಪರ್ಯಾಸವೆಂದರೆ, ರಷ್ಯಾದ ಗಡಿಯಲ್ಲಿರುವ ಲಿಥುವೇನಿಯಾ ದೇಶದ ಗಡಿಗಳಲ್ಲಿ ಜರ್ಮನ್ ಪಡೆಗಳು ಈಗಾಗಲೇ ಠಿಕಾಣಿ ಹೂಡಿವೆ!

ಉಕ್ರೇನ್ ಯುದ್ಧದ ಅಂತ್ಯವನ್ನು ಕಾಣುವ ಹತಾಶೆಯಲ್ಲಿ ಜರ್ಮನಿಯ ದುಡಿಯುವ ಜನರು, ಯುದ್ಧದ ವಿರುದ್ಧ ಗಟ್ಟಿಯಾಗಿ ಮಾತನಾಡುವ ನವ-ಫ್ಯಾಸಿಸ್ಟ್ ಜರ್ಮನಿಯ ಪರ್ಯಾಯದ(AfD) ಕಡೆಗೆ ತಿರುಗುತ್ತಿದ್ದಾರೆ (ಈ ಪರ್ಯಾಯವು ಎಲ್ಲಿಯಾದರೂ ಒಂದು ವೇಳೆ ಅಧಿಕಾರದ ಸನಿಹಕ್ಕೆ ಬಂದುದೇ ಆದರೆ ತಪ್ಪದೇ ಅದು ತನ್ನ ಈ ಭರವಸೆಗೆ ದ್ರೋಹ ಎಸಗುತ್ತದೆ) ಮತ್ತು ಈ ಯುದ್ಧದ ವಿಷಯದಲ್ಲಿ ತನ್ನ ಮಾತೃ ಎಡಪಕ್ಷವಾದ ಡಿ ಲಿಂಕೆ ನಿಂದ ಬೇರ್ಪಟ್ಟ ಸಹರಾ ವ್ಯಾಗೆನ್‌ನೆಕ್ಟ್‌ನ ಎಂಬ ಹೊಸ ಎಡ ಪಕ್ಷದತ್ತ ತಿರುಗುತ್ತಿದ್ದಾರೆ.

ಇದೇ ರೀತಿಯ ಭಾವನೆಗಳನ್ನು ಗಾಜಾದಲ್ಲಿ ನಡೆಯುತ್ತಿರುವ ನರಮೇಧದ ಬಗ್ಗೆಯೂ ಜರ್ಮನರು ಹೊಂದಿದ್ದಾರೆ. ಬಹುಪಾಲು ಜರ್ಮನ್ ಜನರು ಈ ನರಮೇಧವನ್ನು ವಿರೋಧಿಸುತ್ತಿರುವಾಗ, ಜರ್ಮನಿಯ ಸರ್ಕಾರವು ಇಸ್ರೇಲಿ ನರಮೇಧದ ಬಗೆಗಿನ ಎಲ್ಲ ವಿರೋಧವನ್ನೂ ಅದು "ಯೆಹೂದ್ಯ-ವಿರೋಧಿ" ಎಂಬ ನೆಲೆಯಲ್ಲಿ ವಾಸ್ತವವಾಗಿ ಅಪರಾಧೀಕರಿಸಿದೆ. ಇಸ್ರೇಲಿ ಹತ್ಯಾಕಾಂಡದ ವಿರುದ್ಧ ಪ್ರತಿಭಟಿಸಲು ಆಯೋಜಿಸಲಾಗಿದ್ದ ಸಮಾವೇಶಕ್ಕೆ ಯಾನಿಸ್ ವರೌಫಾಕಿಸ್ ಅವರಂತಹ ಅಂತಾರಾಷ್ಟ್ರೀಯ ಖ್ಯಾತಿ ಹೊಂದಿದ ಭಾಷಣಕಾರರನ್ನು ಆಹ್ವಾನಿಸಲಾಗಿತ್ತು. ಆದರೆ, ಜರ್ಮನಿಯ ಸರ್ಕಾರವು ಈ ಸಮಾವೇಶವನ್ನು ಭಗ್ನಗೊಳಿಸಿತು. ಇಸ್ರೇಲ್‌ನ ಆಕ್ರಮಣಕಾರಿ ನಿಲುವಿಗೆ ವ್ಯಕ್ತಪಡಿಸುವ ಎಲ್ಲ ವಿರೋಧವನ್ನು ಹತ್ತಿಕ್ಕಲು "ಯೆಹೂದ್ಯ-ವಿರೋಧಿ" ಅಸ್ತ್ರವನ್ನು ಬಳಕೆ ಮಾಡಲಾಗುತ್ತಿದೆ ಮತ್ತು ಇದೇ ಅಸ್ತ್ರವನ್ನು ಮುಂದುವೆರದ ಎಲ್ಲ ದೇಶಗಳೂ ವ್ಯಾಪಕವಾಗಿ ಬಳಕೆ ಮಾಡುತ್ತಿವೆ. ಬ್ರಿಟನ್‌ನಲ್ಲಿ, ಲೇಬರ್ ಪಕ್ಷದ ಮಾಜಿ ನಾಯಕ ಜೆರೆಮಿ ಕಾರ್ಬಿನ್ ಅವರನ್ನು ಅವರ ನಿಲುವು ಮೇಲ್ನೋಟದಲ್ಲಿ "ಯೆಹೂದಿ-ವಿರೋಧಿ"ಯಾಗಿ ತೋರುತ್ತದೆ ಎಂಬ ನೆಲೆಯಲ್ಲಿ ಲೇಬರ್ ಪಕ್ಷದಿಂದ ಹೊರಹಾಕಲಾಯಿತು. ಆದರೆ, ವಾಸ್ತವವಾಗಿ ಅವರು ಪ್ಯಾಲೇಸ್ಟಿನಿಯರಿಗೆ ಬೆಂಬಲ ವ್ಯಕ್ತಪಡಿಸಿದ ಕಾರಣದಿಂದಾಗಿ ಅವರನ್ನು ಪಕ್ಷದಿಂದ ಹೊರಹಾಕಲಾಯಿತು. ಇದೇ "ಯೆಹೂದಿ-ವಿರೋಧಿ" ಆರೋಪವನ್ನು ಅಮೆರಿಕದ ಯೂನಿವರ್ಸಿಟಿಗಳ ಕ್ಯಾಂಪಸ್ ಅಧಿಕಾರಿಗಳು ಆ ದೇಶವನ್ನು ಅಲ್ಲಾಡಿಸಿದ ಪ್ರತಿಭಟನೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಮೇಲೆ ಮತ್ತು ಬೋಧಕರ ಮೇಲೆ ಮಾಡಿದ್ದಾರೆ.

ಇಸ್ರೇಲಿ-ಪರ ಲಾಬ್ಬಿಯ ಹಣಪ್ರಭಾವ

ಸಾರ್ವಜನಿಕ ಅಭಿಪ್ರಾಯದ ಮೇಲೆ ನಡೆಸುವ ಇಂತಹ ಒರಟು ಸವಾರಿಯ ಮೂಲಕ ಶಾಂತಿ

ಪುಟ 15 ಕ್ಕೆ



ಫ್ರಾನ್ಸ್: ಫ್ಯಾಸಿಸ್ಟ್-ಅನುಮೋದಿತ ಪ್ರಧಾನಿ ನೇಮಕದ ವಿರುದ್ಧ ಆಕ್ರೋಶ

ಜಗದ ಸುತ್ತ

ವಸಂತರಾಜ್ ಎನ್.ಕೆ.





ತಿಂಗಳುಗಟ್ಟಲೆ ವಿಳಂಬ ಮಾಡಿದ ನಂತರ, ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅಂತಿಮವಾಗಿ ಫ್ರೆಂಚ್ ಜನರಿಗೆ "ನಿಮ್ಮ ಜನಾದೇಶ ಲೆಕ್ಕಕ್ಕಿಲ್ಲ" ಎಂದು ನೇರವಾಗಿ ಹೇಳಿದ್ದಾರೆ. ಜುಲೈ ತಿಂಗಳಲ್ಲಿ ನಡೆದ ಸಂಸತ್ತಿನ ಚುನಾವಣೆಯಲ್ಲಿ, ಜನರು ಎಡಪಂಥೀಯ ನ್ಯೂ ಪಾಪ್ಯುಲರ್ ಫ್ರಂಟ್(**NPF**) ಒಕ್ಕೂಟವನ್ನು ಮೊದಲ ಸ್ಥಾನದಲ್ಲಿ ಇರಿಸಿದ್ದನ್ನು ನಿರ್ಲಕ್ಷಿಸಿ, ಮ್ಯಾಕ್ರನ್ ಬಲಪಂಥೀಯ ವ್ಯಕ್ತಿ ಮೈಕೆಲ್ ಬಾರ್ನಿಯರ್ ಅವರನ್ನು ದೇಶದ ಮುಂದಿನ ಪ್ರಧಾನ ಮಂತ್ರಿ ಎಂದು ಹೆಸರಿಸಿದ್ದಾರೆ.

ಬಾರ್ನಿಯರ್ ನಾಲ್ಕನೇ ಸ್ಥಾನದ ಪಕ್ಷವಾದ ರಿಪಬ್ಲಿಕನ್ ಪಕ್ಷಕ್ಕೆ ಸೇರಿದ್ದಾರೆ. ಅವರು 1990ರ ದಶಕದ ಆರಂಭದಿಂದಲೂ ಹಲವಾರು ಸಚಿವ ಸಂಪುಟಗಳಲ್ಲಿ, ಪರಿಸರ ಮಂತ್ರಿ, ಯುರೋಕೂಟ ವ್ಯವಹಾರಗಳ ಮಂತ್ರಿ, ವಿದೇಶಾಂಗ ಮಂತ್ರಿ, ಕೃಷಿ ಮಂತ್ರಿ. ತೀರಾ ಇತ್ತೀಚೆಗೆ, ಅವರು ಯುರೋಪಿಯನ್ ಒಕ್ಕೂಟದ ಬ್ರೆಕ್ಸಿಟ್ ಸಮಾಲೋಚಕರಾಗಿದ್ದರು.

ಮರೀನ್ ಲೆ ಪೆನ್ ಮತ್ತು ಜೋರ್ಡಾನ್ ಬಾರ್ಡೆಲ್ಲಾ ಅವರ ಫ್ಯಾಸಿಸ್ಟ್ 'ನ್ಯಾಷನಲ್ ರ್‍ಯಾಲಿ' ಪಕ್ಷದ ವಿರುದ್ಧ ಹೋರಾಡುವೆ ಎಂದು ಹೊರಟಿದ್ದು ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಹೊಸ ಪ್ರಧಾನಿಗೆ ಅಗತ್ಯ ಬೆಂಬಲವನ್ನು ಪಡೆಯಲು, ಅದೇ ಫ್ಯಾಸಿಸ್ಟ್ ಪಕ್ಷದ ಬೆಂಬಲವನ್ನು ಪಡೆಯುವಲ್ಲಿಗೆ ಬಂದು ತಲುಪಿದ್ದಾರೆ.

ಎಡಪಂಥೀಯ ದೈನಿಕ "ಲಿಬರೇಶನ್"ನ ಸೆ. 7ರ ಸಂಚಿಕೆಯು ಪ್ರಧಾನ ಮಂತ್ರಿ ಮೈಕೆಲ್ ಬಾರ್ನಿಯರ್ ಚಿತ್ರದ ಮೇಲೆ "ಫ್ಯಾಸಿಸ್ಟ್ ಮರೀನ್ ಲೆ ಪೆನ್ ರಿಂದ ಅನುಮೋದಿಸಲಾಗಿದೆ' ಎಂಬ ಮೊಹರಿನ ಜತೆ ಪ್ರಕಟಿಸಿದೆ.

ಅಧ್ಯಕ್ಷರು ಈ ಬೇಸಿಗೆಯ ಚುನಾವಣೆಯಲ್ಲಿ ತಮ್ಮ ರಿನಾಯಸೆನ್ಸ್ ಪಕ್ಷ ಅಣಿನೆರೆಸಿದ ಎನ್ಸೆಂಬಲ್ ಕೂಟವನ್ನು ಪ್ರಮುಖ ಫ್ಯಾಸಿಸ್ಟ್–ವಿರೋಧಿ ಶಕ್ತಿಯಾಗಿ ಪ್ರಸ್ತುತಪಡಿಸಿದರು. ಆದರೆ ಈಗ ಕಾರ್ಮಿಕ ಬೆಂಬಲಿತ NPF ಅನ್ನು ಅಧಿಕಾರದಿಂದ ಹೊರಗಿಡುವ ಯೋಜನೆಯ ಭಾಗವಾಗಿ ಅವರು ಆಗಸ್ಟ್ ಅಂತ್ಯದಲ್ಲಿ ರಾಷ್ಟ್ರೀಯ ರ್‍ಯಾಲಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದಾರೆ.

ಎಲ್ಲಾ ರಾಜಕೀಯ ಸಾಮಾನ್ಯ ಜ್ಞಾನದ ವಿರುದ್ಧ, ಜೂನ್ ನಲ್ಲಿ ನಡೆದ EU ಸಂಸತ್ತಿನ ಮತದಾನದಲ್ಲಿ ರಾಷ್ಟ್ರೀಯ ರ್‍ಯಾಲಿಯು ಅತಿದೊಡ್ಡ ಏಕೈಕ ಪಕ್ಷವಾಗಿ ಹೊರಹೊಮ್ಮಿದ ನಂತರ, ಮ್ಯಾಕ್ರನ್ ಚುನಾವಣೆಗಳನ್ನು ಘೋಷಿಸಿದರು. ಹಿಂದೆ 'ನ್ಯಾಷನಲ್ ಫ್ರಂಟ್' ಎಂದು ಕರೆಯಲಾಗುತ್ತಿತ್ತು. ನಾಜಿಗಳಿಂದ ಯೆಹೂದಿ ಹತ್ಯಾಕಾಂಡ ನಡೆದೇ ಇಲ್ಲವೆಂದು ವಾದಿಸುವ ಮತ್ತು ಯೆಹೂದಿ–ವಿರೋಧಿ ಮತ್ತು ಉಗ್ರ ರಾಷ್ಟ್ರವಾದಿ ಶಕ್ತಿಗಳನ್ನು ಒಂದುಗೂಡಿಸಲು 1972ರಲ್ಲಿ ಜೀನ್–ಮೇರಿ ಲೆ ಪೆನ್ ಅವರು ಪಕ್ಷವನ್ನು ಸ್ಥಾಪಿಸಿದರು.

ಅದು ತನ್ನ ನವ–ನಾಜಿ ಬೇರುಗಳನ್ನು ಮರೆಮಾಚಲು ಪ್ರಯತ್ನಿಸಿದರೂ, ಪಕ್ಷವು ತನ್ನ ಬಲವಾದ ಜನಾಂಗೀಯವಾದಿ, ವಲಸೆ–ವಿರೋಧಿ ಧೋರಣೆಗಳನ್ನು ಉಳಿಸಿಕೊಂಡಿದೆ. ಯುರೋಪಿನ ಬೇರೆಡೆ ಇರುವ (ಉದಾಹರಣೆಗೆ ಇತ್ತೀಚೆಗೆ ಇಟಲಿಯಲ್ಲಿ ಅಧಿಕಾರ ವಹಿಸಿಕೊಂಡ) ಫ್ಯಾಸಿಸ್ಟ್ ಪಕ್ಷಗಳಂತೆ, ರಾಷ್ಟ್ರೀಯ ರ್‍ಯಾಲಿಯು ಬಂಡವಾಳಶಾಹಿ ಆಳುವ ವರ್ಗದ ನವ ಉದಾರವಾದಿ ಸಿದ್ಧಾಂತಕ್ಕೆ ತನ್ನನ್ನು ತಾನು ಹೊಂದುವಂತೆ ಮಾಡಲು ಕ್ರಮಗಳನ್ನು ತೆಗೆದುಕೊಂಡಿದೆ. ಇದು ತನ್ನ ದೀರ್ಘಕಾಲಿಕ ಯುರೋಕೂಟ ಮತ್ತು ಯೂರೋ ಕರೆನ್ಸಿ ವಿರೋಧಿ ನಿಲುವನ್ನು ಕೈಬಿಟ್ಟಿದೆ ಮತ್ತು ಅವನ್ನು ಒಪ್ಪಿಕೊಂಡಿದೆ.

ಎಡಪಂಥೀಯ NPF ಅಧಿಕಾರಕ್ಕೆ ಬರುವುದನ್ನು ತಡೆಯುವುದಾದರೆ ಮತ್ತು ದೈತ್ಯ ಕಾರ್ಪೊರೆಟ್ ಗಳನ್ನು ಖುಶ್ ಮಾಡುವುದಾದರೆ, ತಾನು ನಡುಪಂಥೀಯ ಫ್ಯಾಸಿಸ್ಟ್–ವಿರೋಧಿ ಎನ್ನುವ ಮ್ಯಾಕ್ರನ್ ಗೆ ಫ್ಯಾಸಿಸ್ಟ್ ಬೆಂಬಲವನ್ನು ಅವಲಂಬಿಸುವುದು ಸಮಸ್ಯೆಯಲ್ಲವೆಂದು ತೋರುತ್ತದೆ.

NPF ನಾಲ್ಕು ಎಡ ಪಕ್ಷಗಳ ಒಕ್ಕೂಟವಾಗಿದೆ. ಫ್ರೆಂಚ್ ಕಮ್ಯುನಿಸ್ಟ್ ಪಾರ್ಟಿ (PCF), ಲಾ ಫ್ರಾನ್ಸ್ ಇನ್ಸೌಮಿಸ್ (ಫ್ರಾನ್ಸ್ ಅನ್ಬೋಡ್, ಅಥವಾ LFI, ಜೀನ್–ಲುಕ್ ಮೆಲೆನ್ಚಾನ್ ಪಕ್ಷ), ನಡು–ಎಡಪಂಥೀಯ ಸಮಾಜವಾದಿ ಪಕ್ಷ (PS) ಮತ್ತು ಲೆಸ್ ಎಕಾಲಜಿಸ್ಟ್ಸ್ (ಹಸಿರು ಪರಿಸರವಾದಿ ಪಕ್ಷ). ಅವು ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಫ್ಯಾಸಿಸ್ಟ್ ವಿರೋಧಿ ರಂಗವನ್ನು ರೂಪಿಸಲು ಒಗ್ಗೂಡಿದ್ದವು.

ಇದು ಸಂಘಟಿತ ಕಾರ್ಮಿಕರು, ಪ್ರಗತಿಪರ ಸಾಮಾಜಿಕ ಚಳುವಳಿಗಳು, ಮಹಿಳಾ ಗುಂಪುಗಳು ಮತ್ತು ಹವಾಮಾನ ನ್ಯಾಯ ಕಾರ್ಯಕರ್ತರ ಬೆಂಬಲವನ್ನು ಹೊಂದಿತ್ತು. 150–ಅಂಶಗಳ NPF ಕಾರ್ಯಕ್ರಮವು–ದೇಶದ ಭಾರೀ ಶ್ರೀಮಂತರ ಮೇಲಿನ ಪ್ರಮುಖ ತೆರಿಗೆಗಳು, ಸಾರ್ವಜನಿಕ ಸೇವೆಗಳು ಮತ್ತು ವಸತಿಗಳಲ್ಲಿನ ಬೃಹತ್ ಹೂಡಿಕೆಗಳು, ನಿವೃತ್ತಿ ವಯಸ್ಸನ್ನು ಹೆಚ್ಚಿಸಿದ ಮ್ಯಾಕ್ರಾನ್ನ ಜನಪ್ರಿಯವಲ್ಲದ ಪಿಂಚಣಿ ಸುಧಾರಣೆಯ ರದ್ದತಿ, ಹಣದುಬ್ಬರವನ್ನು ಎದುರಿಸಲು ಬೆಲೆ ಸ್ತಂಭನ, ಯುರೋಕೂಟದ ಕಠಿಣ ನಿಯಮಗಳ ನಿರಾಕರಣೆ, ಕನಿಷ್ಠ ವೇತನದಲ್ಲಿ ಹೆಚ್ಚಳ, ಮತ್ತು ಇನ್ನಷ್ಟು ಅಂಶಗಳನ್ನು ಹೊಂದಿತ್ತು.

ಒಟ್ಟಾಗಿ, NPF ಪಕ್ಷಗಳು ಜುಲೈನಲ್ಲಿ ಚುನಾವಣಾ ಪಂಡಿತರ ಭವಿಷ್ಯವನ್ನು ಹುಸಿಗೊಳಿಸಿ, ಫ್ಯಾಸಿಸ್ಟ್ 'ರಾಷ್ಟ್ರೀಯ ರ್‍ಯಾಲಿ'ಯನ್ನು (142 ಸೀಟುಗಳು) ಮೂರನೇ ಸ್ಥಾನಕ್ಕೆ ತಳ್ಳಿದವು. ಮ್ಯಾಕ್ರನ್ ಅವರ ರಿನಾಯಸೆನ್ಸ್ ಪಕ್ಷ ಅಣಿನೆರೆಸಿದ ಎನ್ಸೆಂಬಲ್ ಕೂಟವು, ಎರಡನೇ ಸ್ಥಾನವನ್ನು (159 ಸೀಟು) ಪಡೆದುಕೊಂಡಿತು. ಮೊದಲ ಸ್ಥಾನದಲ್ಲಿದ್ದ ಕೂಟವಾದ NPF ಗೆ (180 ಸೀಟುಗಳು) ಪ್ರಧಾನಿಯಾಗಿ ನೇಮಕವಾಗುವ ಕಾನೂನುಬದ್ಧ ಹಕ್ಕನ್ನು ನೀಡಿತು. ಮತದಾರರ ಜನಾದೇಶವನ್ನು ಬಹಿರಂಗವಾಗಿ ಧಿಕ್ಕರಿಸಿ, NPF ನ ಆಯ್ಕೆಯಾದ ಲೂಸಿ ಕ್ಯಾಸ್ಟೆಟ್ಸ್ ಅವರನ್ನು ನೇಮಿಸುವುದನ್ನು ವಿಳಂಬಗೊಳಿಸಲು ಮ್ಯಾಕ್ರನ್ ತಿಂಗಳುಗಳ ಕಾಲ ಒಂದರ ನಂತರ ಒಂದರಂತೆ ನೆಪಗಳನ್ನು ಹೂಡಿದರು.

ಮ್ಯಾಕ್ರನ್ ವಕ್ತಾರರು ಕಳೆದ ವಾರ NPF ರಚಿಸಿದ ಸರ್ಕಾರವು "ತಕ್ಷಣವೇ ಅದರ ವಿರುದ್ಧ 350ಕ್ಕೂ ಹೆಚ್ಚು ಸಂಸದರ ಬಹುಮತವನ್ನು ಹೊಂದಿರುತ್ತದೆ, ಇದು ಕಾರ್ಯನಿರ್ವಹಿಸದಂತೆ ಪರಿಣಾಮಕಾರಿಯಾಗಿ ತಡೆಯುತ್ತದೆ." ಎಂದರು. ಇದರರ್ಥ NPF ಸರಕಾರಕ್ಕೆ ಮಾಕ್ರಾನ್ ಅವರ ಬೆಂಬಲವಿಲ್ಲ ಎನ್ನುವುದು. ಏಕೆಂದರೆ ಎರಡನೆಯ ಸುತ್ತಿನ ಚುನಾವಣೆಯಲ್ಲಿ ಫ್ಯಾಸಿಸ್ಟರನ್ನು ಸೋಲಿಸಲು NPF (180) ಮತ್ತು ಅದರ ಜತೆ ಸೀಟು ಹೊಂದಾಣಿಕೆ ಮಾಡಿಕೊಂಡಿದ್ದ ಮ್ಯಾಕ್ರಾನ್ ಅವರ ಎನ್ಸೆಂಬಲ್ ಕೂಟ (159)ಗಳಿಗೆ ಒಟ್ಟಾಗಿ 577 ಸದಸ್ಯರ ರಾಷ್ಟ್ರೀಯ ಅಸೆಂಬ್ಲಿಯಲ್ಲಿ (339 ಸೀಟುಗಳ) ಬಹುಮತವಿದೆ

ಹೀಗೆ ಹೇಳುವಾಗ, ಮ್ಯಾಕ್ರನ್ ನಿಜವಾಗಿಯೂ ಒಪ್ಪಿಕೊಳ್ಳುತ್ತಿದ್ದ ಸಂಗತಿಯೆಂದರೆ, ಅವರು ಕೂಟ ಫ್ಯಾಸಿಸ್ಟರೊಂದಿಗೆ ಮೈತ್ರಿ ಮಾಡಿಕೊಂಡಿದೆ ಅಂತ. 577 ಸದಸ್ಯರ ರಾಷ್ಟ್ರೀಯ ಅಸೆಂಬ್ಲಿಯಲ್ಲಿ, NPF ವಿರುದ್ಧ 350 ಸಂಸದರ ಬಹುಮತವನ್ನು ಪಡೆಯುವ ಏಕೈಕ ಮಾರ್ಗವೆಂದರೆ, ಮ್ಯಾಕ್ರನ್ ಕೂಟದ 159 ಸ್ಥಾನಗಳನ್ನು ಫ್ಯಾಸಿಸ್ಟ್ 142 ಮತ್ತು ಬಾರ್ನಿಯರ್ ನ ಬಲಪಂಥೀಯ ರಿಪಬ್ಲಿಕನ್ ಪಕ್ಷದ 61ಕ್ಕೆ (ಒಟ್ಟು 362) ಸೇರಿಸುವುದು. ಮ್ಯಾಕ್ರನ್ ಅವರು ಉಗ್ರ ಬಲಪಂಥೀಯರೊಂದಿಗೆ ಶಾಮೀಲಾಗಿದ್ದಾರೆ ಎಂದು ಆ ಸಮಯದಲ್ಲಿ ಬಹಿರಂಗವಾಗಿ ಒಪ್ಪಿಕೊಳ್ಳಲಿಲ್ಲ, ಆದರೆ ಅವರ ಸ್ವಂತ ಕಚೇರಿ ಒದಗಿಸಿದ ಗಣಿತವು ಬಾರ್ನಿಯರ್ ಅನ್ನು ಸ್ಥಾಪಿಸಲು ಲೆ ಪೆನ್ ಜೊತೆ ಸೇರಿಕೊಂಡರು ಎಂದು ತೋರಿಸುತ್ತದೆ.

2021 ರಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿರುವಾಗ ಹೊಸ ಪ್ರಧಾನಿ ತೆಗೆದುಕೊಂಡ ಉಗ್ರ ವಲಸೆ ವಿರೋಧಿ ನಿಲುವು, ನಿಸ್ಸಂದೇಹವಾಗಿ ಅವರನ್ನು ಬೆಂಬಲಿಸಲು ರಾಷ್ಟ್ರೀಯ ರ್‍ಯಾಲಿಯನ್ನು ಮನವೊಲಿಸಲು ಸಹಾಯ ಮಾಡಿತು. ಬಾರ್ನಿಯರ್ ಯಾವ ನೀತಿಗಳನ್ನು ಮುಂದಿಡುತ್ತಾರೆ ಮತ್ತು ಬಜೆಟ್ ನಲ್ಲಿ ಅವರು "ಯಾರೊಂದಿಗೆ ಯಾವ ರಾಜಿ ಮಾಡಿಕೊಳ್ಳುತ್ತಾರೆ ಎಂಬುದನ್ನು ನೋಡಲು ತನ್ನ ಪಕ್ಷವು ಕಾಯುತ್ತಿದೆ" ಎಂದು ಲೆ ಪೆನ್ ಘೋಷಿಸಿದರು.

NPF ಎಡ ಒಕ್ಕೂಟದ ಪಾಲುದಾರರೆಲ್ಲರೂ ಮೇಲಿನಿಂದ ಹರಿಯಬಿಟ್ಟ ಮ್ಯಾಕ್ರನ್ ದಂಗೆಯನ್ನು ಬಲವಾಗಿ ತಿರಸ್ಕರಿಸಿದ್ದಾರೆ.

ಫ್ರೆಂಚ್ ಕಮ್ಯುನಿಸ್ಟ್ ಪಕ್ಷದ (PCF) ಪತ್ರಿಕೆಯಾದ ಲೆ ಹ್ಯೂಮಾನಿಟೆ (L'Humanite) ನಲ್ಲಿ ಬಾರ್ನಿಯರ್ "ಹಳೆಯ ಪ್ರಪಂಚವನ್ನು ಮತ್ತು ಮ್ಯಾಕ್ರೋನಿಸ್ಟ್ ನೀತಿಯ ನಿರಂತರತೆಯನ್ನು ಪ್ರತಿನಿಧಿಸುತ್ತಾರೆ" ಎಂದು ಹೇಳಿದೆ.

PCF ಸೆನೆಟರ್ ಪಿಯರೆ ಔಜೌಲಿಯಾಸ್ ಅವರು ಬಾರ್ನಿಯರ್ ನ್ನು "ಸಾಮಾಜಿಕ ವಿರೋಧಿ ನೀತಿಯ ಸೇವೆಯಲ್ಲಿ ಸೋತ ಅಧ್ಯಕ್ಷರಿಂದ ನೇಮಕಗೊಂಡ ಅಲ್ಪಸಂಖ್ಯಾತ ಪಕ್ಷದ ಅಲ್ಪಸಂಖ್ಯಾತ ಅಭ್ಯರ್ಥಿ" ಎಂದು ಕರೆದರು. "ಈ ನೇಮಕಾತಿಯು ಪ್ರಜಾಪ್ರಭುತ್ವ ಮತ್ತು ಫ್ರೆಂಚ್ ಜನರಿಗೆ "ಭಯಾನಕ ಹೊಡೆತವಾಗಿದೆ" ಎಂದು ಅವರು ಹೇಳಿದರು.

"ನಾನು ತುಂಬಾ ಕೋಪಗೊಂಡಿದ್ದೇನೆ, ಲಕ್ಷಾಂತರ ಫ್ರೆಂಚ್ ಮತದಾರರಿಗೆ ದ್ರೋಹ ಎಸಗಲಾಗಿದೆ ಎಂದು ನಾನು ಭಾವಿಸುತ್ತೇನೆ" ಎಂದು NPF ನ ಪ್ರಧಾನಿ ಆಯ್ಕೆ ಲೂಸಿ ಕ್ಯಾಸ್ಟೆಟ್ಸ್ ಹೇಳಿದರು. "ಅಧ್ಯಕ್ಷರು ರಾಷ್ಟ್ರೀಯ ರ್‍ಯಾಲಿಯೊಂದಿಗೆ ಸಹಬಾಳ್ವೆ ನಡೆಸುತ್ತಿದ್ದಾರೆ" ಎಂದಿರುವ ಅವರು ಬಾರ್ನಿಯರ್ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡಿಸುವುದಾಗಿ ಪ್ರತಿಜ್ಞೆ ಮಾಡಿದರು.

ಗಣರಾಜ್ಯವನ್ನು ಫ್ಯಾಸಿಸಂನಿಂದ ರಕ್ಷಿಸುವ ಪ್ರಯತ್ನದಲ್ಲಿ ಬಾರ್ನಿಯರ್ ಮತ್ತು ಅವರ ಪಕ್ಷವು ಸೇರಲಿಲ್ಲ ಮತ್ತು ಮ್ಯಾಕ್ರನ್ ಅವರ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳು "ಆಡಳಿತದ ಬಿಕ್ಕಟ್ಟನ್ನು ಸೂಚಿಸುತ್ತವೆ" ಎಂದು ಸಮಾಜವಾದಿ ಪಕ್ಷದ ವಕ್ತಾರರು ಹೇಳಿದ್ದಾರೆ.

"ಮ್ಯಾಕ್ರನ್ ಅವರು ಏಳು ವರ್ಷಗಳಿಂದ ಅನುಸರಿಸುತ್ತಿರುವ ನೀತಿಯನ್ನು ಮುಂದುವರಿಸುವ ಸಾಮರ್ಥ್ಯವನ್ನು ಹೊಂದಿರುವ ತದ್ರೂಪಿಯನ್ನು ಹುಡುಕುತ್ತಿದ್ದರು" ಎಂದು ಪರಿಸರ ಪಕ್ಷದ ನಾಯಕ ಮರೀನ್ ಟೊಂಡೆಲಿಯರ್ ಹೇಳಿದರು. "ಅವರು ಅವನನ್ನು ಮೈಕೆಲ್ ಬಾರ್ನಿಯರ್" ನಲ್ಲಿ ಕಂಡುಕೊಂಡರು.

NPF ನ ಅತಿದೊಡ್ಡ ಪಕ್ಷದ ಮುಖ್ಯಸ್ಥ ಜೀನ್–ಲುಕ್ ಮೆಲೆನ್ಚೋನ್, "ಅಧ್ಯಕ್ಷರು ಚುನಾವಣೆಯನ್ನು ಕದ್ದಿದ್ದಾರೆ" ಎಂದು ಹೇಳಿದರು. ಅವರು ಬಾರ್ನಿಯರ್ ಅವರ ಹಿಂದಿನ ಕರಾಳ ದಾಖಲೆಯನ್ನು ಎತ್ತಿ ತೋರಿಸಿದರು, ➚

ಸೀತಾರಾಂ ಯೆಚೂರಿ ನಿಧನ: ಪ್ರಧಾನಿ ಮೋದಿ, ವಿಪಕ್ಷ ನಾಯಕ ರಾಹುಲ್ ಗಾಂಧಿ, ಸಿಎಂ ಸಿದ್ದರಾಮಯ್ಯ ಸೇರಿದಂತೆ ಹಲವು ಗಣ್ಯರಿಂದ ಸಂತಾಪ

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ, ಹಿರಿಯ ನಾಯಕ ಸೀತಾರಾಂ ಯೆಚೂರಿ ಅವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ಮೋದಿ, ಸೀತಾರಾಮ್ ಯೆಚೂರಿ ಎಡಪಕ್ಷಗಳ ಪ್ರಮುಖ ಬೆಳಕಾಗಿದ್ದರು. ಬೇರೆ ಬೇರೆ ರಾಜಕೀಯ ಪಕ್ಷಗಳೊಂದಿಗೂ ಸಂಪರ್ಕ ಸಾಧಿಸುವ ಸಾಮರ್ಥ್ಯಕ್ಕೆ ಹೆಸರುವಾಸಿಯಾಗಿದ್ದರು. ಪರಿಣಾಮಕಾರಿ ಸಂಸದೀಯ ಪಟುವಾಗಿಯೂ ಗುರುತಿಸಿಕೊಂಡರು ಎಂದು ಸ್ಮರಿಸಿದ್ದಾರೆ.

ಸೀತಾರಾಮ್ ಯಚೂರಿ ಅವರ ಸಾವಿನಿಂದ ಆಘಾತಕ್ಕೀಡಾಗಿದ್ದೇನೆ. ಎಡ ಸಿದ್ಧಾಂತದ ಪ್ರಖರ ಚಿಂತಕರಾಗಿದ್ದ ಯಚೂರಿ ಅವರು ಅಪ್ಪಟ ಪ್ರಜಾಪ್ರಭುತ್ವವಾದಿಯೂ ಆಗಿದ್ದರು. ಕೋಮುವಾದಿ ರಾಜಕೀಯದ ವಿರುದ್ಧ ಜಾತ್ಯತೀತ ಶಕ್ತಿಗಳ ಒಗ್ಗೂಡಿಸುವಿಕೆಯಲ್ಲಿ ಮುಖ್ಯ ಪಾತ್ರ ವಹಿಸುತ್ತಾ ಬಂದಿರುವ ಯಚೂರಿಯವರು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ರೂವಾರಿಗಳಲ್ಲೊಬ್ಬರಾಗಿದ್ದರು ಎಂದು ಸ್ಮರಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಯುಪಿಎ ಸರ್ಕಾರದ 'ಸಾಮಾನ್ಯ ಕನಿಷ್ಠ ಕಾರ್ಯಕ್ರಮ' ರಚನೆಯಲ್ಲಿಯೂ ಯೆಚೂರಿಯವರ ಪ್ರಧಾನ ಪಾತ್ರ ಇತ್ತು. ಕಳೆದ ವರ್ಷ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಸಮಾರಂಭಕ್ಕೆ ಆಗಮಿಸಿ, ಶುಭ ಹಾರೈಸಿದ್ದರು. ಈಗಿನ 'ಇಂಡಿಯಾ' ಒಕ್ಕೂಟ ಸ್ಥಾಪನೆಯಲ್ಲಿಯೂ ಅವರ ಕೊಡುಗೆ ಇದೆ. ಯಚೂರಿ ಅವರ ನಿಧನದಿಂದ ಕೋಮುವಾದ ಮತ್ತು ಬಂಡವಾಳವಾದದ ವಿರುದ್ಧದ ಹೋರಾಟಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ತಮ್ಮ ಸಂತಾಪ ಸೂಚಕ ಸಂದೇಶದಲ್ಲಿ ತಿಳಿಸಿದ್ದಾರೆ.

ಯೆಚೂರಿ ಅವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿರುವ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರು, 'ಇಂಡಿಯಾ' ಎಂಬ ಪರಿಕಲ್ಪನೆಯ ರಕ್ಷಕರಾಗಿದ್ದ ಅವರು ನಮ್ಮ ದೇಶದ ಕುರಿತು ಆಳವಾದ ಜ್ಞಾನ ಹೊಂದಿದ್ದರು. ಅವರೊಂದಿಗಿನ ಸುದೀರ್ಘ ಚರ್ಚೆಗಳ ನೆನಪುಗಳು ನನ್ನನ್ನು ಕಾಡುತ್ತಿವೆ. ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ದೊರಕಲಿ ಎಂದಿದ್ದಾರೆ.

ರಕ್ಷಣಾ ಸಚಿವ ರಾಜನಾಥ ಸಿಂಗ್, ಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹಾಗೂ ಹಲವರು ಸಂತಾಪ ವ್ಯಕ್ತಪಡಿಸಿದ್ದಾರೆ.

***

ಹಂಪಿ ಕನ್ನಡ ವಿ.ವಿಯಲ್ಲಿ ಶ್ರದ್ಧಾಂಜಲಿ

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಶ್ರದ್ಧಾಂಜಲಿ ಸಭೆ ನಡೆಯಿತು. ಯಚೂರಿ ಕುರಿತಂತೆ SFI ಸಂಘಟನೆಯ ರಾಜ್ಯ ಅಧ್ಯಕ್ಷ ಅಮರೇಶ ಕಡಗದ ಹಾಗೂ ರಾಜ್ಯ ಸಮಿತಿ ಸದಸ್ಯ ಬಸವರಾಜ ಗುಳದಾಳ ಮಾತನಾಡಿದರು. ಸಭೆಯಯಲ್ಲಿ ಹಲವರು ಸಂಶೋಧಕರು ಭಾಗಿಯಾಗಿದ್ದರು.

*****

MLPI (ರೆಡ್ ಫ್ಲ್ಯಾಗ್)
ಕರ್ನಾಟಕ ರಾಜ್ಯ ಸಮಿತಿಯಿಂದ ಶ್ರದ್ಧಾಂಜಲಿ

ಯೆಚೂರಿ ಅವರ ನಿಧನವು ಸಿಪಿಐ(ಎಂ)ಗೆ ಮಾತ್ರವಲ್ಲದೆ ನಮ್ಮ ದೇಶದ ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಶಕ್ತಿಗಳಿಗೆ ದೊಡ್ಡ ನಷ್ಟವನ್ನು ಉಂಟುಮಾಡಿದೆ, ಇದು ನಿರ್ಣಾಯಕ ಘಟ್ಟದಲ್ಲಿ ರಾಷ್ಟ್ರವು ಕೋಮುವಾದಿಗಳಿಂದ ಅತ್ಯಂತ ಗಂಭೀರ ಬೆದರಿಕೆಯನ್ನು ಎದುರಿಸುತ್ತಿದೆ. ಗಣರಾಜ್ಯವನ್ನು ನಾಶಮಾಡಲು ಪ್ರಯತ್ನಿಸುತ್ತಿರುವ ಫ್ಯಾಸಿಸ್ಟ್ ಶಕ್ತಿಗಳು, ಅವರ ಉದ್ದೇಶಪೂರ್ವಕ ಪ್ರಯತ್ನವು ವಿರೋಧ ಪಕ್ಷಗಳನ್ನು ಒಟ್ಟುಗೂಡಿಸುವಲ್ಲಿ ಮತ್ತು ಇಂಡಿಯಾ ಒಕ್ಕೂಟವನ್ನು ರೂಪಿಸುವಲ್ಲಿ ಇವರ ಮಹತ್ತರವಾದ ಕೊಡುಗೆ ನೀಡಿದೆ. ಯೆಚೂರಿ ಅವರು ಎಡಪಕ್ಷಗಳ ಏಕತೆಯನ್ನು ಪ್ರತಿಕೂಲ ಮತ್ತು ಸವಾಲುಗಳ ನಡುವೆ ಹಿಡಿದಿಡಲು, ಸಮಾನ ಶತ್ರುಗಳ ವಿರುದ್ಧ ಹೋರಾಡಲು ಎಡ ಮತ್ತು ಪ್ರಜಾಸತ್ತಾತ್ಮಕ ಪಡೆಗಳನ್ನು ಒಟ್ಟುಗೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದು ರಾಜ್ಯಕಾರ್ಯದರ್ಶಿ ಬಸವಲಿಂಗಪ್ಪ ಮತ್ತು ರಾಜ್ಯಸಮಿತಿ ಸದಸ್ಯ ಕೆ.ವಿ.ರಾಮಚಂದ್ರ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

*****

ಮಾಜಿ ಪ್ರಧಾನಿ
ಎಚ್.ಡಿ. ದೇವೇಗೌಡರ ಶ್ರದ್ಧಾಂಜಲಿ

ಸೀತಾರಾಂ ಯೆಚೂರಿ ಅವರ ನಿಧನಕ್ಕೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಸಂತಾಪ ಸೂಚಿಸಿದ್ದಾರೆ. ಅವರ ಉದ್ದೇಶ ಮತ್ತು ಪಕ್ಷಕ್ಕಾಗಿ ಅವರ ಸಮರ್ಪಣೆ ಸದಾ ಸ್ಮರಣೀಯವಾಗಿದೆ ಎಂದು ಅವರು ಹೇಳಿದ್ದಾರೆ.

ನನ್ನ ಬಹುಕಾಲದ ಗೆಳೆಯ ಮತ್ತು ಸಹೋದ್ಯೋಗಿ ಸೀತಾರಾಮ್ ಯೆಚೂರಿ ಅವರು ನಿಧನರಾಗಿದ್ದಾರೆಂದು ತಿಳಿದು ನನಗೆ ತುಂಬಾ ದುಃಖವಾಗಿದೆ. ನನ್ನ ಆಳವಾದ ಸಂತಾಪಗಳು. ಅವರ ಉದ್ದೇಶಕ್ಕಾಗಿ ಮತ್ತು ಅವರ ಪಕ್ಷಕ್ಕಾಗಿ ಅವರ ಸಮರ್ಪಣೆ ಯಾವಾಗಲೂ ಸ್ಮರಣೀಯವಾಗಿದೆ ಎಂದು ದೇವೇಗೌಡರು ಹೇಳಿದ್ದಾರೆ.

ಇದರಲ್ಲಿ ಸಲಿಂಗಕಾಮದ ಅಪರಾಧೀಕರಣದ ವಿರುದ್ಧ ಮತ ಚಲಾಯಿಸುವುದು ಮತ್ತು ಸುಮಾರು 20 ವರ್ಷಗಳ ಹಿಂದೆ ಜನಾಭಿಪ್ರಾಯ ಸಂಗ್ರಹಣೆಯನ್ನು ಅತಿಕ್ರಮಿಸಿ ಸಂಸತ್ತಿನ ಮೂಲಕ ಯುರೋಪಿಯನ್ ಸಂವಿಧಾನವನ್ನು ಹೇರುವುದು ಸೇರಿದೆ.

ಫ್ರಾನ್ಸಿನ ಅತಿದೊಡ್ಡ ಕೇಂದ್ರೀಯ ಟ್ರೇಡ್ ಯೂನಿಯನ್ CGT, ಬಾರ್ನಿಯರ್ ಅವರ ನೇಮಕಾತಿಗೆ ಬಂಡವಾಳಶಾಹಿ ವರ್ಗವನ್ನು ಜವಾಬ್ದಾರ ಮಾಡಿದೆ. ದೇಶದ ಭಾರೀ ಮಾಲಕರ ಸಂಘ 'MEDEF' ಪ್ರಧಾನ ಕಛೇರಿಯ ಹೊರಗೆ ರ‍್ಯಾಲಿ, CGT ಯೂನಿಯನ್ ಸದಸ್ಯರು "ಫ್ರಾನ್ಸ್ ಹಾಡುಹಗಲಲ್ಲೇ ಪ್ರಜಾಪ್ರಭುತ್ವದ ಅಪಹರಣವನ್ನು ಅನುಭವಿಸಿದೆ" ಎಂದು ಘೋಷಿಸಿದರು.

MEDEF ನ ಪ್ರಧಾನ ಕಚೇರಿಯ ಮುಂಭಾಗದಲ್ಲಿ "ಸಂಬಳದಲ್ಲಿ ಹೆಚ್ಚಳ" "ಪಿಂಚಣಿ ಸುಧಾರಣೆಯನ್ನು ರದ್ದುಗೊಳಿಸಿ" ಮತ್ತು ಇತರ ಕಾರ್ಮಿಕ ಘೋಷಣೆಗಳನ್ನು ಘೋಷಿಸುವ ಪೋಸ್ಟರ್ ಗಳನ್ನು ಅಂಟಿಸಿ, ತಮ್ಮ ಪ್ರತಿಭಟನೆಯನ್ನು ನಿಲ್ಲಿಸಲು ಹೊರಗೆ ಬಂದ ಸಿಬ್ಬಂದಿಯೊಂದಿಗೆ ಕಾರ್ಮಿಕರು ಹೋರಾಡಿದರು. ಕಾರ್ಮಿಕರು ಮೇಲುಗೈ ಸಾಧಿಸಿದರು, ಮತ್ತು ಪೋಸ್ಟರ್ ಗಳನ್ನು ಹಚ್ಚದೆ ಬಿಡಲಿಲ್ಲ. CGT ಯ ಪ್ರಾದೇಶಿಕ ಪ್ರಧಾನ ಕಾರ್ಯದರ್ಶಿ MEDEF ಗೆ ಹಣಕ್ಕೆ ಮರುಪಾವತಿಯಾಗಿ ಮ್ಯಾಕ್ರಾನ್ ದೇಶವನ್ನು ರಾಷ್ಟ್ರೀಯ ರ‍್ಯಾಲಿ ಕೈಯಲ್ಲಿ ಇರಿಸುತ್ತಿದ್ದಾರೆ ಎಂದು ಹೇಳಿದರು.

ಕಳೆದ ವಾರಾಂತ್ಯದಲ್ಲಿ ಮ್ಯಾಕ್ರಾನ್ ಅವರ ಪ್ರಧಾನಿ ನೇಮಕದ ನಿರ್ಧಾರವನ್ನು ಪ್ರತಿಭಟಿಸಲು NPF, CGT ಕೊಟ್ಟ ಕರೆಗೆ ಪ್ಯಾರಿಸ್ ಸೇರಿದಂತೆ ಭಾರಿ ಸ್ಪಂಧನೆ ವ್ಯಕ್ತವಾಗಿದೆ. "ಚುನಾವಣೆ ಕದ್ದ ಮ್ಯಾಕ್ರಾನ್ ತೊಲಗು", "ಅಧಿಕಾರ ಕದ್ದ ಮ್ಯಾಕ್ರಾನ್ ರಾಜೀನಾಮೆ ಕೊಡು", "ಮ್ಯಾಕ್ರಾನ್! ನಾವು ನಿನ್ನನ್ನು ಆಳಲು ಬಿಡಲ್ಲ" ಎಂಬುದು ಎಲ್ಲ ಕಡೆ ಆಕ್ರೋಶಕ್ಕೆ ತುತ್ತಾಗಿದ್ದ ಮ್ಯಾಕ್ರಾನ್ ವಿರುದ್ಧ ಪ್ರಮುಖ ಘೋಷಣೆಗಳಾಗಿದ್ದವು. ❑

ಪಾಶ್ಚಾತ್ಯ ಪ್ರಜಾತಂತ್ರವೀಗ ಅಸಂಬದ್ಧ ಪರಿಸ್ಥಿತಿ..... ಪುಟ 13 ರಿಂದ

ಮತ್ತು ಯುದ್ಧದ ಈ ಜ್ವಲಂತ ಸಮಸ್ಯೆಗಳ ಚರ್ಚೆಯನ್ನು ಸಾಮಾನ್ಯವಾಗಿ ಸಾರ್ವಜನಿಕರಿಂದ ದೂರ ಇಡಲು ಪ್ರಯತ್ನಿಸಲಾಗುತ್ತದೆ. ಉದಾಹರಣೆಗೆ, ಅಮೆರಿಕದ ಮುಂಬರುವ ಅಧ್ಯಕ್ಷೀಯ ಚುನಾವಣೆಗಳಲ್ಲಿ, ಡೊನಾಲ್ಡ್ ಟ್ರಂಪ್ ಮತ್ತು ಕಮಲಾ ಹ್ಯಾರಿಸ್ ಈ ಇಬ್ಬರೂ ಸ್ಪರ್ಧಿಗಳೂ ಇಸ್ರೇಲಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸುವ ವಿಷಯದಲ್ಲಿ ಸಹಮತ ಹೊಂದಿರುವುದರಿಂದ, ಶಸ್ತ್ರಾಸ್ತ್ರಗಳ ಪೂರೈಕೆಯ ವಿಷಯವು ಅಧ್ಯಕ್ಷೀಯ ಅಭ್ಯರ್ಥಿಗಳ ಚರ್ಚೆಯಲ್ಲಿ ಅಥವಾ ಅವರ ಪ್ರಚಾರದಲ್ಲಿ ಕಾಣಿಸಿಕೊಳ್ಳುವುದಿಲ್ಲ. ಅವರು ಭಿನ್ನಮತ ಹೊಂದಿರುವ ಕೆಲವು ಚಿಲ್ಲರೆ ವಿಷಯಗಳು ರಂಗದ ಮಧ್ಯೆ ಕಾಣಿಸಿಕೊಳ್ಳುತ್ತವೆ. ಜನರ ಮೇಲೆ ಪರಿಣಾಮ ಬೀರುವ ಹಾಗೂ ಸ್ಪರ್ಧಿಗಳಿಗಿಂತ ಭಿನ್ನವಾದ ಅಭಿಪ್ರಾಯವನ್ನು ಜನರು ಹೊಂದಿರುವ ಕೆಲವು ನಿರ್ಣಾಯಕ ವಿಷಯಗಳು ಚರ್ಚೆಗಳಲ್ಲಿ ಒಂದು ವಸ್ತುವಾಗುವುದೇ ಇಲ್ಲ.

ಭಾರೀ ಪ್ರಮಾಣದಲ್ಲಿ ಇಸ್ರೇಲ್ ನಡೆಸುತ್ತಿರುವ ಆಕ್ರಮಣಕಾರಿ ಕೃತ್ಯಗಳಿಗೆ ರಾಜಕೀಯ ವ್ಯವಸ್ಥೆಯು ನೀಡುತ್ತಿರುವ ಬೆಂಬಲದ ಹಿಂದಿರುವ ಒಂದು ಕಾರಣವೆಂದರೆ, ಅದು ಇಸ್ರೇಲ್ ಪರ ದಾನಿಗಳಿಂದ ದೇಣಿಗೆಯ ಮೂಲಕ ದೊರೆತ ಅಪಾರ ಹಣ ಬಲದ ಅಂಶವೇ. ನಿಜಕ್ಕೂ ಇದು ನಿರ್ಲಕ್ಷಿಸುವ ಅಂಶವಲ್ಲ. ಆಗಸ್ಟ್ 21ರಂದು ಡೆಲ್ಫಿ ಇನಿಶಿಯೇಟಿವ್‌ನಲ್ಲಿ ಪ್ರಕಟವಾದ ವರದಿಯ ಪ್ರಕಾರ, ಬ್ರಿಟನ್‌ನ ಹೊಸದಾಗಿ ಚುನಾಯಿತರಾದ ಲೇಬರ್ ಪ್ರಧಾನ ಮಂತ್ರಿ ಕೀರ್ ಸ್ಟಾರ್ಮರ್ ಅವರ ಮಂತ್ರಿ ಮಂಡಲದ ಅರ್ಧದಷ್ಟು ಮಂದಿ, ತಮ್ಮನ್ನು ಅಧಿಕಾರಕ್ಕೆ ತಂದ ಚುನಾವಣೆಗಳಲ್ಲಿ ಹೋರಾಡಲು ಇಸ್ರೇಲ್–ಪರ ಮೂಲಗಳಿಂದ ಹಣ ಪಡೆದಿದ್ದಾರೆ. ಇದೇ ವರದಿಯಲ್ಲಿ, ಬ್ರಿಟಿಷ್ ಸಂಸತ್ತಿನ ಮೂರನೇ ಒಂದು ಭಾಗದಷ್ಟು ಕನ್ಸರ್ವೇಟಿವ್ ಸದಸ್ಯರೂ ಸಹ ಚುನಾವಣೆಗಾಗಿ ಇಸ್ರೇಲ್ ಪರ ಮೂಲಗಳಿಂದ ಹಣವನ್ನು ಪಡೆದಿದ್ದಾರೆ ಎಂಬುದನ್ನೂ ಹೇಳಲಾಗಿದೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಇಸ್ರೇಲ್ ಪರ ಮೂಲದ ಹಣವು ಬ್ರಿಟನ್‌ನ ಎರಡೂ ಪ್ರಮುಖ ಪಕ್ಷಗಳಿಗೆ (ಲೇಬರ್ ಪಕ್ಷ ಮತ್ತು ಕನ್ಸರ್ವೇಟಿವ್ ಪಕ್ಷ) ಲಭಿಸಿದೆ. ಇದು ಇಸ್ರೇಲಿ ಆಕ್ರಮಣಕಾರಿ ಕೃತ್ಯಗಳಿಗೆ ದೊರೆಯುವ ಬೆಂಬಲವನ್ನು ಒಂದು ಉಭಯಪಕ್ಷೀಯ ವ್ಯವಹಾರವನ್ನಾಗಿ ಮಾಡಿದೆ.

ಮತ್ತೊಂದೆಡೆಯಲ್ಲಿ, ಪ್ಯಾಲೆಸ್ಟೈನ್ ಪರವಾಗಿ ನಿಲ್ಲುವವರ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಯುಎಸ್ ಕಾಂಗ್ರೆಸ್‌ನ ಸದಸ್ಯರ ಎರಡು ಪ್ರಕರಣಗಳು ವಿವರಿಸುತ್ತವೆ. ಜಮಾಲ್ ಬೌಮನ್ ಮತ್ತು ಕೋರಿ ಬುಷ್ ಎಂಬ ಇಬ್ಬರು ಕರಿಯ ಪ್ರಗತಿಪರ ಪ್ರತಿನಿಧಿಗಳು ಪ್ಯಾಲೇಸ್ಟೀನಿಯರ ಹೋರಾಟದ ಬಗ್ಗೆ ಸಹಾನುಭೂತಿ ಹೊಂದಿದ್ದಾರೆ ಮತ್ತು ಇಸ್ರೇಲಿ ನರಮೇಧವನ್ನು ಕಟುವಾಗಿ ಟೀಕಿಸುತ್ತಿದ್ದಾರೆ. ಈ ಇಬ್ಬರನ್ನೂ, ಇಸ್ರೇಲನ್ನು ಬೆಂಬಲಿಸುವುದಕ್ಕಾಗಿ ತೊಡಗಿಕೊಂಡಿರುವ AIPAC (ಅಮೇರಿಕನ್–ಇಸ್ರೇಲ್ ಸಾರ್ವಜನಿಕ ವ್ಯವಹಾರಗಳ ಸಮಿತಿ) ಎಂಬ ಒಂದು ಪ್ರಬಲ ಮತ್ತು ಪ್ರಭಾವಶಾಲಿ ಲಾಬಿಯು ಸೋಲಿಸಿತು. ಇಂತಹ ಕೆಲವು ಪ್ರಯತ್ನಗಳಿಗಾಗಿ ಅದು ಮಿಲಿಯಗಟ್ಟಲೆ ಡಾಲರ್‌ಗಳನ್ನು ಖರ್ಚು ಮಾಡುತ್ತದೆ. ಬೌಮನ್ ಅವರನ್ನು ಸೋಲಿಸಲು 17 ಮಿಲಿಯನ್ ಡಾಲರ್‌ಗಳನ್ನು ಮತ್ತು ಕೋರಿ ಬುಷ್ ವಿರುದ್ಧ ಜಾಹೀರಾತು ಪ್ರಚಾರಕ್ಕಾಗಿ 9 ಮಿಲಿಯನ್ ಡಾಲರ್‌ಗಳನ್ನು ಖರ್ಚು ಮಾಡಲಾಗಿದೆ ಎಂಬುದನ್ನು ಆಗಸ್ಟ್ 31ರ ಡೆಲ್ಫಿ ಇನಿಶಿಯೇಟಿವ್ ವರದಿ ಮಾಡಿದೆ. ಈ ಸೋಲಿಸುವ ಪ್ರಕರಣದ ಒಂದು ಕುತೂಹಲಕರ ಅಂಶವೆಂದರೆ, ಈ ಲಾಬಿಯು ಕೋರಿ ಬುಷ್ ವಿರುದ್ಧ ನಡೆಸಿದ ಅಭಿಯಾನದಲ್ಲಿ ಗಾಜಾ ವಿರುದ್ಧ ಇಸ್ರೇಲ್ ನಡೆಸಿದ ಆಕ್ರಮಣವನ್ನು ಪ್ರಸ್ತಾಪಿಸಲಿಲ್ಲ. ಏಕೆಂದರೆ, ಗಾಜಾ ಜನತೆಯ ಮೇಲೆ ಇಸ್ರೇಲ್ ನಡೆಸಿದ ದಾಳಿಯ ವಿಷಯದಲ್ಲಿ ಸಾರ್ವಜನಿಕರು ಕೋರಿ ಬುಷ್ ಅವರ ಎದುರಾಳಿಯನ್ನು ಬೆಂಬಲಿಸುವುದಿಲ್ಲ ಮತ್ತು ಅದು ಅವಳನ್ನು ಸೋಲಿಸುವ ಯೋಜನೆಯನ್ನೇ ಸೋಲಿಸಿದಂತಾಗುತ್ತದೆ ಎಂಬುದು AIPAC ಗೆ ತಿಳಿದಿತ್ತು. ಇವೆಲ್ಲವುಗಳ ಅರ್ಥವೆಂದರೆ, ಪ್ರತಿಯೊಬ್ಬ ವ್ಯಕ್ತಿಯ ಮೇಲೂ ಪರಿಣಾಮ ಬೀರುವ ಯುದ್ಧ ಮತ್ತು ಶಾಂತಿಗೆ ಸಂಬಂಧಿಸಿದ ಮೂಲಭೂತ ವಿಷಯಗಳ ಬಗ್ಗೆ ಮುಂದುವರೆದ ದೇಶದ ಜನತೆಯ ಇಚ್ಛೆಗೆ ವಿರುದ್ಧವಾದ ನಿರ್ಧಾರವನ್ನು ಪಟ್ಟಭದ್ರ ಹಿತಾಸಕ್ತಿಗಳ ಲಾಬಿಗಳಿಂದ ಹಣ ಪಡೆಯುವ ರಾಜಕೀಯ ವ್ಯವಸ್ಥೆಯು ತೆಗೆದುಕೊಳ್ಳುತ್ತದೆ.

ಈ ರೀತಿಯಲ್ಲಿ ಮುಂದುವರೆದ ದೇಶಗಳು ಪ್ರಚಾರದ ಮೂಲಕ "ಭಿನ್ನಾಭಿಪ್ರಾಯವನ್ನು ಕುಶಲವಾಗಿ ನಿರ್ವಹಣೆ" ಮಾಡುತ್ತಿದ್ದ ಹಂತದಿಂದ ಭಿನ್ನಾಭಿಪ್ರಾಯವನ್ನು ಸಂಪೂರ್ಣವಾಗಿ ನಿರ್ಲಕ್ಷಿಸುವ ಹಂತಕ್ಕೆ ಪರಿವರ್ತನೆಯಾಗಿವೆ. ಮಾತ್ರವಲ್ಲ, ಪ್ರಚಾರಕ್ಕೆ ಬಗ್ಗದ ಬಹುಮತದ ಭಿನ್ನಾಭಿಪ್ರಾಯವನ್ನೂ ಸಹ ಸಂಪೂರ್ಣವಾಗಿ ನಿರ್ಲಕ್ಷಿಸುವ ಹಂತಕ್ಕೆ ಈ ದೇಶಗಳು ಬಂದಿವೆ ಎಂಬುದು ಸಾಬೀತಾಗುತ್ತದೆ. ಇದು ಪ್ರಜಾಪ್ರಭುತ್ವವು ದುರ್ಬಲಗೊಳ್ಳುತ್ತಿರುವ ಒಂದು ಹೊಸ ಹಂತವನ್ನು ಪ್ರತಿನಿಧಿಸುತ್ತದೆ ಮತ್ತು ರಾಜಕೀಯ ವ್ಯವಸ್ಥೆಯು ಒಂದು ಅಭೂತಪೂರ್ವ ನೈತಿಕ ದಿವಾಳಿತನದಿಂದ ಬಳಲುತ್ತಿದೆ ಎಂಬುದನ್ನು ಒತ್ತಿ ಹೇಳುತ್ತದೆ. ರೂಢಿಯಲ್ಲಿರುವ ರಾಜಕೀಯ ವ್ಯವಸಯಲ್ಲಿ ಕಾಣುತ್ತಿರುವ ನೈತಿಕ ದಿವಾಳಿತನವು ಫ್ಯಾಸಿಸಂನ ಬೆಳವಣಿಗೆಯ ವಾತಾವರಣವನ್ನು ನಿರ್ಮಿಸುತ್ತದೆ. ನಿಜಕ್ಕೂ ಫ್ಯಾಸಿಸಂ ಅಧಿಕಾರಕ್ಕೆ ಬರುತ್ತದೋ ಇಲ್ಲವೋ ಎಂಬುದು ಬೇರೆಯ ವಿಷಯ. ಆದರೆ, ಮುಂದುವರೆದ ಸಮಾಜಗಳಲ್ಲಿ ದುರ್ಬಲಗೊಳ್ಳುತ್ತಿರುವ ಪ್ರಜಾಪ್ರಭುತ್ವವು ಈಗಾಗಲೇ ಅಭೂತಪೂರ್ವ ಎನ್ನುವ ಮಟ್ಟಿಗೆ ಜನರನ್ನು ನಿರ್ಬಲೀಕರಿಸಿದೆ. ❑

NEW No. MAG(3)/NPP/205/2021-2022
JANASHAKTHI KANNADA VARA PATRIKE September 16-22, 2024 Price: Rs. 10/- Date of Publication: 13 September 2024 RNI No. KARKAN /2006/17926 Posted on 18-09-2024
Posted at BG PSO, BG - 560026 **Posted at Periodical Rate -** Rs. 2

ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ನಾಯಕರಿಂದ ಶ್ರದ್ಧಾಂಜಲಿ

ನೆನಪುಗಳನ್ನು ಹಂಚಿಕೊಂಡ ವಿದೇಶಿ ಪ್ರತಿನಿಧಿಗಳು



ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಅವರಿಗೆ ಹಲವು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ನಾಯಕರು ಶ್ರದ್ಧಾಂಜಲಿ ಸಲ್ಲಿಸಿದರು. ಶನಿವಾರ ಬೆಳಗ್ಗೆ ಎಕೆಜಿ ಭವನಕ್ಕೆ ತಲುಪಿದ ಇವರು ಯೆಚೂರಿ ಅವರ ಪಾರ್ಥಿವ ಶರೀರಕ್ಕೆ ಪುಷ್ಪನಮನ ಸಲ್ಲಿಸಿ ಅಂತಿಮ ನಮನ ಸಲ್ಲಿಸಿದರು. ನೇಪಾಳದ ಮಾಜಿ ಪ್ರಧಾನಿ ಮಾಧವ್ ಕುಮಾರ್ ನೇಪಾಳ್, ಭಾರತದಲ್ಲಿರುವ ಚೀನಾ ರಾಯಭಾರಿ ಝೂ ಹೈಹಾಂಗ್, ರಷ್ಯಾ ರಾಯಬಾರಿ ಡೆನಿಸ್ ಅಲಿಪೋವ್, ವಿಯೆಟ್ನಾಂ ರಾಯಭಾರಿ ಗುಯೆನ್ ಥಾನ್ ಹೈ, ಸಿರಿಯಾ ರಾಯಭಾರಿ ಡಾಕ್ಟರ್ ಬಾಸಿಮ್ ಅಲ್ ಖತೀಬ್, ಪ್ಯಾಲೆಸ್ತೀನ್ ರಾಯಭಾರಿ ಅದ್ನಾನ್ ಅಬು ಅಲ್ಹೈಯ್ಯಾ, ಕ್ಯೂಬಾದ ರಾಯಭಾರಿ (ಚಾರ್ಜ್ ಡಿ ಎಫ್ತರ್ಸ್) ಅಬೆಲ್ ಅಬೆಲ್ಲೆ ಅಂತಿಮ ನಮನ ಸಲ್ಲಿಸಿ ಸಂದರ್ಶಕರ ಡೈರಿಯಲ್ಲಿ ತಮ್ಮ ನೆನಪುಗಳನ್ನು ಹಂಚಿಕೊಂಡರು.

ವಿದೇಶಿ ಗಣ್ಯರ ಸಂತಾಪ

ರಷ್ಯಾ ರಾಯಭಾರಿ ಡೆನಿಸ್ ಅಲಿಪೋವ್ ಭಾರತ–ರಷ್ಯಾ ಸ್ನೇಹ ಸಂಬಂಧವನ್ನು ಬಲಪಡಿಸಲು ಸೀತಾರಾಮ್ ಯೆಚೂರಿ ವಿಶೇಷ ಪ್ರಯತ್ನ ಮಾಡಿದ್ದಾರೆ ಎಂದು ಹೇಳಿದರು. ದಶಕಗಳ ಕಾಲ ಯೆಚೂರಿಗೆ ವೈಯಕ್ತಿಕವಾಗಿ ನಿಕಟರಾಗಿದ್ದೇನೆಂದು, ಅವರ ಅಕಾಲಿಕ ನಿರ್ಗಮನವು ದೊಡ್ಡ ನಷ್ಟವಾಗಿದೆ ಎಂದು ಡೆನಿಸ್ ಅಲಿಪೋವ್ ಹೇಳಿದರು. ಸರ್ವಾಧಿಕಾರದ ವಿರುದ್ಧ ನೇಪಾಳಿ ಜನರು ನಡೆಸುತ್ತಿರುವ ಹೋರಾಟಗಳಿಗೆ ಉತ್ತಮ ಬೆಂಬಲ ನೀಡಿದ ನಾಯಕ ಯೆಚೂರಿ ಎಂದು ಮಾಧವ್ ಕುಮಾರ್ ತಮ್ಮ ನೇಪಾಳ ವಿಸಿಟರ್ಸ್ ಡೈರಿಯಲ್ಲಿ ಬರೆದಿದ್ದಾರೆ.

ಸಿರಿಯಾದ ರಾಯಭಾರಿ ಬಾಸಿಮ್ ಅಲ್ ಖತೀಬ್ ಯೆಚೂರಿ ಅವರು ಸಿರಿಯಾದ ಹಿತೈಷಿ, ಆತ್ಮೀಯ ಸ್ನೇಹಿತ ಎಂದರು. ತಮ್ಮ



ಸೈದ್ಧಾಂತಿಕ ನಿಲುವನ್ನು ಅಸ್ತ್ರವನ್ನಾಗಿ ಮಾಡಿಕೊಂಡು ದುರ್ಬಲ ವರ್ಗದವರ ಪರ ಹೋರಾಡಿದ ನಾಯಕರಾಗಿದ್ದು, ಅಂತಹ ಬಂಧುಗಳನ್ನು ಕಳೆದುಕೊಂಡಾಗ ಬದುಕು ದುಸ್ತರವಾಗಿದೆ ಎಂಬ ವಾಸ್ತವತೆ ಬಯಲಾಗುತ್ತದೆ ತಿಳಿಸಿದರು. ಚೀನಾದ ಜನರ ಅತ್ಯಂತ ಆತ್ಮೀಯ ಸ್ನೇಹಿತ ಯೆಚೂರಿ ಅವರ ಅಕಾಲಿಕ ಮರಣಕ್ಕೆ ಚೀನಾ ರಾಯಭಾರಿ ಝೂ ಹೈಹಾಂಗ್ ತೀವ್ರ ದುಃಖ ವ್ಯಕ್ತಪಡಿಸಿದರು. ಭಾರತ–ಚೀನಾ ಸಂಬಂಧವನ್ನು ಬಲಪಡಿಸಲು ಯೆಚೂರಿ ನೀಡಿದ ಅಮೂಲ್ಯ ಶ್ರಮ ಎಂದಿಗೂ ನೆನಪಿನಲ್ಲಿ ಉಳಿಯುತ್ತದೆ ಎಂದರು.



ಸಾಮೂಹಿಕ ಸಂಘಟನೆಗಳಿಂದ ಶ್ರದ್ಧಾಂಜಲಿ

ಸಿಐಟಿಯು ಅಖಿಲ ಭಾರತ ಅಧ್ಯಕ್ಷೆ ಕೆ. ಹೇಮಲತಾ, ಎಐಕೆಎಸ್ ಪ್ರಧಾನ ಕಾರ್ಯದರ್ಶಿ ವಿಜೂ ಕೃಷ್ಣನ್, ಎಐಎಡಬ್ಲ್ಯುಯು ಪ್ರಧಾನ ಕಾರ್ಯದರ್ಶಿ ಬಿ. ವೆಂಕಟ್, ಐದ್ವಾ ಪ್ರಧಾನ ಕಾರ್ಯದರ್ಶಿ ಮರಿಯಮ್ ದಾವಳೆ, ಖಜಾಂಚಿ ಎಸ್.ಪುಣ್ಯವತಿ, ಡಿವೈಎಫ್ಐ ಪ್ರಧಾನ ಕಾರ್ಯದರ್ಶಿ ಹಿಮಾಗ್ನಾ ಭಟ್ಟಾಚಾರ್ಯ, ಎಸ್ಎಫ್ಐ ಅಖಿಲ ಭಾರತ ಅಧ್ಯಕ್ಷ ವಿ.ಪಿ.ಸಾನು, ಪ್ರಧಾನ ಕಾರ್ಯದರ್ಶಿ ಮಯೂಖ್ ಬಿಸ್ವಾಸ್ ಪುಷ್ಪನಮನ ಸಲ್ಲಿಸಿದರು. ಸಹಮತ್, ಜನನಾಟ್ಯ ಮಂಚ್, ಜನಸಂಸ್ಕೃತಿ ಹಾಗೂ ವಿಶ್ವ ಮಲಯಾಳಿ ಅಸೋಸಿಯೇಷನ್ ಕಾರ್ಯಕರ್ತರು ಶ್ರದ್ಧಾಂಜಲಿ ಸಲ್ಲಿಸಿದರು.

ಸಿಪಿಎಂ ಮುಖಂಡರು...

ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್, ಪಿಣರಾಯಿ ವಿಜಯನ್, ಬೃಂದಾ ಕಾರಟ್, ಮಾಣಿಕ್ ಸರ್ಕಾರ್, ಬಿ.ವಿ.ರಾಘವುಲು, ಎಂ.ಎ.ಬೇಬಿ, ಸುಭಾಷಿಣಿ ಅಲಿ, ಮಹಮ್ಮದ್ ಸಲೀಂ, ಅಶೋಕ್ ಧಾವ್ಲೆ, ರಾಮಚಂದ್ರದೋಮ್, ತಪನ್ ಸೇನ್, ಜಿ.ರಾಮಕೃಷ್ಣನ್, ನೀಲೋತ್ಪಾಲ್ ಬಸು, ಎ.ವಿಜಯರಾಘವನ್, ಎಂ.ವಿ.ಗೋವಿಂದನ್ ಶ್ರದ್ಧಾಂಜಲಿ ಸಲ್ಲಿಸಿದರು. ಹಿರಿಯ ನೇತಾರರಾದ ಬಿಮನ್ ಬೋಸ್, ಹನನ್ ಮೊಲ್ಲಾ, ಪಿ.ಕರುಣಾಕರನ್, ಕೇರಳದಿಂದ ಕೇಂದ್ರ ಸಮಿತಿ ಸದಸ್ಯರಾದ ಇ.ಪಿ.ಜಯರಾಜನ್, ಟಿ.ಎಂ.ಥಾಮಸ್ ಐಸಾಕ್, ಪಿ.ಕೆ.ಶ್ರೀಮತಿ, ಕೆ.ಕೆ.ಸೈಲಜಾ ಮತ್ತಿತರರು ಬಂದಿದ್ದರು. ರಾಜ್ಯ ಸರ್ಕಾರದ ಪರವಾಗಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಪುಷ್ಪಮಾಲೆ ಹಾಕಿ ಶ್ರದ್ಧಾಂಜಲಿ ಸಲ್ಲಿಸಿದರು. ಸಿಪಿಎಂ ಸಂಸದರಾದ ಕೆ.ರಾಧಾಕೃಷ್ಣನ್, ಅಮ್ರರಾಮ್, ಎಸ್.ವೆಂಕಟೇಶನ್, ಸಚ್ಚಿತಾನಂದಂ, ಜಾನ್ ಬ್ರಿಟಾಸ್, ವಿ.ಶಿವದಾಸನ್ ಮತ್ತು ಎ.ಎ.ರಹೀಮ್ ಪುಷ್ಪಗುಚ್ಛಗಳನ್ನು ಇಟ್ಟರು. ಕೇರಳದ ಸಚಿವರಾದ ಕೆ.ಎನ್.ಬಾಲಗೋಪಾಲ್, ಕೆ.ಕೆ. ಶೈಲಜಾ ಟೀಚರ್, ಪಿ.ರಾಜೀವ್, ಸಾಜಿ ಚೆರಿಯನ್, ಮೊಹಮ್ಮದ್ ರಿಯಾಜ್, ಎಂ.ಬಿ.ರಾಜೇಶ್, ವಿ.ಎನ್.ವಾಸವನ್, ಆರ್.ಬಿಂದು, ರಾಮಚಂದ್ರನ್ ಕಾಡನಪಲ್ಲಿ, ಸ್ಪೀಕರ್ ಎ.ಎನ್.ಶಂಶೀರ್ ಮತ್ತಿತರರು ಶ್ರದ್ಧಾಂಜಲಿ ಸಲ್ಲಿಸಿದರು. ಹಿರಿಯ ನಾಯಕ ವಿ.ಎಸ್.ಅಚ್ಯುತಾನಂದನ್ ಅವರ ಪರವಾಗಿ ಅವರ ಪುತ್ರ ವಿ.ಎ.ಅರುಣಕುಮಾರ್ ಪುಷ್ಪಗುಚ್ಛ ಅರ್ಪಿಸಿದರು.





ರಾಷ್ಟ್ರ ನಾಯಕರು.. ಸೆಲೆಬ್ರಿಟಿಗಳು

ಅಂತಿಮ ನಮನ ಸಲ್ಲಿಸಲು ಹಲವು ರಾಷ್ಟ್ರೀಯ ನಾಯಕರು ಹಾಗೂ ಸಮಾಜದ ವಿವಿಧ ಕ್ಷೇತ್ರಗಳ ಮುಖಂಡರು ಎಕೆಜಿ ಭವನದಲ್ಲಿ ಸೇರಿದ್ದರು. ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ, ಅಶೋಕ್ ಗೆಹ್ಲೋಟ್, ಕಾಂಗ್ರೆಸ್ ನಾಯಕರಾದ ಪಿ. ಚಿದಂಬರಂ, ಜೈರಾಮ್ ರಮೇಶ್, ರಾಜೀವ್ ಶುಕ್ಲಾ, ಸಚಿನ್ ಪೈಲಟ್, ಮಣಿಶಂಕರ್ ಅಯ್ಯರ್, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜಾ, ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್, ಮಾಜಿ ಉಪಾಧ್ಯಕ್ಷ ಹಮೀದ್ ಅನ್ಸಾರಿ, ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್, ಡಿಎಂಕೆ ನಾಯಕರಾದ ಉದಯನಿಧಿ ಸ್ಟಾಲಿನ್, ದಯಾನಿಧಿ ಮಾರನ್, ಟಿ.ಆರ್. ಬಾಲು, ಕನಿಮೋಳಿ, ಮಹಾರಾಷ್ಟ್ರ ವಿರೋಧ ಪಕ್ಷದ ನಾಯಕ ವಿಜಯ್ ವಡೆಟಿವಾರ್, ಪ್ರಬೀರ್ ಪುರ್ಕಾಯಸ್ಥ, ಎಎಪಿ ನಾಯಕರಾದ ಮನೀಶ್ ಸಿಸೋಡಿಯಾ, ಸಂಜಯ್ ಸಿಂಗ್, ರಾಘವ್ ಚಡ್ಡಾ, ಆರ್‌ಜೆಡಿ ನಾಯಕ ಮನೋಜ್ ಕುಮಾರ್ ಝಾ, ಸಿಪಿಐ (ಎಂಎಲ್) ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ, ಫಾರ್ವರ್ಡ್ ಬ್ಲಾಕ್ ಪ್ರಧಾನ ಕಾರ್ಯದರ್ಶಿ ಜಿ.ದೇವರಾಜನ್, ಆರ್‌ಎಸ್‌ಪಿ ಪ್ರಧಾನ ಕಾರ್ಯದರ್ಶಿ ಮನೋಜ್ ಭಟ್ಟಾಚಾರ್ಯ, ಕೇರಳ ಕಾಂಗ್ರೆಸ್ ನಾಯಕ ಜೋಸ್ ಕೆ. ಮಣಿ, ಲೋಕಸಭೆಯ ಮಾಜಿ ಪ್ರಧಾನ ಕಾರ್ಯದರ್ಶಿ ಪಿಡಿಟಿ ಆಚಾರಿ, ಮಾಜಿ ಮುಖ್ಯ ಮಾಹಿತಿ ಆಯುಕ್ತ ವಜಾಹತ್ ಹಬೀಬುಲ್ಲಾ, ಇತಿಹಾಸ ತಜ್ಞರಾದ ರೊಮಿಲಾ ಥಾಪರ್, ಪ್ರೊಫೆಸರ್ ಜಿ.ಎನ್.ಸಾಯಿಬಾಬಾ, ಸ್ವರಾಜ್ ಅಭಿಯಾನ್ ಯೋಗೇಂದ್ರ ಯಾದವ್, ಹಿರಿಯ ವಕೀಲ ಕಪಿಲ್ ಸಿಬಲ್, ಯೆಚೂರಿ ಅವರ ಮಾಜಿ ಪತ್ನಿ ಇಂದ್ರಾಣಿ ಮಜುಂದಾರ್ ಮತ್ತು ವಿವಿಧ ದೇಶಗಳ ರಾಯಭಾರಿಗಳು ಆಗಮಿಸಿ ಗೌರವ ಸಲ್ಲಿಸಿದರು.

ಮುಸ್ಲಿಂ ಲೀಗ್ ಸಂಸದರಾದ ಪಿ.ಕೆ.ಕುನ್ಹಾಲಿಕುಟ್ಟಿ, ಇ.ಟಿ.ಮೊಹಮ್ಮದ್ ಬಶೀರ್, ಹ್ಯಾರಿಸ್ ಬಿರಾನ್, ಸಿಪಿಐ ಸಂಸದರಾದ ಪಿ.ಸಂತೋಷ್ ಕುಮಾರ್, ಪಿ.ಪಿ.ಸುನೀರ್, ಮಹಿಳಾ ಫೆಡರೇಷನ್ ರಾಷ್ಟ್ರೀಯ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಅಣ್ಣಿರಾಜ, ಐಎನ್‌ಎಲ್ ಪ್ರಧಾನ ಕಾರ್ಯದರ್ಶಿ ಸುಲೈಮಾನ್ ಸೇಠ್, ದೆಹಲಿ ಆರ್ಚ್ ಬಿಷಪ್ ಅನಿಲ್ ಕುಟೊ, ಶಾಂತಿಗಿರಿ ಆಶ್ರಮದ ಪ್ರಧಾನ ಕಾರ್ಯದರ್ಶಿ ಸ್ವಾಮಿ ಗುರುರತ್ನಂ ಜ್ಞಾನ ತಪಸ್ಸಿ, ಜಮಾತ್ ಇಸ್ಲಾಮಿ ಅಮೀರ್ ಟಿ ಆರಿಫ್ ಅಲಿ, ಪ್ರೊ. ಕೆ.ವಿ.ಥಾಮಸ್ ಹಾಗೂ ಮಾಜಿ ಕೇಂದ್ರ ಸಚಿವ ಸುರೇಶ್ ಪ್ರಭು ಕೂಡ ಶ್ರದ್ಧಾಂಜಲಿ ಸಲ್ಲಿಸಿದರು.

ವೈಸಿಪಿ ಸಂಸದ ವಿಜಯ ಸಾಯಿ ರೆಡ್ಡಿ, ಬಿಆರ್‌ಎಸ್ ಸಂಸದ ಕೆ.ಆರ್.ಸುರೇಶ್ ರೆಡ್ಡಿ, ಕಾಂಗ್ರೆಸ್ ಮುಖಂಡರಾದ ಜೆ.ಡಿ.ಶೀಲಂ, ಚಿಂತಾ ಮೋಹನ್, ಸಾಮಾಜಿಕ ಕಾರ್ಯಕರ್ತ ಬೇಜಿವಾಡ ವಿಲ್ಸನ್, ಎಂಆರ್‌ಪಿಎಸ್ ಅಧ್ಯಕ್ಷ ಮಂದಕೃಷ್ಣ ಮಾದಿಗ ಸೇರಿದಂತೆ, ಆಂಧ್ರ ಮತ್ತು ತೆಲಂಗಾಣ ರಾಜ್ಯಗಳ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಮತ್ತು ಸಾಮಾಜಿಕ ಕಾರ್ಯಕರ್ತರು ಸೀತಾರಾಂ ಯೆಚೂರಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**